ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ




Blog :janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 25 ಜೂನ್ 19, 2011 ರೂ. 5/- ಪುಟ 16





ಕಪ್ಪು ಹಣದ ವಿರುದ್ಧ ಹೋರಾಟದ ಪ್ರಹಸನ



ರಾಮದೇವರ ಘೋರ ಲೀಲೆಗಳು ▶ 8–9

ಬಿಜೆಪಿ ಸರ್ಕಾರದ 3 ವರ್ಷಗಳು



ಅದಃಪತನಕ್ಕೆ ತಳ್ಳಿರುವುದೇ ಸಾಧನೆ

▼ 5

ವೈದ್ಯಕೀಯ ಸ್ನಾತಕೋತ್ತರ ಶಿಕ್ಷಣ ಹಗರಣಗಳ ಮೇಲೆ ಹಗರಣ

ಪೆರುಗೆ



ಈಗ ಎಡಪಂಥೀಯ ಅಧ್ಯಕ್ಷ ▶ 14

ಜನಶಕ್ತಿ
ಕನ್ನಡ ವಾರಪತ್ರಿಕೆ

ಪಶ್ಚಿಮಬಂಗಾಳ

ವಿಧಾನಸಭಾ ಚುನಾವಣಾ ಫಲಿತಾಂಶಗಳ ನಂತರ ತೃಣಮೂಲ ಗೂಂಡಾಗಿರಿಗೆ ಹತ್ತು ಜನ ಎಡರಂಗ ಕಾರ್ಯಕರ್ತರು ಬಲಿಯಾಗಿದ್ದಾರೆ. ನೂರಾರು ಮಂದಿ ಗಾಯಗೊಂಡಿದ್ದಾರೆ.... ಹಿಂಸೆ, ಹಲ್ಲೆ ಮುಂದುವರಿದಿದೆ.

ಎಡ ಕಾರ್ಯಕರ್ತರ ಮೇಲೆ ಮುಂದುವರಿದ ಬರ್ಬರ ದಾಳಿಗಳು

ಸಿಮ್ಮಿಸಿ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳಿಗೆ ಸೋಲಾಗಿದೆ. ಹೌದು, ಈ ಸೋಲನ್ನು ಎಡಪಕ್ಷಗಳೂ ಸ್ವೀಕರಿಸಿವೆ. ಈ ಸೋಲಿನ ಹಿಂದಿರುವ ಕಾರಣಗಳ ಬಗ್ಗೆ ಗಂಭೀರ ಆತ್ಮಾವಲೋಕನ ನಡೆಸಿದೆ.

ಇದೇ ವೇಳೆ, ಫಲಿತಾಂಶ ಹೊರ ಬೀಳುತ್ತಿದ್ದಂತೆ ಎಡಪಕ್ಷಗಳ ಮೇಲೆ, ಅದರಲ್ಲೂ ಮುಖ್ಯವಾಗಿ ಸಿಪಿಐ(ಎಂ)ನ್ನು ಕೇಂದ್ರೀಕರಿಸಿ ಕೊಂಡು ದೊಡ್ಡ ಮಟ್ಟದಲ್ಲಿ ದಾಳಿ ಆರಂಭ



ಬರ್ಧ್ವಾನ್ ಜಿಲ್ಲೆಯ ಜಮಲ್‌ಪುರ್‌ನ ಸಿಪಿಐ(ಎಂ) ಕಛೇರಿಯ ಮೇಲೆ ದಾಳಿ

ವಾಗಿದೆ. ಪಕ್ಷದ ಕಾರ್ಯಕರ್ತರು, ನಾಯಕರು ಹಾಗೂ ಅವರ ಕುಟುಂಬ ಸದಸ್ಯರ ಮೇಲೆ ಅಮಾನವೀಯ ಹಲ್ಲೆಗಳು ನಡೆದಿವೆ. ಫಲಿತಾಂಶ ಪುತ್ತದರ ಮರುದಿನ 10 ಮಂದಿ ಕಾರ್ಯಕರ್ತರನ್ನು ಹಾಡಹಗಲೇ ಬರ್ಬರ ಹತ್ಯೆ ಮಾಡಲಾಗಿದೆ. ಸಾಕಷ್ಟು ಮಂದಿ ಪಕ್ಷದ ಕಾರ್ಯಕರ್ತರು ದಾಳಿ–ಹಲ್ಲೆಗಳಿಗೆ ಒಳಗಾಗಿದ್ದಾರೆ.

ಪುರುಲಿಯಾ, ಪಶ್ಚಿಮ ಹಾಗೂ ಪೂರ್ವ ಮಿಡ್ನಾಪುರ ಜಿಲ್ಲೆಗಳಲ್ಲಂತೂ ತೃಣಮೂಲಿಗಳ ಹಿಂಸಾ ತಾಂಡವ ಮಿತಿಮೀರಿತ್ತು. ಪಕ್ಷದ ಕಚೇರಿಗಳು, ನಾಯಕರ ನಿವಾಸಗಳ ಮೇಲೆ ದಾಳಿ ಕೇಂದ್ರೀಕರಿಸಲಾಯಿತು. ಹಲವು ಕಚೇರಿಗಳು, ಮನೆಗಳನ್ನು ಧ್ವಂಸಗೊಳಿಸ ಲಾಯಿತು. ದೊಡ್ಡ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು ಊರು ಬಿಡ ಬೇಕಾಯಿತು.

ಪುರುಲಿಯಾ

ಮೇ 24ರಂದು ನಪರಾ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷೆ ಸರಸ್ವತಿ ಸಬರ್ ಅವರ ಮೇಲೆ ಹಲ್ಲೆ ಮಾಡಲಾಯಿತು. ಬಳಿಕ ಸ್ಥಳೀಯ ಸಿಪಿಐ(ಎಂ) ನಾಯಕರಾದ ಉಮೇಶ್ ಮಹತೋ ಮತ್ತು ರಬಿ ಮಹತೋ ಅವರನ್ನು ಸುಳ್ಳು ಆರೋಪದ ಮೇಲೆ ಪೊಲೀಸರು ಬಂಧಿಸಿದ್ದಾರೆ. ಇದರ ಮರುದಿನ ಸಾಲ್ಬನಿ ಜಿಲ್ಲೆಯದಲ್ಲಿ ಸಿಪಿಐ(ಎಂ) ಕಾರ್ಯ ಕರ್ತ ಕಿರಣ್ ಮಜಿ ಎಂಬವರ ಮೇಲೆ ದಾಳಿ ನಡೆಸಲಾಯಿತು. ಅವರ ಮನೆಯನ್ನು ಧ್ವಂಸಗೊಳಿಸಲಾಯಿತು. ಅಲ್ಲದೆ ಸ್ಥಳೀಯ ನಾಯಕರ ಮೇಲೂ ದೈಹಿಕ ಹಲ್ಲೆ ನಡೆಯಿತು. ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದ ಕಾರ್ಯಕರ್ತರನ್ನೂ ಥಳಿಸಲಾಯಿತು. ಈ ಘಟನೆಯಲ್ಲಿ ಪಕ್ಷದ ವಲಯ ಕಾರ್ಯ ದರ್ಶಿಯೂ ಗಾಯಗೊಂಡರು. ಪ್ರದೇಶದ ಸ್ವಾತಂತ್ರ್ಯ ಹೋರಾಟ ಗಾರ ಭಬಿನಿ ಮಹತೋ ಅವರ ಮನೆಯನ್ನೂ ದುಷ್ಕರ್ಮಿ ಗಳು ಧ್ವಂಸಗೊಳಿಸಿದರು.

ಪೂರ್ವ ಮಿಡ್ನಾಪುರ

ಇದೇ ಅವಧಿಯಲ್ಲಿ ಪೂರ್ವ ಮಿಡ್ನಾ ಪುರದಲ್ಲೂ ದಾಳಿಗಳು ಮುಂದುವರಿಯಿತು. ಹಲ್ದಿಯಾ ವಿಧಾನಸಭಾ ಕ್ಷೇತ್ರದ ಖುದಿರಾಮ್ ನಗರದಲ್ಲಿ ಸಿಪಿಐ(ಎಂ)ನ ಪ್ರಾದೇಶಿಕ ಸಮಿತಿಯ ಕಚೇರಿಯನ್ನು ತೃಣಮೂಲದ ಗೂಂಡಾ ಪಡೆ ಲೂಟಿ ಮಾಡಿತು. ಜೊತೆಗೆ ಕಾರ್ಮಿಕ ಸಂಘಟನೆಗಳ ಕಚೇರಿಗಳೂ ದಾಳಿಗೆ ಒಳಗಾದವು. ಕೈಗಾರಿಕಾ ಪ್ರದೇಶವಾದ ಹಲ್ದಿಯಾದಲ್ಲಿರುವ ವಿವಿಧ ಕಾರ್ಮಿಕ ಸಂಘಟನೆಗಳ ಕಚೇರಿಗಳ ಮೇಲೂ ಈ ಗೂಂಡಾ ಪಡೆ ದೃಷ್ಟಿ ಹರಿಸಿತು. ತೃಣಮೂಲದ ಕಾರ್ಮಿಕ ಸಂಘಟನೆಗೆ ಕಾರ್ಮಿಕರು ಸೇರಬೇಕೆಂದು ಒತ್ತಾಯಿಸಿ ಈ ಪ್ರದೇಶದಲ್ಲಿರುವ ಸುಮಾರು 10ಕ್ಕೂ ಹೆಚ್ಚು ಕಚೇರಿಗಳನ್ನು ಧ್ವಂಸ ಮಾಡಲಾಯಿತು.

ತಮ್ಲುಕ್ ಗ್ರಾಮೀಣ ವಲಯ ಸಮಿತಿ ಕಚೇರಿ ದಾಳಿ ಮಾಡಿದ್ದಲ್ಲದೆ, ಪಕ್ಷದ ವಲಯ ಸಮಿತಿ ಸದಸ್ಯ ಚಿತ್ತ ಖಾನ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಯಿತು.

ಮಹಿಷದಲ್ ವಿಧಾನಸಭಾ ಕ್ಷೇತ್ರದ ಲಕ್ಷ್ಯಾ ಗ್ರಾಮ ಸಮಿತಿಯ ಕಚೇರಿಗೆ ತೃಣಮೂಲದ ಗೂಂಡಾ ಪಡೆ ಬೆಂಕಿ ಇಟ್ಟಿತು. ಕಾಶಿಂನಗರ ಹಾಗೂ ಗಾಂವ್‌ಖಲಿ ಗ್ರಾಮದ ಕಚೇರಿಗಳಿಗೂ ಇದೇ ಅವಸ್ಥೆ ಎದುರಾಯಿತು. ಈ ಎರಡು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುಮಾರು 50ಕ್ಕೂ ಹೆಚ್ಚು ಕಾರ್ಯಕರ್ತರ ಮೇಲೆ ದೈಹಿಕ ಹಲ್ಲೆ ನಡೆಸಲಾಯಿತು. ಪನ್ಸ್‌ಕುರಾ ವಿಧಾನಸಭಾ ಕ್ಷೇತ್ರದಲ್ಲಂತೂ ಬರ್ಬರ ಕೃತ್ಯ ಎಲ್ಲೆ ಮೀರಿತು. ಪಕ್ಷದ ನಾಯಕರಾದ ಸಂಶಾದ್ ಅಲಿ, ಕಿಶೋರ್ ಪಾಂಡೆ ಗಂಭೀರವಾಗಿ ಗಾಯಗೊಂಡು ಮಿಡ್ನಾಪುರ ಕಾಲೇಜ್ ಆಸ್ಪತ್ರೆಗೆ ದಾಖಲಾದರು.

ಲಕ್ಷ ಲಕ್ಷ 'ದಂಡ'ದ ಬೇಡಿಕೆ

ಕಾಂತಾಯ್ ಗ್ರಾಮದಲ್ಲಂತೂ ತೃಣಮೂಲದ ಗೂಂಡಾ ವರ್ತನೆ ಎಲ್ಲೆ ಮೀರಿತು. ಗ್ರಾಮಸ್ಥರ ಮನೆಗಳಿಗೆ ದಾಳಿ ನಡೆಸಿದ ಗೂಂಡಾ ಪಡೆಗಳು ಪಕ್ಷದ ಬೆಂಬಲಿಗರನ್ನು ಮಾನಸಿಕವಾಗಿ, ದೈಹಿಕವಾಗಿ ಹಿಂಸೆ ನೀಡಿದರು. ಗ್ರಾಮದಲ್ಲೇ ಉಳಿಯಬೇಕಿದ್ದರೆ 12.5 ಲಕ್ಷ ರೂಪಾಯಿ 'ದಂಡ' ನೀಡುವಂತೆ ಒತ್ತಾಯಿಸಲಾಯಿತು. ರಾಜ್ಯದ ಹಲವೆಡೆ 26ಕ್ಕೂ ಹೆಚ್ಚು ಪಕ್ಷದ ಪ್ರಾಂತೀಯ ಕಚೇರಿಗಳನ್ನು ಧ್ವಂಸ ಮಾಡಲಾಯಿತು. 25ಕ್ಕೂ ಹೆಚ್ಚು ಶಾಖಾ ಕಚೇರಿಗಳಿಗೆ ಬೆಂಕಿ ಹಾಕಲಾಯಿತು.

ವ್ಯಾಪಕ ಹಿಂಸಾಚಾರ, ದಾಂಧಲೆಗಳು ನಡೆಯಿತು.

ಇದೇ ರೀತಿಯ ಹಲ್ಲೆ, ದಾಳಿ ಹಾಗೂ ಅಮಾನವೀಯ ಕೃತ್ಯಗಳು ರಾಜ್ಯಾದ್ಯಂತ ನಡೆದಿವೆ. ತೃಣಮೂಲ ಕಾಂಗ್ರೆಸ್ ನೇತೃತ್ವದ ಈ ಗೂಂಡಾ ದಾಳಿ ನಡೆಸಿದ ಕೃತ್ಯದ ದೊಡ್ಡ ಪಟ್ಟಿಯನ್ನೇ ಮಾಡಬಹುದು.

ಎಡರಂಗದ ಖಂಡನೆ

ಈ ಕೃತ್ಯವನ್ನು ಎಡರಂಗದ ನಾಯಕರು ತೀವ್ರವಾಗಿ ವಿರೋಧಿಸಿದರು. ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಬಿಮನ್‌ಬಸು, ಬುದ್ಧದೇವ್ ಭಟ್ಟಾಚಾರ್ಯ, ನಿರುಪಮ್ ಸೇನ್ ಮತ್ತು ರಾಜ್ಯದ ನಾಯಕರು ಸ್ಥಳಕ್ಕೆ ಭೇಟಿ ನೀಡಿ ಪಕ್ಷದ ಕಾರ್ಯಕರ್ತರಿಗೆ ಧೈರ್ಯ ತುಂಬಿದರು. ಸಾಂತ್ವ ಹೇಳಿದರು.

ತೃಣಮೂಲದ ಗೂಂಡಾ ಕೃತ್ಯವನ್ನು ವಿರೋಧಿಸಿ ರಾಜ್ಯಾದ್ಯಂತ ಬೃಹತ್ ಪ್ರತಿಭಟನೆಗೆ ಕರೆ ನೀಡಲಾಯಿತು. ಇದರ ಅಂಗವಾಗಿ ಮೇ 31ರಂದು ನಡೆದ ಪ್ರಥಮ ಸಾರ್ವಜನಿಕ ರ್‍ಯಾಲಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಚುನಾವಣಾ ಸೋಲಿನ ಬಳಿಕ ನಡೆದ ಮೊದಲ ಸಭೆ ಇದಾಗಿತ್ತು. ಕೊಲ್ಕತ್ತಾದ ರಾಣಿ ರೋಶ್‌ಮಣಿ ರಸ್ತೆಯಲ್ಲಿ ನಡೆದ ರ್‍ಯಾಲಿಯಲ್ಲಿ ಸಾವಿರಾರು ಮಂದಿ ಉತ್ಸಾಹದಿಂದ ಭಾಗವಹಿಸಿದ್ದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಬಿಮನ್ ಬಸು, ರಾಜ್ಯದಲ್ಲಿನ ಹಿಂಸಾಚಾರವನ್ನು ತೀವ್ರವಾಗಿ ಖಂಡಿಸಿದರು. ಯುಪಿಎ ಸರ್ಕಾರ ಮೌನ ವಹಿಸಿರುವುದನ್ನು ಟೀಕಿಸಿದ ಬುದ್ಧದೇವ್ ಭಟ್ಟಾಚಾರ್ಯ, ಎಡ ಪಕ್ಷಗಳು ಮತ್ತೆ ತಮ್ಮ ಪ್ರಾಬಲ್ಯ ಸ್ಥಾಪಿಸಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಸೋಲಿನಿಂದ ಎಡರಂಗ ಪಾಠ ಕಲಿಯಲಿದೆ ಎಂದು ಸ್ಪಷ್ಟಪಡಿಸಿದ ಅವರು, ಕಳೆದ ಮೂರುವರೆ ದಶಕದಲ್ಲಿ ರಾಜ್ಯದ ಜನತೆ ಸಾಧಿಸಿದ ಯಶಸ್ಸು ಕಳೆದು ಹೋಗಬಾರದು. ಈ ಹೊಣೆ ಎಡರಂಗದ ಮೇಲಿದೆ ಎಂದು ಹೇಳಿದರು.

ಎಡರಂಗ ಸೋತಿದೆ ಎಂಬುದರ ಅರ್ಥ ಅವರ ಮೇಲೆ ಆಕ್ರಮಣ ಮಾಡಬಹುದು ಎಂದಲ್ಲ. ತೃಣಮೂಲದ ಗೂಂಡಾ ದಾಳಿಗೆ ನಮ್ಮ ಅನೇಕ ಕಾರ್ಯಕರ್ತರು ಬಲಿ ಯಾಗಿದ್ದಾರೆ. ಕನಿಷ್ಟ ಐದು ಸಾವಿರ ಮಂದಿ ಮನೆ ಬಿಟ್ಟು ಹೋಗಿದ್ದಾರೆ. ನೂರಾರು ಸಾವು ನೋವುಗಳು ಸಂಭವಿಸಿದೆ. ಕಾರ್ಮಿಕ ಸಂಘಟನೆಗಳ ಕಚೇರಿಗಳಿಗೆ ಬಲವಂತವಾಗಿ ಬೀಗಮುದ್ರೆ ಹಾಕಲಾಗಿದೆ. ಕಚೇರಿಯಲ್ಲಿನ ಬಾವುಟಗಳನ್ನು ಕಿತ್ತು ಹಾಕಲಾಗಿದೆ. ಕಾನೂನುಬಾಹಿರ ಹಫ್ತಾ ನೀಡುವಂತೆ ಕಾರ್ಯಕರ್ತರಿಗೆ ಧಮಕಿ ನೀಡಲಾಗಿದೆ. ಇದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ತಕ್ಷಣ ಎಡರಂಗದ ಮೇಲಿನ ದೌರ್ಜನ್ಯ– ದಾಳಿಯನ್ನು ನಿಲ್ಲಿಸಬೇಕು



ಪೂರ್ವ ಮಿಡ್ನಾಪುರ ಜಿಲ್ಲೆಯ ರಾಮನಗರ್‌ನಲ್ಲಿ ಸಿಪಿಐ(ಎಂ) ಬೆಂಬಲಿಗರ ಮನೆಯನ್ನು ಸುಟ್ಟಿರುವುದು

ಎಂದು ಬುದ್ಧದೇಬ್ ತೃಣಮೂಲ ನಾಯಕರಿಗೆ ತಾಕೀತು ಮಾಡಿದರು.

ಹೊಸ ಸರ್ಕಾರದ ಆಡಳಿತವನ್ನು ನಾವು ನೋಡುತ್ತಿದ್ದೇವೆ. ಕೈಗಾರಿಕೆ, ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ ಕ್ಷೇತ್ರಗಳಲ್ಲಿ ಸರ್ಕಾರದ ನೀತಿಯನ್ನು ಎದುರು ನೋಡುತ್ತೇವೆ. ಬಳಿಕ ನಾವು ನಮ್ಮ ಹೋರಾಟದ ಸ್ವರೂಪವನ್ನು ನಿರ್ಧರಿಸುತ್ತೇವೆ ಎಂದು ಅವರು ಹೇಳಿದರು. ಎಡರಂಗ ಸರ್ಕಾರ ನಡೆಸಿದ ಸಾಧನೆಗಳನ್ನು ಉಳಿಸಿಕೊಳ್ಳಲು ಎಲ್ಲ ರೀತಿಯ ಪ್ರಯತ್ನವನ್ನೂ ಎಡಪಕ್ಷಗಳು ಮಾಡಲಿವೆ ಎಂದು ಬಿಮನ್ ಬಸು ಈ ಸಂದರ್ಭದಲ್ಲಿ ಭರವಸೆ ನೀಡಿದರು.

ಸಂಪಾದಕೀಯ

ಪ್ರಜಾತಂತ್ರಕ್ಕೆ ಬೆದರಿಕೆ

ವಿರೋಧಪಕ್ಷಗಳಿಲ್ಲದ ಅಧಿವೇಶನ ಅಪಾಯಕಾರಿ ನಡತೆ


ಹತ್ತು ದಿನಗಳ ಕರ್ನಾಟಕ ವಿಧಾನಸಭಾ ಅಧಿವೇಶನ ಶಾಸಕಾಂಗ ಇತಿಹಾಸದಲ್ಲಿ ಅತ್ಯಂತ ಕರಾಳ, ಕಪ್ಪು ಮಸಿಯನ್ನು ಬಳಿದು ಬಿಟ್ಟಿತು. ಸಂಸತ್ ಅಥವಾ ವಿಧಾನ ಸಭೆಯೇ ಆಗಲಿ ಆಡಳಿತ ಮತ್ತು ವಿರೋಧಪಕ್ಷಗಳು ಸಂಸದೀಯ ಪ್ರಜಾಪ್ರಭುತ್ವದಲ್ಲಿ ಅತ್ಯಂತ ಮಹತ್ವದ ಅಂಗಗಳು. ಯಾವುದೇ ಕಲಾಪಗಳು ನಡೆಯಲು, ಯಶಸ್ವಿಗೊಳಿಸಲು ಆಡಳಿತ ಪಕ್ಷದ ಎದುರಲ್ಲಿ ವಿರೋಧ ಪಕ್ಷಗಳು ಕ್ರಿಯಾಶೀಲವಾಗಿರಬೇಕು. ವಿರೋಧ ಪಕ್ಷಗಳೇ ಇಲ್ಲದಿದ್ದರೆ ಆಡಳಿತ ಪಕ್ಷದ ಯಾವುದೇ ತೀರ್ಮಾನಗಳಿಗೆ ಬೆಲೆ ಬರುವುದಾದರೂ ಹೇಗೆ? ವಿಶ್ವಾಸಾರ್ಹತೆ ಸಿಗುವುದಾದರೂ ಹೇಗೆ?

ಈ ಬಾರಿಯ ಕಲಾಪಗಳಲ್ಲಿ ವಿರೋಧಪಕ್ಷಗಳು ಭಾಗವಹಿಸದಂತಹ ಸನ್ನಿವೇಶ ಸೃಷ್ಟಿಸಿದ್ದು ಅಧಿಕಾರರೂಢ ಬಿಜೆಪಿಯೇ. 16 ಶಾಸಕರನ್ನು ಅನರ್ಹಗೊಳಿಸಿ ಯಡಿಯೂರಪ್ಪನವರ ಸರ್ಕಾರ ಅಧಿಕಾರದಲ್ಲಿ ಮುಂದುವರಿಯುವಂತೆ ಮಾಡುವಲ್ಲಿ ವಿಧಾನಸಭಾಧ್ಯಕ್ಷರಾದ ಬೋಪಯ್ಯನವರು ವಹಿಸಿದ ಸಂವಿಧಾನ ವಿರೋಧಿ ಪಾತ್ರವನ್ನು ಸುಪ್ರೀಂಕೋರ್ಟ್ ಅತ್ಯಂತ ತೀಕ್ಷ್ಣ ಶಬ್ದಗಳಲ್ಲಿ ಟೀಕಿಸಿರುವಾಗ ಇದಕ್ಕೆ ತಲೆಬಾಗಿ ಆ ಸ್ಥಾನಕ್ಕೆ ರಾಜೀನಾಮೆ ನೀಡಬೇಕಿತ್ತು. ಅದರ ಬದಲು ಸರ್ಕಾರವೇ 'ಅನರ್ಹಗೊಂಡಿರುವಾಗ' ರಾಜೀನಾಮೆ ಯನ್ನು ನೀಡದೇ ಬಿಜೆಪಿಯು ವಿಧಾನಸಭಾ ಕಲಾಪಗಳನ್ನು ನಡೆಸಿದ್ದು, ಅತ್ಯಂತ ಭಂಡತನ. ಇಂತಹ ಸ್ಥಿತಿಯಲ್ಲಿ ವಿರೋಧಪಕ್ಷಗಳು ಆಯ್ಕೆ ಮಾಡಿಕೊಂಡ ವಿಧಾನವೆಂದರೆ ಕಲಾಪಗಳನ್ನು ಬಹಿಷ್ಕರಿಸಬೇಕೆಂದು, ಇದು ಸರಿಯೇ ತಪ್ಪೇ ಎನ್ನುವುದು ಬೇರೆ ಸಂಗತಿ. ವಿರೋಧಪಕ್ಷಗಳನ್ನೇ ನಿರ್ನಾಮ ಮಾಡಲು ಸರ್ವ ಸಿದ್ಧತೆ ಮಾಡಿಕೊಂಡ, ಸಂವಿಧಾನ ವಿರೋಧಿ ಸರ್ಕಾರವನ್ನು ಪ್ರತಿಭಟಿಸಲೇಬೇಕಾದ ಅನಿವಾರ್ಯತೆಯಂತೂ ಬಂದೊದಗಿತ್ತು. ಸಭಾಧ್ಯಕ್ಷರ ರಾಜೀನಾಮೆಗಾಗಿ ಕಾಂಗ್ರೆಸ್-ಜೆಡಿ(ಎಸ್) ಪಕ್ಷಗಳು ಆಗ್ರಹಿಸಿದಾಗ ಅದನ್ನು ತಿರಸ್ಕರಿಸಿದ್ದಲ್ಲದೇ, ಅವರನ್ನು ಸಮರ್ಥಿಸಿಕೊಂಡದ್ದರಿಂದ, ಕಲಾಪ ಬಹಿಷ್ಕರಿಸಲಾಗಿತ್ತು. ಹೀಗಿರುವಾಗ ಬೇಡಿಕೆ ಯನ್ನು ಒಪ್ಪಿಕೊಳ್ಳದೇ, ಸಂಧಾನಕ್ಕೆ ಪ್ರಾಮಾಣಿಕವಾಗಿ ಮುಂದಾಗದೇ ವಿರೋಧ ಪಕ್ಷಗಳನ್ನು, ಅವರ ಬೇಡಿಕೆಗಳನ್ನು ನಿಕೃಷ್ಟವಾಗಿ ಸರ್ಕಾರ ಕಂಡಿದ್ದು ಖಂಡನೀಯ ಮಾತ್ರವಲ್ಲ ಈ ಸ್ಥಿತಿಯಲ್ಲೇ ಅಧಿವೇಶನ ಕಲಾಪಗಳನ್ನು ನಡೆಸಿದ್ದು, ಅಕ್ಷಮ್ಯ, ಅಪರಾಧವಾಗಿದೆ. ಇದು ಪ್ರಜಾತಂತ್ರಕ್ಕೆ ಮಾರಕವಾದ ದ್ರೋಹವಾಗಿದೆ.

ಕಾನೂನಿನಂತೆ ವರ್ಷದಲ್ಲಿ ಕನಿಷ್ಠ 100 ದಿನಗಳ ಕಲಾಪಗಳು ನಡೆಯಬೇಕೆಂಬ ನಿಯಮವನ್ನು ಬಿಜೆಪಿ ಸರ್ಕಾರ ಪಾಲಿಸಿದ್ದೇ.ಇಲ್ಲ. ನಡೆದ ಕಲಾಪಗಳ ಹಾದಿ ತಪ್ಪಿಸುವಲ್ಲಿ ಬಿಜೆಪಿ ನಿಷ್ಣಾತವೇ ಸರಿ. (ಇದಕ್ಕೆ ವಿರೋಧಪಕ್ಷಗಳ ಸಾಥ್ ಬೇರೆ.) ಸದನದೊಳಗಿನ ಚರ್ಚೆ, ಸಲಹೆ-ಸೂಚನೆಗಳನ್ನು ಸರ್ಕಾರ ಗೌರವಿಸುವುದಿಲ್ಲ, ಮೇಲಾಗಿ ಗಣಿಗಳ್ಳತನ, ಭೂಗಳ್ಳತನಗಳಂತಹ ಅನೇಕ ಅಕ್ರಮಗಳಲ್ಲಿ ಇಡೀ ಸರ್ಕಾರ ಸಚಿವರು, ನಾಯಕರ ಮೇಲೆ ಗಂಭೀರ ಆರೋಪಗಳಿರುವಾಗ ಬಹುಮತ ಕಳೆದು ಕೊಂಡಾಗ ಸರ್ಕಾರ ನಡೆದುಕೊಂಡ ರೀತಿ ಪ್ರಜಾಪ್ರಭುತ್ವದ ಕತ್ತು ಹಿಸುಕುವಂತಹದ್ದು. ಈ ಬಾರಿಯಂತೂ ಕಲಾಪಗಳಿಂದ ವಿರೋಧ ಪಕ್ಷಗಳು ದೂರ ಉಳಿದರೂ ಕಲಾಪಗಳನ್ನು ನಡೆಸಿ, ಅನೇಕ ಮಸೂದೆ ಗಳನ್ನು ಅಂಗೀಕರಿಸಿಕೊಂಡಿದ್ದು, ಫ್ಯಾಶಿಸ್ಟ್ ಪ್ರವೃತ್ತಿಯ ವಿಜೃಂಭಣೆಯೇ ಆಗಿದೆ. ಹಾಗೆ ನೋಡಿದರೆ ಸರ್ಕಾರಕ್ಕೆ ವಿರೋಧಪಕ್ಷಗಳೇ ಬೇಕಿಲ್ಲ. ಅದನ್ನು ಸಹಿಸುವುದೂ ಇಲ್ಲ. ಈ ಬಾರಿ ಅದಕ್ಕಾಗಿ 'ಸ್ಪೀಕರ್'ರನ್ನು ಬಳಸಿಕೊಂಡಿದೆ. ಸ್ವಾರ್ಥ, ಸ್ವಹಿತ ಸಾಧನೆಯ ಆತುರದಲ್ಲಿ ರಾಜ್ಯದ ಜನತೆಯ ಹಿತಾಸಕ್ತಿಗಳನ್ನು ಬಲಿಕೊಡಲಾಗಿದೆ. ಈ ಅಧಿವೇಶನದಲ್ಲೇ ಸುಮಾರು 87 ಸಾವಿರ ಕೋಟಿ ರೂಪಾಯಿಗಳ ಆಯವ್ಯಯಕ್ಕೆ ಅಂಗೀಕಾರ ಪಡೆಯಲಾಗಿದೆ. ರಾಜ್ಯದ ಜನತೆಯ ಬದುಕು-ಭವಿಷ್ಯ, ಬೆಳವಣಿಗೆಯ ಮೇಲೆ ಪರಿಣಾಮ ಬೀರುವಂತಹ ಮಹತ್ವದ ಧನವಿನಿಯೋಗ ಮಸೂದೆಯ ಏಕಪಕ್ಷೀಯವಾಗಿ ಅಂಗೀಕರಿಸಿಕೊಂಡದ್ದು ವೇತನ ಹೆಚ್ಚಿಸಿಕೊಂಡಿದ್ದು ನಿಜಕ್ಕೂ ಆಘಾತಕರ ಮತ್ತು ಅಪಾಯದ ಸೂಚನೆಯಾಗಿದೆ. ಹೀಗೆಯೇ ಹಲವು ಮಸೂದೆಗಳನ್ನು ಅಂಗೀಕರಿಸಲಾಗಿದೆ. ಅಂದರೆ ಶಾಸಕಾಂಗ-ಸಂಸದೀಯ ವಿಧಿ ವಿಧಾನ, ಮೌಲ್ಯಗಳನ್ನು ದುರ್ಬಲಗೊಳಿಸಿ ಫ್ಯಾಸಿಸ್ಟ್ ಆಡಳಿತವನ್ನು ರೂಢಿಸುವ ಅದರ ದುಷ್ಟ ಯೋಚನೆ ಆತಂಕಕಾರಿ. ಹೀಗೆ ಜನತೆಯ ಜ್ವಲಂತ ಪ್ರಶ್ನೆಗಳನ್ನು ನಿರ್ಲಕ್ಷಿಸಿ ಬೆನ್ನು ತೋರಿಸುವ ಈ ಸರ್ಕಾರ ಜನದ್ರೋಹಿಯೂ ಆಗಿದೆ. ಇನ್ನಾದರೂ ಪ್ರಜಾಪ್ರಭುತ್ವವಾದಿಗಳೆಂದೇ ಸದಾ ಬಡಾಯಿ ಕೊಚ್ಚಿಕೊಳ್ಳುವ ಯಡಿಯೂರಪ್ಪನವರು ಈ ಸಭಾಧ್ಯಕ್ಷರು ಮರ್ಯಾದೆಯಿಂದ ತೊಲಗಲಿ. ●

ಜನಶಕ್ತಿ ಪ್ರಸಾರಾಂದೋಲನ ವ್ಯಕ್ತಗೊಂಡ ಉತ್ಸಾಹ, ಸಿದ್ಧತೆಗಳು

ಜನಶಕ್ತಿ ಕನ್ನಡದ ಮಾಧ್ಯಮ ಲೋಕದ ಅಗತ್ಯ ಹಾಗೂ ಅನಿವಾರ್ಯವಾದ ಪತ್ರಿಕೆ. ಬೇರೆ ಪತ್ರಿಕೆಗಳು ಇಲ್ಲವೆಂದಲ್ಲ. 'ಟ್ಯಾಬ್‌ಲಾಯ್ಡ್' ಗಾತ್ರದ ಬಣ್ಣಬಣ್ಣದ ವಾರಪತ್ರಿಕೆಗಳು ಬರುತ್ತಿವೆ. ಅವುಗಳ ಸಂಖ್ಯೆ ಹೆಚ್ಚಿದೆ. ದಿನಪತ್ರಿಕೆ, ಚಾನೆಲ್‌ಗಳೂ ಸಹ. ಆದರೆ ಅವು ಪ್ರಸಾರಿಸುವ ಮೌಲ್ಯಗಳು, ಪ್ರತಿಪಾದಿಸುವ ವರ್ಗ ಹಿತಾಸಕ್ತಿಗಳು, ಧೋರಣೆಗಳು ಜನರ ಬದುಕಿಗೆ ಬೆನ್ನು ತೋರಿಸಿವೆ. ಅರ್ಥಾತ್ ಹಾದಿ ತಪ್ಪಿಸುವಲ್ಲೇ ಬಹುತೇಕ ಸಮಯ, ಶಕ್ತಿ ಮೀಸಲಿಟ್ಟಿವೆ. ಇಂತಹ ಮಾಧ್ಯಮಗಳ ಒಡೆಯರು ಕಪ್ಪು ಹಣದ ಸರದಾರರು, ಅಥವಾ ಅಕ್ರಮವಾಗಿ ಗಳಿಸಿದವರು, ಮುಖಕ್ಕೆ ಮೆತ್ತಿಕೊಂಡ ಕಪ್ಪು ಮಸಿಯನ್ನು ತೊಳೆದುಕೊಳ್ಳ ಬಯಸುವವರು, ಇಲ್ಲವೋ ದುಡ್ಡು ಮಾಡುವುದೇ ಪರಮ ಧ್ಯೇಯ ವನ್ನಾಗಿಸಿಕೊಂಡ ಕಾರ್ಪೋರೇಟ್ ಕಂಪನಿಗಳು. ಹೀಗಿರುವಾಗ ಜನರ ಅಳಲಿಗೆ, ಹೃದಯದ ಭಾಷೆಗೆ ಎಲ್ಲಿದೆ ಜಾಗ? ಇಂತಹ ಸ್ಥಿತಿಯಲ್ಲಿ ಪರ್ಯಾಯ ಬೇಡವೇ?



ಹಾಗಾಗಿಯೇ "ಜನಶಕ್ತಿ ಬೇಕೇಬೇಕು. ಅದು ಬೆಳೆಯುವುದು ಅಗತ್ಯ, ಅನಿವಾರ್ಯ". ಇದು ಜನಶಕ್ತಿ ಪ್ರಸಾರಾಂದೋಲನದ ಸಿದ್ಧತೆಯ ಸಭೆಗಳಲ್ಲಿ ವ್ಯಕ್ತವಾದ ಸರ್ವ ಸಾಮಾನ್ಯ ಅಭಿಪ್ರಾಯ.

ದುಡಿವ ಜನರ ಪ್ರಾಣಮಿತ್ರ ನಮ್ಮ ಜನಶಕ್ತಿ ಕನ್ನಡ ವಾರಪತ್ರಿಕೆಯ ಪ್ರಸಾರವನ್ನು ಹೆಚ್ಚಿಸಬೇಕು. ರಾಜ್ಯದಲ್ಲಿ ಪ್ರಗತಿಪರ ಪ್ರಜಾಸತ್ತಾತ್ಮಕ, ಜನತೆಯ ಚಳುವಳಿಗಳು ಬೆಳೆಯುತ್ತಿವೆ. ಮೊದಲಾಗಿ ಆಳುವವರ ಈಗಿನ ಆರ್ಥಿಕ, ಸಾಮಾಜಿಕ-ಸಾಂಸ್ಕೃತಿಕ ನೀತಿಗಳು ಜನರನ್ನು ಜರ್ಝರಿತ ಗೊಳಿಸಿವೆ. ಪ್ರಧಾನ ಮಾಧ್ಯಮಗಳಲ್ಲಿ ಜಾಗವೇ ಇಲ್ಲವಾಗಿದೆ. ಇಂತಹ ಸನ್ನಿವೇಶದಲ್ಲಿ ಜನತೆಯ ಮುಂದಿರುವ ಸವಾಲುಗಳು ಹಲವು ಅದಕ್ಕೆ ಸನ್ನದ್ಧಗೊಳಿಸುವುದು ಅಗತ್ಯ ಹಾಗಾಗಿ ಜನರ ಧ್ವನಿಯಾಗಿ, ಮಿಡಿಯುತ್ತಲೇ ಜನ ಸಮೂಹಗಳ ಅರಿವಿನ ವಿಸ್ತಾರ ಆಗಬೇಕು. ಜನತೆಯಿಂದ ಕಲಿತಿದ್ದು, ಸಾಮಾಜಿಕ ಕಾರ್ಯಕರ್ತರು ಜನಸಾಮಾನ್ಯರ ನಡುವೆ ಹೋಗಬೇಕು. ಇದಕ್ಕೆಂದೇ ಪತ್ರಿಕೆಯ ಪ್ರಕಾಶನ ಸಂಸ್ಥೆ ಪತ್ರಿಕೆಯ ಪ್ರಸಾರ ಹೆಚ್ಚಿಸಲು ನಿರ್ಧರಿಸಿದೆ. ಜೂನ್ 15 ರಿಂದ ಜುಲೈ 15ರವರೆಗೆ ಒಂದು ತಿಂಗಳ ಪ್ರಸಾರಾಂದೋಲನ. ಪತ್ರಿಕೆಯ ಪ್ರಸಾರ ದ್ವಿಗುಣಗೊಳ್ಳಲೇಬೇಕೆಂಬ ಅಚಲ ನಿರ್ಧಾರ. ಹಾಗೆಯೇ ಅದರ ಆರ್ಥಿಕ ಶಕ್ತಿಯ ಹೆಚ್ಚಳವೂ.

"ನಮ್ಮಲ್ಲಿ 500 ಹೆಚ್ಚಿಸಲು ಅಡ್ಡಿಯಾದರೂ ಏನಿದೆ? ಖಂಡಿತ ಸಾಧ್ಯವಿದೆ." ಹೀಗೆ ಅಭಿಪ್ರಾಯ ಬಂದದ್ದು ಹಾಸನದಲ್ಲಿ. ಅದೇ ರೀತಿ "ಬರೀ ಮಂಗಳೂರಿನಲ್ಲೇ ಇನ್ನೂ 500 ಪ್ರತಿಗಳನ್ನು ಹೆಚ್ಚಿಸುವೆವು. ಇದರ ಜೊತೆಯಲ್ಲೆ 'ನಾವೆಲ್ಲಾ ಒಂದೆರಡು ತಂಡಗಳಾಗಿ ಇಳಿದರೆ ಅದು ಅಸಾಧ್ಯವಲ್ಲ" ಎಂಬ ಮಾತು. ಜೊತೆಗೆ ಅದಕ್ಕಾಗಿಯೇ ಜೂನ್ 10ರಿಂದ ಒಂದುವಾರ ಪೂರ್ಣ ಗಮನ ಕೊಡುವುದಾಗಿ ಎಲ್ಲಾ ಹಾಸನದ ಒಡನಾಡಿಗಳ ನಿರ್ಧಾರ.

ಮಂಗಳೂರಿನಲ್ಲಿಯ ಸಿದ್ಧತೆಯೇ ಒಂದು ವಿಶೇಷ. ಅಲ್ಲಿಯ ಗೆಳೆಯರು ಪ್ರದೇಶವಾರು ಓದುಗರ, ಹಿತೈಷಿಗಳ ಸಮಾವೇಶಗಳನ್ನೇ ನಡೆಸಿ, ಸನ್ನದ್ಧರಾಗುತ್ತಿದ್ದಾರೆ. ಈಗ ಆರು ಪ್ರದೇಶಗಳಲ್ಲಿ ಸಮಾವೇಶ ಆಗಿದೆ. ಪ್ರಸಾರಾಂದೋಲನಕ್ಕೆ ಸಿದ್ಧತೆ ನಡೆದಿದೆ. ಇನ್ನೂ ಹಲವೆಡೆಗಳಲ್ಲಿ

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



ಕೃಪೆ: ದಿ ಹಿಂದೂ

ಜನಶಕ್ತಿ ಪ್ರಸಾರಾಂದೋಲನದ ಉತ್ಸಾಹ....


ಪುಟ 3 ರಿಂದ

ಯೋಜಿಸಲಾಗಿದೆ. ಹಾಸನ, ಮಂಗಳೂರು, ಕುಂದಾಪುರ, ಉಡುಪಿಗಳಲ್ಲಿ ಪತ್ರಿಕೆಯ ಓದುಗರು, ಬರಹಗಾರರು, ಏಜನ್ಸಿದಾರರು, ಸಾಮೂಹಿಕ ಸಂಘಟನೆಗಳ ಮುಖಂಡರು, ಚಿಂತಕರು ಇದ್ದ ಸಂವಾದ ಸಭೆಗಳು ನಡೆದವು. ಹೊನ್ನಾವರದಲ್ಲಿಯೂ ಇದರಿಂದ ಪತ್ರಿಕೆಯ ಪ್ರಸಾರದ ಸಮಸ್ಯೆ, ಅದರ ಗುಣಮಟ್ಟ, ಆಡಳಿತಾತ್ಮಕ ವಿಷಯಗಳು ಹೀಗೆ ಹಲವು ಹನ್ನೆರಡು ಸಂಗತಿಗಳನ್ನು ನೇರವಾಗಿ ಅರಿಯಲು ಸಾಧ್ಯವಾಯ್ತು.


ಕುಂದಾಪುರದಲ್ಲಿ ನಡೆದ ಸಭೆಗೆ ಇನ್ನೊಂದು ವೈಶಿಷ್ಟ್ಯವಿದೆ, ಅಲ್ಲಿ ಭಾಗವಹಿಸಿದವರಲ್ಲಿ ಬಹಳಷ್ಟು ಗೆಳೆಯರು ಕುಂದಾಪುರ ಟೈಲ್ಸ್ ಫ್ಯಾಕ್ಟರಿಗಳ ಕಾರ್ಮಿಕರು. ಇಡೀ ಕರಾವಳಿ ಜಿಲ್ಲೆಗಳ ವಿಶೇಷತೆಯೇ ಅದು, ಅವರ ನಡುವೆಯೇ ಪತ್ರಿಕೆಯ ಪ್ರಸಾರವೂ ಹೆಚ್ಚು.

ಇವುಗಳಲ್ಲೆಲ್ಲಾ ನಾನು, ಸಂಪಾದಕ ಮಂಡಳಿಯ ಸಂಗಾತಿಗಳಾದ ಬಿ.ಮಾಧವ ರವರು ಮಂಗಳೂರು, ಹೊನ್ನಾವರದಲ್ಲಿ, ಕೆ.ಶಂಕರ್ ಕುಂದಾಪುರ, ಉಡುಪಿಯಲ್ಲಿ ಹಾಗೂ ಮಂಗಳೂರಿನಲ್ಲಿ ವಸಂತ ಆಚಾರಿ ಭಾಗವಹಿಸಿದ್ದೆವು. ಮಾತ್ರವಲ್ಲ ಆಯಾ ಜಿಲ್ಲೆಗಳ ಮುಖಂಡರು ಹಾಜರಿದ್ದರು.

ಪ್ರಸಾರಾಂದೋಲನದ ಸಿದ್ಧತೆಯ ಈ ಎಲ್ಲಾ ಸಭೆಗಳಲ್ಲಿ ಅತ್ಯಂತ ಹೆಚ್ಚಿನ ಉತ್ಸಾಹದಾಯಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಗುರಿ ಸಾಧನೆಗೆ ತಾಲ್ಲೂಕು, ಪ್ರದೇಶವಾರು ಸಭೆಗಳನ್ನು ನಡೆಸಿ ವ್ಯಕ್ತಿಗತವಾಗಿ ಮತ್ತು ಸಾಮೂಹಿಕ ತಂಡಗಳಾಗಿ ಚಂದಾ, ಏಜೆನ್ಸಿ ನೋಂದಾವಣೆಗೆ ಹೊರಡಲಾಗುತ್ತಿದೆ. ಈಗಿನ ಪ್ರಸಾರದ ಎರಡರಷ್ಟು ನೋಂದಾಯಿಸುವ ಆತ್ಮವಿಶ್ವಾಸ ಎಲ್ಲರಲ್ಲೂ. ಈ ಪ್ರಯತ್ನಕ್ಕೆ ತಾವು ಕೈಜೋಡಿಸಬಾರದೇಕೆ? ನೀವು ಕನಿಷ್ಠ ಇನ್ನೂ ಒಂದೆರಡು ಹೊಸ ಓದುಗರನ್ನು ಚಂದಾದಾರರನ್ನಾಗಿಸಬಾರದೇಕೆ? ಹಾಗೆಯೇ ಸ್ವಾತಂತ್ರ್ಯೋತ್ಸವದ ವಿಶೇಷ ಸಂಚಿಕೆಗೆ ಉದಾರ ಜಾಹೀರಾತು ಸಂಗ್ರಹಿಸಿಕೊಡುವಲ್ಲಿಯೂ.



ಖ್ಯಾತ ಕಲಾವಿದ ಎಂ.ಎಫ್.ಹುಸೇನ್‌ರಿಗೆ ಜನಶಕ್ತಿಯ ನಮನಗಳು



ಕಪ್ಪು ಹಣ-ಬಿಳಿ ಹಣ-ಯಮದೇವ!

ಯಣ್ಣ, ರಾಮ ದೇವಣ್ಣ ಸುಸ್ತಾಗ್ಯವ್ನಂತೆ, ಮುಂದುಕ್ಯಂಗೆ?

ಅವ್ನ ಬಗ್ಗೆ ಯೋಚ್ನೆ ಮಾಡಕೆ ಸಾದ್ವಿ ರಿತಂಬರಿ, ಆರೆಸ್ಸೆಸ್ಸು, ಎಬಿವಿಪಿ, ಕಡಿಗೆ ಬಿಜೆಪಿಯವ್ರು ಅವ್ರೆ, ನಿನಿಗ್ಯಾಕೆ ಸುಮ್ಕಿರಣ್ಣ.

ಯಣ್ಣ, ಅವ್ನ ಡಿಮ್ಯಾಂಡು ಯತ್ಯತ್ತಗೋ ಓಗ್ಯದಂತೆ, ಒಂದೊಂದ್ ದಿವ್ಸ ಒಂದೊಂದ್ ತರ ಡಿಮ್ಯಾಂಡಿಡ್ತನಂತೆ ನಿಜ್ವೆ?

ಅದೇನೋ ನಿಜ, ಕೆಲುವ್ನ ಸೀಕ್ರೇಟಾಗಿ ಸೆಂಟ್ರು ಗೌರ್ಮೆಂಟ್ ಮುಂದೆ ಇಟ್ಟವ್ನಂತೆ, ಕ್ಯಲುವ್ನ ಯಲ್ಲಾರ್ಗು ಗೊತ್ತಾಂಗಂಗೆ ಇಟ್ಟವ್ನಂತೆ. ಸಲ್ಪ ಐಲುಪೈಲಾಡ್ದಂಗಾಡ್ತನೆ.

ಸೀಕ್ರೇಟೋಗ್ಲಿ, ಪಬ್ಲಿಕ್ ಡಿಮ್ಯಾಂಡೇನಂತೆ?

ಕಪ್ಪು ಹಣ ವರಗಡೆ ತಗಂಬನ್ನಿ ಅಂತವ.

ದುಡ್ನಲ್ಲಿ ಕಪ್ಪು-ಬಿಳಿ ಅಂತ ಇದ್ದತೆ? ಯಾವುದ್ಕೆ ಜಾಸ್ತಿ ಬ್ಯಲೆ?

ಕಪ್ಪು ಹಣ ಅಂದ್ರೆ, ಈಗ ನಿಂಗೆ ನೂರು ರುಪಾಯಿ ಆದಾಯ ಬತ್ತದೆ ಅಂದ್ಕೊ, ಅದ್ಕೆ ಇಷ್ಟು ಅಂತ ಸುಂಕ ಕಟ್ಬೇಕು, ಅದ ಕಟ್ದೆ ಎಲ್ಲಾರ ಮಡ್ಗಿದ್ರೆ ಅದು ಕಪ್ಪು ಅಂತವ. ಅದ ತಗಿರಿ, ಜನುಕ್ಕೆ ಅಂಚಿ ಅಂತ ಅವ್ನೆ

ಅದು ವಳ್ಳೇದೆಯ, ಬಿಳಿ ಹಣ ಅಂದ್ರೇನಣ್ಣ.

ಅದ ಇಲ್ಲೀತಕ ಯಾರೂ ಏಳಿಲ್ಲ. ನಾನೇ ಅಂದಾಜ್ ಮಾಡಿದ್ದಿನಿ. ಬಿಳಿ ಹಣ ಅಂದ್ರೆ ಯಡ್ಯೂರಪ್ಪ ಮಾಡ್ಯವ್ನಲ ಅದು. ಏಳ್ಬೇಕು ಅಂದ್ರೆ ಬೀಜೇಪಿಯವ್ರು ಮಾಡಿರದು ಬಿಳೀ ಹಣ ಅನ್ ಬೌದು. ಅದ್ಕೆ ರಾಮದೇವ ಅದ್ರು ಬಗ್ಗೆ ಮಾತಾಡ್ತಾ ಇಲ್ಲ.

ಕಪ್ಪು ಹಣ ಯಾರ್ದು?

ಕ್ಯಾತೆ
ಈ. ಬಸವರಾಜು
ಮಲ್ಲೇನಹಳ್ಳಿ

ಅದು ಕಾಂಗ್ರೇಸ್ ನವ್ರುದು. ಅದ್ಕೆ ಅವ್ರು ಅದ್ರು ಬಗ್ಗೆ ಸುಮ್ಕಿರ್ತರೆ.

ನಾವು ಯಳ್ಳೂ ಆಚೆಗ್ ಬರ್ಲಿ ಅಂತ ಉಪ್ವಾಸ ಕೂತ್ಕಳನ?

ಅಷ್ಟೆ ಅಮ್ಯಾಲೆ ವಗೆ ಆಕ್ಯಬೇಕಾಯ್ತದೆ. ನಮ್ ಬಗ್ಗೆ ಯಾರಾರೂ ತಲೆ ಕೆಡಿಸ್ಕಳದಿಲ್ಲ. ನಮ್ ಜೊತಿಗೆ ವಸಿ ಜನ ಸೇರಿಸ್ಕಂಡು ಏನಾರ ಮಾಡ್ಬೇಕು ಅಷ್ಟೆಯ.

ಆಮ್ಯಾಲೆ ರಾಮದೇವ ಇನ್ನೇನ್ ಕೇಳ್ತಾ ಅವ್ನೆ?

ಲಂಚ ತಿಂದರ್ನ ನ್ಯಾಣಾಕಿ ಅಂತ ಅವ್ನೆ!

ಅಂಗಾರೆ ಅವ್ನು ರಾಮ್ ದೇವ ಅಲ್ಲ, ಯಮದೇವ ಕಣಪ್ಪ. ಕದ್ರೆ ಏನ್ ಕದ್ದ, ಎಲ್ಲಿ ಕದ್ದ, ಎಷ್ಟ್ ಕದ್ದ ಅದ್ರು ಮ್ಯಾಲೆ ಕೋರ್ಟದೆ, ಅವ್ರು ಸಿಕ್ಷೆ ಕೊಡ್ತರೆ. ಅದ ಬುಟ್ಟು ಏಕದಂ ನ್ಯಾಣಾಕಿ ಅಂತ ಏಳಿದ್ರೆ ಅವ್ನ ಮ್ಯಾಲೆ ಏನೋ ಅನುಮಾನ ನಂಗೆ!

ನಂಗೂ ಸಲ್ಪ ಅನುಮಾನ್ವೆಯ?

ಯಾಕಣ್ಣ?

ಅವ್ನು ಡೆಲ್ಲೀಲಿ ಉಪ್ವಾಸ ಕೂತಿದ್ನಲ, ಆಗ ಆರೆಸ್ಟ್ ಮಾಡಕೆ ಪೋಲೀಸ್ನರು ಓದ್ರಂತೆ. ಇವ್ನು ಅದೇನ್ ಮಾಡ್ತಿರೋ ಮಾಡ್ಕಳಿ ಅಂತ ಜೋರಾಗಿ ಏಳದ್ ಬುಟ್ಟು, ಆಂಜುನೇಯನ್ ತರ ಸ್ಟೇಜ್ ಮ್ಯಾಲಿಂದ ನ್ಯಗ್ದು ಎಂಗುಸ್ರು ಗುಂಪ್ನಲೀಕೋಗಿ ಅವುತ್ಕಂಡ್ನಂತೆ. ಅಮ್ಯಾಲೆ ಪೋಲೀಸ್ನರು ಉಡ್ಕಿದ್ರೆ ಚೂಡಿದಾರ ಆಕ್ಯಂಡು ಗಡ್ಡ ಕಾಣ್ದಂಗೆ ಮುಸುಕಾಕ್ಯಂಡಿದ್ನಂತೆ. ಕ್ವನಿಗೂ ಪೋಲೀಸ್ನರು ಇಡ್ದು ಯಳ್ಕಂಡೋದ್ರಂತೆ. ದ್ವಡ್ ಮನುಸಾಗಿದ್ರೆ ಇಂಗ್ಯಲ್ಲ ಆಡನೆ?

ಅಂಗಾರೆ ಅವ್ನ ರಾಮದೇವ ಅನ್ನ ಬದ್ಲು ಆಂಜನೇಯ ದೇವ ಅನ್ನದೇ ಸರಿ ಅನುಸ್ತದಪ್ಪ!

ಇನ್ನೂ ಒಸಿ ದಿನ ತಾಳು, ಇನ್ನೂ ಏನೇನ್ ಅವ್ತಾರ ಆಡಿ ಏನೇನನಿಸ್ಕತನೋ ನೋಡನ.

ನೀನೇಳದು ಸರಿ ಅನುಸ್ತದೆ. ಅವ್ನ ಜೊತೆ ಸೇರ್ಕಂಡಿರೋರ್ ಮ್ಯಾಲೂ ಅದೇ ಅನುಮಾನ ಬತ್ತಾ ಅದೆ. ಇಲ್ಲಿ ಯಡೂರಪ್ಪ ದುಡ್ ಮೇದು ಮನಿಗ್ಯವ್ನೆ, ಅಲ್ಲಿ ನೋಡಿದ್ರೆ ಬಿಜೇಪಿಯವ್ರು ಬ್ರಷ್ಟಾಚಾರಕ್ಕೆ ದಿಕ್ಕಾರ ಅಂತ ಅವ್ರೆ, ಕರ್ನಾಟಕುದಲ್ಲಿ ಯಾಕೆ ಅವ್ರು ಸುಮ್ಕವ್ರೆ ಅಂತಿನಿ.

ಅವ್ರು ಏನಾರ ಅಂಗ್ ಮಾಡಕೋದ್ರೆ ಯಡೂರಪ್ಪ ಓಗಿ ದುಡ್ ಕೊಟ್ಟು ಸರಿ ಮಾಡ್ಕತನೆ.

ಒಟ್ನಲಿ ಈ ರಾಮ್‌ದೇವ್ರು ಬ್ರಷ್ಟಾಚಾರದ್ ವಿರುದ್ದ ಓರಾಟ ಅನ್ನದು ಇನ್ ಸಲ್ಪ ದಿನ ಓದ್ರೆ ಕುರುಕ್ಷೇತ್ರ, ಸಂಪೂರ್ಣರಾಮಾಯಣ, ಶನಿಪ್ರಭಾವ.. ಈತರ ನಾಟ್ಕ ಆಡಿದಂಗೆ ಆಯ್ತದೆ ಅನುಸ್ತದಪ್ಪ.

ಇನ್ನೂ ಏನೇನ್ ನೋಡ್ಬೇಕೊ ನೋಡನ ಬುಡು.

ಬಿಜೆಪಿ ಸರ್ಕಾರಕ್ಕೆ 3 ವರ್ಷ


ಇಂಥಾ ಭ್ರಷ್ಟ, ಕೋಮುವಾದಿ, ವಂಚಕ ಸರ್ಕಾರವನ್ನು ಕರ್ನಾಟಕ ಹಿಂದೆಂದೂ ಕಂಡಿಲ್ಲ. ದೇಶದಲ್ಲಿ ಕರ್ನಾಟಕದವರೆಂದು ಹೇಳಿಕೊಳ್ಳಲು ನಾಚಿಕೊಳ್ಳಬೇಕಾದ ಸ್ಥಿತಿ ತಂದಿರುವುದೇ ಬಿಜೆಪಿ ಸರ್ಕಾರದ 3 ವರ್ಷದ ಸಾಧನೆ

ರಾಜ್ಯವನ್ನು ಅಧಃಪತನಕ್ಕೆ ತಳ್ಳಿರುವುದೇ ಸಾಧನೆ

ಜಿ.ವಿ.ಶ್ರೀರಾಮರೆಡ್ಡಿ

ದಿವಂಗತ ಕಾಂ॥ಜ್ಯೋತಿ ಬಸುರವರು ಭಾರತೀಯ ಜನತಾ ಪಕ್ಷದ ಬಗ್ಗೆ ಮಾತನಾಡುವಾಗ ಬಿ.ಜೆ.ಪಿ ಎಂಬುದು ಒಂದು 'ಅನಾಗರೀಕ ಪಕ್ಷ'ವೆಂದು ಕರೆಯುತ್ತಿದ್ದರು. ಒಮ್ಮೆ ಅಂದಿನ ಪ್ರಧಾನ ಮಂತ್ರಿಯಾಗಿದ್ದ ಶ್ರೀ ಅಟಲ್ ಬಿಹಾರಿ ವಾಜಿಪೇಯಿಯವರು ಕಲ್ಕತ್ತಾದಲ್ಲಿ ಕಾಂ॥ ಜ್ಯೋತಿಬಸು ಅವರನ್ನು ಬೇಟಿ ಆಗಿ. ನಿಮ್ಮಂತ ಹಿರಿಯ ಗೌರವಾನ್ವಿತರು ನಮ್ಮನ್ನು ಅನಾಗರೀಕರು ಎಂದು ಕರೆಯುವುದು ನನಗೆ ಬಹಳ ನೋವು ಆಗಿದೆ. ದಯವಿಟ್ಟು ಇನ್ನು ಮುಂದೆ ಹಾಗೆ ಕರೆಯಬೇಡಿ ಎಂದು ವಿನಂತಿಸಿದರಂತೆ. ಆಗ ಜ್ಯೋತಿ ಬಸು ಅವರು "ನಾನು ನಿಮ್ಮನ್ನು ಅನಾಗರೀಕರೆಂದು ಕರೆಯಲಿಲ್ಲ. ನಿಮ್ಮ ಪಕ್ಷವಾದ ಬಿ.ಜೆ.ಪಿಯನ್ನು ಅನಾಗರೀಕ ಎಂದು ಕರೆದಿದ್ದು" ಎಂದು ಹೇಳಿದರಂತೆ. ಅಂತಹ ಅನಾಗರೀಕ ರಾಜಕೀಯ ಪಕ್ಷವಾಗಿರುವಂತಹ ಬಿ.ಜೆ.ಪಿಯೆಂಬ ಫ್ಯಾಶಿಸ್ಟ್ ಪಕ್ಷವು ಕಳೆದ ಮೂರು ವರ್ಷಗಳಲ್ಲಿ ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕರ್ನಾಟಕ ರಾಜ್ಯದ ಪರಂಪರೆಯನ್ನು ಅತ್ಯಂತ ಕೀಲು ಮಟ್ಟಕ್ಕೆ ಇಳಿಸಿದಂತಹ ಕಪ್ಪುಚುಕ್ಕೆಯಾಗಿ ಉಳಿಸಿದ ಕೀರ್ತಿ ಇತಿಹಾಸದಲ್ಲಿ ದಾಖಲಾಗಿ ಹೋಯಿತು. ಬಿ.ಜೆ.ಪಿ ಎಂಬ ಅನಾಗರೀಕ ಫ್ಯಾಶಿಸ್ಟ್ ಪಕ್ಷವು ಸಂಸದೀಯ ಪ್ರಜಾಪ್ರಭುತ್ವಕ್ಕೆ ಮಾಡಿರುವ ಅವಮಾನ ಇನ್ನು ಒಂದು ದಶಕವಾದರು ಹೋಗುವುದಿಲ್ಲ.

ಕರ್ನಾಟಕದಲ್ಲಿ ಬಿ.ಜೆ.ಪಿ ಸರ್ಕಾರದ ಹುಟ್ಟೇ ಒಂದು ಅಕ್ರಮ, ಸಂಸದೀಯ ವ್ಯವಸ್ಥೆಯಲ್ಲಿ ಕಂಡರಿಯದ ರೀತಿಯಲ್ಲಿ ಸೃಷ್ಟಿಸಿದ ಆಪರೇಷನ್ ಕಮಲದ ಮುಖಾಂತರ ಅಕ್ರಮ ಕೂಸಾಗಿ ಹುಟ್ಟಿದ ಈ ಸರ್ಕಾರ ಕಳೆದ 3 ವರ್ಷಗಳ ತನ್ನ ಆಡಳಿತದಲ್ಲಿ ಕರ್ನಾಟಕ ರಾಜ್ಯವನ್ನು ಸರ್ವ ರೀತಿಯಲ್ಲೂ ಅಧಃಪತನ ಗೊಳಿಸಿ ರಾಜ್ಯವನ್ನು ದಿವಾಳಿ ಎಬ್ಬಿಸಿದೆ. ಕಳೆದ 3 ವರ್ಷದಲ್ಲಿ 4 ಬಾರಿ ವಿಶ್ವಾಸ ಮತಯಾಚಿಸಿದ ಸರ್ಕಾರ ಒಂದು ಎಷ್ಟು ಸ್ಥಿರಾಡಳಿತವನ್ನು ಮತ್ತು ಸುಭದ್ರ ಆಡಳಿತವನ್ನು ನೀಡಿರಬಹುದೆಂಬುದು ಪ್ರಾಥಮಿಕ ಶಾಲೆಯ ಮಕ್ಕಳಿಗೂ ಅರ್ಥವಾಗುತ್ತದೆ. ತನ್ನ ಭ್ರಷ್ಟಚಾರ ಭಿನ್ನಮತದ ಪರಿಣಾಮವಾಗಿ ನಿರಂತರ ಅಭದ್ರತೆ, ಆತಂಕ ಮತ್ತು ಕುತಂತ್ರಗಳಲ್ಲೇ ಕಳೆದ ಈ ಸರ್ಕಾರ ತನ್ನ 3 ವರ್ಷ ಸಾಧನೆ ಅದ್ಬುತವೆಂದು ದೇಶದಲ್ಲೆ ನಂ.1 ಎಂದು ತೋರಿಸಲು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಜಾಹೀರಾತುಗಳನ್ನು ಮತ್ತು ಪ್ರಕಟಣೆಗಳನ್ನು ಹೊರಡಿಸುತ್ತಿದೆ. ಈ ಜಾಹೀರಾತುಗಳನ್ನು ನೋಡಿದರೆ ಈ ರಾಜ್ಯದ ಇಂದಿನ ಪರಿಸ್ಥಿತಿಯ ಬಗ್ಗೆ ಕನಿಷ್ಠ ಮಾಹಿತಿ ಇರುವವರಿಗೆ ನಗಬೇಕೋ, ಅಳಬೇಕೋ ಗೊತ್ತಾಗುತ್ತಿಲ್ಲ.



ಸಂಸದೀಯ ವ್ಯವಸ್ಥೆಯ ಮೇಲೆ ಹಲ್ಲೆ:

ಕಳೆದ ಮೂರು ವರ್ಷಗಳಲ್ಲಿ ಬಿ.ಜೆ.ಪಿ. ಸರ್ಕಾರ ಮುಂಡಿಸಿದ ಸರಿಸುಮಾರು 2 ಲಕ್ಷ ಕೋಟಿಗಳಷ್ಟು ಅಯ ಮತ್ತು ವ್ಯಯದ ಧನವಿನಯೋಗ ಮಸೂದೆಗಳನ್ನು ಚರ್ಚೆ ಇಲ್ಲದೆ ಅಂಗೀಕಾರ ಮಾಡಿರುವುದು ಇಡೀ ದೇಶದ ಸಂಸದೀಯ ವ್ಯವಸ್ಥೆಯಲ್ಲೇ ಒಂದು ಕಪ್ಪು ಚುಕ್ಕೆ. ಇದು ಸಾಧ್ಯವಾಗಿದ್ದು ಬಿ.ಜೆ.ಪಿ ಎಂಬ ಫ್ಯಾಶಿಷ್ಟ್ ಪಕ್ಷಕ್ಕೆ ಮಾತ್ರವೇ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಗಾಡಿಯ ಎರಡು ಚಕ್ರಗಳಿದ್ದಂತೆ. ಅದೆರಡಕ್ಕೂ ಸಂಸದೀಯ ವ್ಯವಸ್ಥೆ ಯನ್ನು ಉನ್ನತ ಮಟ್ಟಕ್ಕೇರಿಸುವುದರಲ್ಲಿ ಸಮಾನ ಜವಾಬ್ದಾರಿ ಇರುತ್ತದೆ. ಆದರೆ ಆಡಳಿತ ಪಕ್ಷಕ್ಕೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಆದರೆ ಕಳೆದ 3 ವರ್ಷಗಳಿಂದ ವಿರೋಧ ಪಕ್ಷಗಳಿಗೆ ಕನಿಷ್ಠ ಗೌರವವನ್ನು ಕೊಡದೆ ನಿರಂತರ ಸಂಘರ್ಷಕ್ಕೆ ಇಳಿದು ವಿರೋಧ ಪಕ್ಷಗಳೆಂಬುವುದು ಒಂದು ಆಡಳಿತ ಪಕ್ಷಕ್ಕೆ ಕಂಠಕ ಎಂಬ ರೀತಿಯಲ್ಲಿ ವರ್ತಿಸಿ ತಾನು ಅಪ್ಪಟ ಅನಾಗರೀಕ ಮತ್ತು ಫ್ಯಾಶಿಷ್ಟ್ ಪಕ್ಷವೆಂದು ತೋರಿಸಿ ಬಿಟ್ಟಿದೆ. ಯಡಿಯೂರಪ್ಪ ನೇತೃತ್ವದ ಬಿ.ಜೆ.ಪಿ ಸರ್ಕಾರ. ಈಬಾರ ನಡೆಸಿದ 10 ದಿವಸಗಳ ಅಧಿವೇಶನವನ್ನು ವಿರೋಧ ಪಕ್ಷಗಳ ಬಹಿಷ್ಕಾರದ ಮಧ್ಯೆ ವಿಧಾನಸಭೆಯಲ್ಲಿ ಕಡೆಯ ದಿವಸ ಅಂದರೆ 7/06/2011 ರಂದು ಮಂಗಳವಾರ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಮೇಲೆ ನಡೆಸಿದ ಮಾತಿನದಾಳಿ ಮತ್ತು ಅವರ ಉಪಯೋಗಿಸಿದ ಪದಪುಂಜಗಳು ಬಿ.ಜೆ.ಪಿ ಎಂಬುದು ತಾನು ಎಷ್ಟು ಕೀಳು ಮಟ್ಟದ ಅನಾಗರೀಕ ಪಕ್ಷವೆಂದು ಜಗಜ್ಜಾಹೀರುಗೊಳಿಸಿದೆ. ಇಂತಹ ಅನಾಗರೀಕ ಪಕ್ಷದಿಂದ ಈ ರಾಜ್ಯದ ಸೌಜನ್ಯ ಪೂರಿತ ಜನ ಏನನ್ನು ತಾನೇ ನಿರೀಕ್ಷಿಸಲು ಸಾಧ್ಯ?

ಸಂಸದೀಯ ವ್ಯವಸ್ಥೆಯನ್ನು ಎಷ್ಟು ಅಪಮೌಲ್ಯ ಗೂಳಿಸಿದ್ದಾರೆಂಬುದಕ್ಕೆ ಅನರ್ಹ ಶಾಸಕರ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯ ಸಭಾಧ್ಯಕ್ಷರ ಮತ್ತು ಮುಖ್ಯ ಮಂತ್ರಿಗಳ ನಡವಳಿಕೆಯ ಬಗ್ಗೆ ಮಾಡಿರುವ ಟೀಕೆ ದೇಶದ ಸಂಸದೀಯ ಇತಿಹಾಸದಲ್ಲೇ ಒಂದು ಕಪ್ಪು ಚುಕ್ಕೆಯಾಗಿ ದಾಖಲಾಗಿದೆ. ಇದು ಬಿ.ಜೆ.ಪಿ. ಎಂಬ ಪ್ರಜಾಪ್ರಭುತ್ವ ವಿರೋಧಿ ಪಕ್ಷದಿಂದಲೇ ಆಯಿತು ಎಂಬುದು ಒಂದು ಕ್ರೂರ ಸತ್ಯವಾಗಿ ಮತ್ತು ವ್ಯಂಗವಾಗಿ ಇತಿಹಾಸಲ್ಲಿ ದಾಖಲಾಗಿದೆ.

ಆರ್ಥಿಕ ನೀತಿಗಳ ದಿವಾಳಿಕೋರತನ:

ದಿನ ಬೆಳಗಾದರೆ ಅಭಿವೃದ್ಧಿ ಮಂತ್ರ ಜಪಿಸುತ್ತಾ ಬಂದಿರುವ ಬಿ.ಜೆ.ಪಿ. ರಾಜ್ಯದ ಅಭಿವೃದ್ಧಿಯನ್ನು ಯಾವದಿಕ್ಕಿಗೆ ತೆಗೆದುಕೊಂಡು ಹೋಗಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದರ ಟೊಳ್ಳುತನ ಅರ್ಥವಾಗುತ್ತದೆ ಕಳೆದ 3 ವರ್ಷಗಳಲ್ಲಿ ಕೈಗಾರಿಕರಂಗದ ಉತ್ಪತ್ತಿ ಗಣನೀಯವಾಗಿ ಕುಸಿದಿದೆ (ಐ.ಟಿ.ಬಿ.ಟಿ. ಯು ಸೇರಿ) ಇದರಿಂದಾಗಿ ನಿರುದ್ಯೋಗ ಆಗಾಧ ಪ್ರಮಾಣದಲ್ಲಿ ಬೆಳೆದಿದೆ. ಪರಿಣಾಮವಾಗಿ ಬಹುತೇಕ ಜನರ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಗಿ ಜೀವನದ ಮಟ್ಟ ಕುಸಿಯತೊಡಗಿದೆ. ಹಲವಾರು ಕೈಗಾರಿಕೆಗಳು ಮುಚ್ಚಿಹೋಗಿ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಹೊಸ ಉದ್ಯೋಗಾವಕಾಶಗಳನ್ನು ಸೃಷ್ಠಿ ಮಾಡುವುದರ ಬದಲಿಗೆ ಇದ್ದ ಉದ್ಯೋಗಗಳನ್ನು ಕಸಿಯ ತೊಡಗಿದೆ. ಇನ್ನು ಸರ್ಕಾರಿ ವಲಯದಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ ಅವುಗಳನ್ನು ತುಂಬಿಲಿಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳದೆ ನಿವೃತ್ತಿ ವಯಸ್ಸಿನ ಮಿತಿಯನ್ನು ಹೆಚ್ಚಿಸಿ ಸರ್ಕಾರವೇ ನಿರುದ್ಯೋಗ ಸಮಸ್ಯೆಯನ್ನು ಹುಟ್ಟು ಹಾಕುತ್ತಿದೆ. ಅಸಂಘಟಿತ ಕಾರ್ಮಿಕರು ಕಳೆದ 3 ವರ್ಷಗಳಲ್ಲಿ ತಮ್ಮ ಕೆಲಸ ಭದ್ರತೆ ಮತ್ತು ಕನಿಷ್ಠ ಕೂಲಿ ಜಾರಿಯ ಬಗ್ಗೆ ಲೆಕ್ಕವಿಲ್ಲದಷ್ಟು ಹೋರಾಟಗಳನ್ನು ನಡೆಸಿದರು. ಅವರ ಸಮಸ್ಯೆಗಳನ್ನು ಪರಿಹಾರ ಮಾಡಲಿಲ್ಲ. ಕಳೆದ ಒಂದು ವರ್ಷದ ಹಿಂದೆ ಕೊಟಿಗಟ್ಟಲೇ

ಪುಟ 10ಕ್ಕೆ

ಬಿ.ಜೆ.ಪಿ ಸರ್ಕಾರದ 3 ವರ್ಷಗಳ ಸಾದನೆಗಳು ಎಂದರೆ...

1. ಪ್ರಜಾಪ್ರಭುತ್ವದ ಮೇಲೆ ಹಲ್ಲೆ.
2. ಸಂಸದೀಯ ವ್ಯವಸ್ಥೆ ಅವಹೇಳನ.
3. ಬ್ರಹ್ಮಾಂಡ ಭ್ರಷ್ಟಾಚಾರ.
4. ರಾಜ್ಯಸಂಪತ್ತಿನ ಲೂಟಿ.

ಗಣಿಹಗರಣಗಳು, ಭೂಹಗರಣಗಳು, ಶಿಕ್ಷಣ ರಂಗದ ಹಗರಣಗಳು ಇದರಿಂದಾಗಿ ಯಡಿಯೂರಪ್ಪನ ಮಂತ್ರಿಮಂಡಲದ ಕೆಳವು ಸದಸ್ಯರು ಮತ್ತು ಸ್ವತಃ ಮುಖ್ಯಮಂತ್ರಿಗಳೂ ಜೈಲಿಗೆ ಹೋಗುವ ಎಲ್ಲಾ ಸಾಧ್ಯತೆಗಳಿವೆ. ಇಷ್ಟಾದರು ಬಿ.ಜೆ.ಪಿ ಎಂಬ ಈ ಅನಾಗರೀಕ, ಭ್ರಷ್ಟ ಫ್ಯಾಶಿಷ್ಟ್ ಪಕ್ಷ ದೇಶದಾದ್ಯಂತ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತೇನೆಂದು ಬೊಬ್ಬಿಡುತ್ತಿರುವುದು. ಪ್ರಜಾಪ್ರಭುತ್ವದ ಕ್ರೂರವ್ಯಂಗ್ಯವಲ್ಲವೇ? ಲಜ್ಜೆಗೆಟ್ಟ ರಾಜಕಾರಣದ ಭಂಡತನ ವಲ್ಲವೇ? ಇಂತಹ ಪ್ರಜಾಪ್ರಭುತ್ವ ವಿರೋಧಿ ಫ್ಯಾಶಿಷ್ಟ್ ಸರ್ಕಾರವನ್ನು ಕರ್ನಾಟಕದ ಜನತೆ ಕಿತ್ತೊಗೆಯಬೇಕಾಗಿದೆ ಮತ್ತು ಕಳೆದು ಹೋಗಿರುವ ಕರ್ನಾಟಕ ರಾಜ್ಯದ ಮಾನ ಮರ್ಯಾದೆ, ಗೌರವಗಳನ್ನು ಮರಳಿ ಪಡೆಯಬೇಕಾಗಿದೆ. ಇದಕ್ಕೆ ವಿಸ್ತೃತ ಜನಾಂದೋಲನಗಳನ್ನು ರೂಪಿಸಬೇಕಾಗಿದೆ.



ಬೆಳ್ತಂಗಡಿ: ಸಿಐಟಿಯು ಸಂಗಾತಿ ಗುಂಪು ಯೋಜನೆ 5 ವರ್ಷ ತುಂಬಿದ ಗುಂಪುಗಳಿಗೆ ಲಾಭಾಂಶ ವಿತರಣೆ ಮತ್ತು ಬಾಲ ಸಂಗಾತಿಗಳಿಗೆ ಉಚಿತ ಪುಸ್ತಕ ವಿತರಣೆ

ಸಿಐಟಿಯು ಸಂಗಾತಿ ಗುಂಪು ಯೋಜನೆ, ಬೆಳ್ತಂಗಡಿಯಲ್ಲಿ ಪ್ರಾರಂಭವಾಗಿ 7 ವರ್ಷಗಳು ಕಳೆದವು. 5 ವರ್ಷ ತುಂಬಿದ ಗುಂಪುಗಳಿಗೆ ಲಾಭಾಂಶ ವಿತರಣೆ ಮಾಡಲಾಗುತ್ತದೆ. 2011ಕ್ಕೆ 5 ವರ್ಷ ತುಂಬಿದ 65 ಗುಂಪುಗಳಿಗೆ ರೂ.2,50,000/- ಅವರವರ ಗುಂಪಲ್ಲಿ ಬಂದ ಆದಾಯವನ್ನು, ಸದಸ್ಯರ ಹಾಜರಾತಿ ಹಾಗೂ ಚಟುವಟಿಕೆಗಳಿಗೆ ಮೇ ದಿನಾಚರಣೆ ಭಾಗವಹಿಸಿದ ಆಧಾರದಲ್ಲಿ ಹಂಚಲಾಗುತ್ತದೆ. ಕಾರ್ಮಿಕರು ಈ ಸಭೆಗೆ ಉತ್ಸಾಹದಿಂದ ಭಾಗವಹಿಸುತ್ತಾರೆ. ಹಾಗೂ ಈ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಬಳಸುತ್ತಾರೆ.



ಅದೇ ರೀತಿ ತಾಲ್ಲೂಕಿನಲ್ಲಿರುವ 26 ಬಾಲ ಸಂಗಾತಿ ಗುಂಪುಗಳ 250 ವಿದ್ಯಾರ್ಥಿಗಳಿಗೆ, ಸಿಐಟಿಯು ಸಂಗಾತಿ ಗುಂಪು ಯೋಜನೆ ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಜಂಟಿ ಆಶ್ರಯದಲ್ಲಿ 29.05.2011ರಂದು ಉಚಿತ ಪುಸ್ತಕ ವಿತರಣೆ ಮಾಡಲಾಯಿತು. ಬಾಲ ಸಂಗಾತಿ ಗುಂಪುಗಳು ಸಂಗಾತಿ ಗುಂಪುಗಳ ಸದಸ್ಯರ ಮಕ್ಕಳಾಗಿರಬೇಕು ಎಂಬ ನಿಯಮದಲ್ಲಿ ರಚಿಸಲಾಗುತ್ತದೆ. ಅವರನ್ನು ಎಸ್‌ಎಫ್‌ಐ ಸಂಘಟನೆಗೆ ಜವಾಬ್ದಾರಿ ನೀಡಿ ಮುನ್ನಡೆಸಲಾಗುತ್ತಿದೆ. ಈ ಬಾಲ ಸಂಗಾತಿಗಳಿಗೆ 6ನೇ ತರಗತಿಯಿಂದ ಮೇಲ್ಪಟ್ಟು ಡಿಗ್ರಿ ತನಕದ 250 ವಿದ್ಯಾರ್ಥಿಗಳಿಗೆ ರೂ.30,000/-ದಷ್ಟು ಮೌಲ್ಯದ ಪುಸ್ತಕಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಮುದಾಯದ ದಾಮೋದರ ಭಟ್ ಅವರು ಸಿಐಟಿಯುನ ಪೂರ್ಣಕಾಲದ ಕೆಲಸಗಾರರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ತನ್ನ ಖರ್ಚಲ್ಲಿ ಮಾಡಿಸುತ್ತೇನೆಂದು ಘೋಷಣೆ ಮಾಡಿ ಕಾರ್ಯಕರ್ತರಿಗೆ ಉತ್ಸಾಹ ತುಂಬಿದರು.



ಈ ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ಸಂಗಾತಿ ಗುಂಪು ಯೋಜನೆಯ ವ್ಯವಸ್ಥಾಪಕ ನಿರ್ದೇಶಕರಾದ ಬಿ.ಎಂ.ಭಟ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರೈತ ಮುಖಂಡರಾದ ಹರಿದಾಸ್ ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಶಿವಕುಮಾರ್ ಬೆಳ್ತಂಗಡಿ ತಾಲ್ಲೂಕು ಬೀಡಿ ಕೆಲಸಗಾರ ಸಂಘದ ಕಾರ್ಯದರ್ಶಿ ಜಯರಾಂ, ಡಿವೈಎಫ್‌ಐನ ಶ್ಯಾಂರಾಜ್, ಶೇಖರ್, ಕಟ್ಟಡ ಕಾರ್ಮಿಕ ಸಂಘದ ತಾಲ್ಲುಕು ಮುಖಂಡರುಗಳಾದ ವಸಂತ, ನಿಲೇಶ್, ಕಾರ್ಯಕರ್ತ ಮುಖಂಡರುಗಳಾದ ಜಯಂತಿ, ಸುಂದರಿ, ನೆಬಿಸ, ಲೋಕೇಶ್, ದೇವಕಿ, ಜಯಶ್ರೀ, ಕವಿತ, ಪ್ರಶಾಂತ, ಜೆಎಂಎಸ್‌ನ ಸುಕನ್ಯ, ಕಿರಣಪ್ರಭಾ, ಎಸ್‌ಎಫ್‌ಐನ ಸುಜಿತ್, ಸುದೀಪ್ ಅವರು ಉಪಸ್ಥಿತರಿದ್ದರು.

ಬಾಲ ಸಂಗಾತಿ ಗುಂಪುಗಳ ಮಕ್ಕಳಿಗೆ 28-29 ಮೇ 2011 ರಂದು 2 ದಿವಸಗಳ ಚಿಣ್ಣರ ಮೇಳ ನಡೆಸಿ, 29ರಂದು ಅಪರಾಹ್ನ ಈ ಪುಸ್ತಕ ವಿತರಣೆ ನಡೆಸಲಾಗಿತ್ತು. ಚಿಣ್ಣರ ಮೇಳವನ್ನು ಪ್ರಶಾಂತ, ಜಯರಾಂ, ನರೇಂದ್ರ ನಾಯಕ್ (ಖ್ಯಾತ ವಿಚಾರವಾದಿ ಮಂಗಳೂರು) ಕೃಷ್ಣಯ್ಯ ಸುಜಿತ್ ಅವರುಗಳು ನಡೆಸಿಕೊಟ್ಟರು.

ಬೀಡಿ ಕಾರ್ಮಿಕರಿಗೆ ಎಕೆಜಿ ಗೃಹ ನಿರ್ಮಾಣ ಸಹಕಾರಿ ಯೋಜನೆ

ವಸತಿ ರಹಿತ ಬೀಡಿ ಕಾರ್ಮಿಕರಿಗೆ ಮನೆ ಕಟ್ಟಿ ಕೊಡುವ ಉದ್ದೇಶದಿಂದ ದ.ಕ. ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಂಗಾತಿ ಎಕೆಜಿ ಬೀಡಿ ಕಾರ್ಮಿಕರ ಗೃಹ ನಿರ್ಮಾಣ ಸಹಕಾರಿ ಸಂಘವನ್ನು ರಚಿಸಲು ನಿರ್ಧರಿಸಲಾಯಿತು. ಕಳೆದ 6 ತಿಂಗಳಿಂದ ಇದಕ್ಕಾಗಿ ಅವಿರತ ದುಡಿದು ಒಟ್ಟು 206 ಶೇರುದಾರರನ್ನು ನೋಂದಾಯಿಸಿ ಸಹಕಾರಿ ಸಂಘವನ್ನು ದ.ಕ. ಜಿಲ್ಲಾ ಸಂಗಾತಿ ಎಕೆಜಿ ಗೃಹ ನಿರ್ಮಾಣ ಸಹಕಾರಿ ಸಂಘ ಎಂದು ಜಿಲ್ಲೆಯ ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಾಯಿತವಾಗಿದೆ. ಇದರ ಪ್ರಥಮ ಮಹಾಸಭೆಯ ಬೆಳ್ತಂಗಡಿಯ ಅಂಬೇಡ್ಕರ್ ಭವನದಲ್ಲಿ 28.06.2011ರಂದು ನಡೆಯಿತು. ಸಂಘದ ಎಲ್ಲಾ 206 ಸದಸ್ಯರು ಕೂಡಾ ಹಾಜರಾಗಿ ಈ ಸಭೆಯಲ್ಲಿ ಬೈಲಾ ಅಂಗೀಕಾರ ಮೊದಲಾದ ಅಗತ್ಯ ತೀರ್ಮಾನಗಳನ್ನು ಕೈಗೊಳ್ಳಲಾಯಿತು.



2011-12ನೇ ಸಾಲಿನಿಂದ 2016-17ನೇ ಸಾಲಿಗೆ ಪ್ರಥಮ ಆಡಳಿತ ಮಂಡಳಿಯನ್ನು ಮಹಾಸಭೆ ಆಯ್ಕೆ ಮಾಡಿತು. ಆಯ್ಕೆ ಆದ ಮಂಡಳಿ ತಕ್ಷಣ ಸಭೆ ಸೇರಿ ಹರಿದಾಸ್ ಅವರನ್ನು ಅಧ್ಯಕ್ಷರನ್ನಾಗಿಯೂ, ಬಿ.ಎಂ.ಭಟ್ ಅವರನ್ನು ಉಪಾಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತು. ಇತರ ಆಯ್ಕೆ ಆದ ನಿರ್ದೇಶಕರುಗಳೆಂದರೆ ಶಿವಕುಮಾರ್, ಶ್ಯಾಂರಾಜ್, ಜಯರಾಂ, ಸುಕನ್ಯ, ಶೇಖರ, ದಾಮೋದರ ಭಟ್, ಸಯ್ಯದ್ ಹಬೀಬ್ ಸಾಹೇಬ್, ವೈ.ನಾಣ್ಯಪ್ಪ ಪೂಜಾರಿ, ನಾರಾಯಣ ಭಿಡೆ, ಜಿ.ಜೋ.ಪೌಲ್ ಹಾಗೂ ಮಹಾಬಲ ಕೋಟ್ಯಾನ್.

ನಿರ್ದೇಶರಲ್ಲೋರ್ವರಾದ ಜಿಜೋ.ಪೌಲ್ ಬೆಳ್ತಂಗಡಿಯ ಕೋರ್ಟ್ ರಸ್ತೆಯಲ್ಲಿರುವ ತನ್ನ ಕಟ್ಟಡದಲ್ಲಿ ಒಂದು ಕೋಣೆಯನ್ನು ಸೊಸೈಟಿಗೆ ಕಛೇರಿಗಾಗಿ ಉಚಿತವಾಗಿ ನೀಡಿದರು. ಅದೇ ರೀತಿ ಸಯ್ಯದ್ ಹಬೀಬ್ ಸಾಹೇಬ್ ಅವರು ತನ್ನ 1 ಎಕರೆ ಭೂಮಿಯನ್ನು ಬೀಡಿ ಕಾರ್ಮಿಕರಿಗೆ ಮನೆ ಕಟ್ಟಿಕೊಡಲು ದಾನವಾಗಿ ನೀಡಿದರು. ಈಗಾಗಲೇ 2 ಎಕರೆ ಜಮೀನನ್ನು ತೆಂಕಕಾಂದೂರಲ್ಲಿ ಸೊಸೈಟಿ ಖರೀದಿ ಮಾಡಿದೆ. ಅದರ ಸುತ್ತ ಇರುವ ಸರ್ಕಾರಿ ಜಮೀನನ್ನು ಸೊಸೈಟಿಗೆ ನೀಡಲು ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಲಾಗಿದ್ದು, ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.



ಇನ್ನು 3 ವರ್ಷದ ಒಳಗೆ ಮಹಾರಾಷ್ಟ್ರದ ಸೊಲ್ಲಾಪುರ ಮಾದರಿಯಲ್ಲಿ ತಾಲ್ಲೂಕಿನಲ್ಲಿ ಕನಿಷ್ಠ 500 ಮನೆಗಳನ್ನು ನಿರ್ಮಿಸಲು ನಿರ್ಧರಿಸಿ ದುಡಿಯಲಾಗುತ್ತಿದೆ ಎಂದು ಮಹಾಸಭೆಗೆ ತಿಳಿಸಲಾಯಿತು.

ಉಡುಪಿ ಜಿಲ್ಲೆ-ಜನಶಕ್ತಿ ಪತ್ರಿಕೆ ಪ್ರಸಾರಂದೋಲನ ಏಜೆಂಟರು, ಓದುಗರ ಸಮಾವೇಶ

ದುಡಿವ ಜನರ ಪ್ರಾಣಮಿತ್ರ ಜನಶಕ್ತಿ ಕನ್ನಡ ವಾರಪತ್ರಿಕೆಯ ಏಜೆಂಟರ ಮತ್ತು ಓದುಗರ ಸಮಾವೇಶ ಉಡುಪಿ ಜಿಲ್ಲೆಯ ಉಡುಪಿ, ಕುಂದಾಪುರ ತಾಲ್ಲೂಕಿನಲ್ಲಿ ಯಶಸ್ವಿಯಾಗಿ ಜರಗಿತು. ಜನಶಕ್ತಿ ವಾರಪತ್ರಿಕೆಯ ಸಂಪಾದಕ ಕಾಂ:ಎಸ್.ವೈ.ಗುರುಶಾಂತ್ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದರು.

ಉಡುಪಿ ಜಿಲ್ಲೆಯಲ್ಲಿ ನಿಶ್ಚಿತ ವರದಿಗಾರರನ್ನು ಗುರುತಿಸಿ ವ್ಯವಸ್ಥಿತವಾಗಿ ಪತ್ರಿಕೆ ಹೊರತರಲು-ಪತ್ರಿಕೆಯ ಪ್ರಸಾರ ಹೆಚ್ಚಿಸಲು ರಾಜ್ಯಾದ್ಯಂತ ಜೂನ್-15 ರಿಂದ ಜುಲೈ 15ರವರೆ ಪ್ರಸಾರಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆದ್ಯತೆ ಜಿಲ್ಲೆಯಾದ ಉಡುಪಿಯಲ್ಲಿ ಜನಶಕ್ತಿ ಪತ್ರಿಕೆ ಪ್ರಚಾರ-ಪ್ರಸಾರ ಮಾಡುವಲ್ಲಿ, ಪ್ರಸಾರಂದೋಲನ ಮಾದರಿಯಲ್ಲಿ ಮಾಡುವುದಕ್ಕೆ ಜಿಲ್ಲೆಯಾದ್ಯಂತ ಪ್ರತಿಕೆ ಪ್ರಸಾರ ಸಂಖ್ಯೆ ಹೆಚ್ಚಿಸಲು, ವಾಚನಾಲಯ, ಗ್ರಾಮ ಪಂಚಾಯತ್ ಕಛೇರಿ, ಸೊಸೈಟಿ, ಸ್ಥಳೀಯ ಸಂಘ ಸಂಸ್ಥೆ, ಪುರಸಭೆ ಕಛೇರಿಗಳಿಗೆ ಸಾಮೂಹಿಕವಾಗಿ ಭೇಟಿ ನೀಡಿ ಚಂದಾದಾರರನ್ನು ನೋಂದಣಿ ಮಾಡುವುದಕ್ಕೆ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಯಿತು. ಸಮಾವೇಶದಲ್ಲಿ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್, ಪಿ.ವಿಶ್ವನಾಥ ರೈ, ಮಹಾಬಲ ವಡೇರ ಹೋಬಳಿ ಉಪಸ್ಥಿತರಿದ್ದರು.

ವರದಿ: ವೆಂಕಟೇಶಕೋಣಿ, ಬೈಂದೂರು




ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕನಿಷ್ಠ ವೇತನ ಹೆಚ್ಚಳ, ಗ್ರಾಮ ಪಂಚಾಯತಿಗಳಿಗೆ ಅನುದಾನ ಹೆಚ್ಚಳಕ್ಕೆ ಒತ್ತಾಯಿಸಿ ಜೂನ್ 6-7 ರಂದು ಪಂಚಾಯತ್ ನೌಕರರ ಅನಿರ್ದಿಷ್ಟ ಧರಣಿ



ಬಿಎಂಟಿಸಿ ನೌಕರರ ಪ್ರತಿಭಟನೆ

ಕಾರ್ಮಿಕರನ್ನು ಹಿಂಡಿ ಹಿಪ್ಪೆ ಮಾಡುವ ಆಡಳಿತ ಮಂಡಳಿಯ ಧೋರಣೆ ಖಂಡಿಸಿ ಬಿಎಂಟಿಸಿ ಕಾರ್ಮಿಕರ ಪ್ರತಿಭಟನೆ ಬೆಂಗಳೂರು. ಮೇ 27.



ಆಡಳಿತಮಂಡಳಿಯೊಂದಿಗೆ ಮಾತುಕತೆಯಲ್ಲಿ ಪಾಲ್ಗೊಂಡಿರುವ ಸಿಐಟಿಯು ನಾಯಕರು

ಅಗಲಿದ ಲಿಂಗದೇವರು ಹಳೆಮನೆಯವರಿಗೆ ಸಮುದಾಯದ ಶ್ರದ್ಧಾಂಜಲಿ



ರಂಗಾಯಣದ ನಿರ್ದೇಶಕ ಲಿಂಗದೇವರು ಹಳೆಮನೆ ತೀವ್ರ ಹೃದಯಾಘಾತದಿಂದ ದಿನಾಂಕ 08-06-2011 ರಂದು ಮೈಸೂರಿನಲ್ಲಿ ನಿಧನರಾಗಿದ್ದಾರೆ.

ಖ್ಯಾತ ರಂಗಕರ್ಮಿ, ವಿಮರ್ಶಕ, ಪ್ರಗತಿಪರ ಚಿಂತಕ, ಲಿಂಗದೇವರು ಹಳೆಮನೆಯವರ ಅಕಾಲಿಕ ಮರಣಕ್ಕೆ ಸಮುದಾಯ ರಾಜ್ಯ ಸಮಿತಿಯು ತೀವ್ರ ಶೋಕ ವ್ಯಕ್ತಪಡಿಸಿದೆ.

ಸಮುದಾಯ ಸಾಂಸ್ಕೃತಿಕ ಸಂಘಟನೆ ಯ ಮಾಜಿ ರಾಜ್ಯ ಉಪಾಧ್ಯಕ್ಷರು ಮತ್ತು ಮೈಸೂರು ಘಟಕದ ಅಧ್ಯಕ್ಷರೂ ಆಗಿದ್ದ ಹಳೆಮನೆಯವರು ಸಮುದಾಯ 70ರ ದಶಕದಲ್ಲಿ ನಡೆಸಿದ ರಾಜ್ಯವ್ಯಾಪಿ ಸಾಂಸ್ಕೃತಿಕ ಜಾಥಾದಲ್ಲಿ ಸಕ್ರಿಯವಾಗಿ ಪಾಲ್ಗೊಂಡವರು. ನಂತರದ ದಿನಗಳಲ್ಲಿಯೂ ಸಮುದಾಯದ ಎಲ್ಲ ಚಟುವಟಿಕೆಗಳ ಜೊತೆ ಇದ್ದು ಮಾರ್ಗದರ್ಶನ ಮಾಡುತ್ತಿದ್ದವರು. ಅವರ ನಿಧನದಿಂದ ಸಾಂಸ್ಕೃತಿಕ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಕನ್ನಡದ ಸಾರಸ್ವತ ಮತ್ತು ಸಾಂಸ್ಕೃತಿಕ ಲೋಕಕ್ಕೆ ಅವರ ಕೊಡುಗೆಯನ್ನು ಸಮುದಾಯ ಸದಾ ಸ್ಮರಿಸುತ್ತದೆ ಎಂದು 'ಸಮುದಾಯ'ದ ಹೇಳಿಕೆ ತಿಳಿಸಿದೆ.

ನಗೆಪಾಟಲಿಗೀಡಾದ ರಾಮದೇವ್ ಹೋರಾಟ ಕಪ್ಪುಹಣ ಹೊರತರಲು ತುರ್ತು ಕ್ರಮಕ್ಕೆ ಸಿಪಿಐ(ಎಂ) ಆಗ್ರಹ

ರಾಮದೇವ್ ಹಾಗೂ ಬೆಂಬಲಿಗರ ಮೇಲೆ ಮಧ್ಯರಾತ್ರಿಯಲ್ಲಿನ ಪೋಲೀಸರ ಕಾರ್ಯಾಚರಣೆಯನ್ನು ಸಂಕುಚಿತ ದೃಷ್ಟಿಯಿಂದ ಕೂಡಿದ್ದು ಎಂದು ಜೂನ್ 5, 2011ರಂದು ನೀಡಿದ ಹೇಳಿಕೆಯಲ್ಲಿ ಸಿಪಿಐ(ಎಂ) ಪಿ.ಬಿ. ಟೀಕಿಸಿದೆ. ಅಲ್ಲಿ ಕಾನೂನು ಸುವ್ಯವಸ್ಥೆ ಸಮಸ್ಯೆ ಉದ್ಭವಿಸಿರಲಿಲ್ಲ.

ಹಾಗೆಯೇ ರಾಮದೇವ್‌ರವರ ಬೇಡಿಕೆಗಳ ಮಂಡನೆ ರೀತಿ ಸರ್ಕಾರದೊಂದಿಗೆ ಏರ್ಪಟ್ಟ ಗುಪ್ತ ಒಪ್ಪಂದಗಳು, ಅದರಾಧಾರದಲ್ಲಿನ ಭರವಸೆಗಳು ಮತ್ತು ಸತ್ಯಾಗ್ರಹದ ವಿಸ್ತರಣೆ ಕಪ್ಪುಹಣದ ವಿರುದ್ಧದ ಆ ಹೋರಾಟವನ್ನು, ಬೇಡಿಕೆಗಳನ್ನು ಕ್ಷುಲ್ಲಕಗೊಳಿಸಿ ನಗೆ ಪಾಟಲಿಗೆ ಈಡುಮಾಡಿದೆ ಎಂದು ಅವಲೋಕಿಸಿದೆ.

ತೆರೆಯ ಹಿಂದಿನ ವ್ಯವಹಾರಗಳು ಇಬ್ಬರ ಬಗ್ಗೆಯೂ ವಿಶ್ವಾರ್ಹತೆ ಕುಸಿಯುವಂತೆ ಮಾಡಿದೆ. ಕೋಮುವಾದಿ ಶಕ್ತಿಗಳು ವೇದಿಕೆಯಲ್ಲಿ ಕಾಣಿಸಿಕೊಂಡಿದ್ದು, ರಾಮದೇವ್‌ರ ಸೈದ್ಧಾಂತಿಕ ತಳಹದಿಯನ್ನು ತೋರಿಸಿದೆ ಎಂದು ಸಿಪಿಐ(ಎಂ) ಟೀಕಿಸಿದೆ.

ವಿದೇಶದಲ್ಲಿಡಲಾಗಿರುವ ಭಾರತೀಯರ ಕಪ್ಪುಹಣವನ್ನು ವಾಪಸ್ಸು ತರಬೇಕು ಎಂಬುದು ನಾಗರೀಕರೆಲ್ಲರ ನ್ಯಾಯಬದ್ಧ ಬೇಡಿಕೆಯಾಗಿದೆ. ಸುಪ್ರೀಂಕೋರ್ಟ್ ಸಹ ಕೇಂದ್ರ ಸರ್ಕಾರವನ್ನು ಟೀಕಿಸಿದೆ. ಆದರೆ ಯುಪಿಎ-2 ಸರ್ಕಾರ, ಕಾಂಗ್ರೆಸ್ ಪಕ್ಷಗಳು ಅದನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ ಎಂದಿದೆ.

ಆದ್ದರಿಂದ ವಿದೇಶದಲ್ಲಿಡಲಾದ ಕಾನೂನುಬಾಹಿರ ಹಣವನ್ನು ತರಲು, ಇದರಲ್ಲಿ ಭಾಗಿಯಾಗಿರುವವರ ಹೆಸರುಗಳ ಬಹಿರಂಗಪಡಿಸುವುದು ತುರ್ತು ಅಗತ್ಯವಾಗಿದೆ. ಸರ್ಕಾರ ಈ ದಿಶೆಯಲ್ಲಿ ಕಾನೂನಾತ್ಮಕ ಅಂಶ ಒಳಗೊಂಡು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಹೇಳಿಕೆ ಯಲ್ಲಿ ಆಗ್ರಹಿಸಿದೆ.

ದೇಶ ವಿಭಜಿಸುವ ಬೇಡಿಕೆಗಳು

'ಯೋಗಗುರು ರಾಮದೇವ್‌ರ ಕೆಲ ಬೇಡಿಕೆಗಳು ದೇಶ ವಿಭಜಿಸುವಂತಹವು ಗಳಾಗಿದ್ದು, ಅವರ ಹಿಂಸೆಗೆ ಪ್ರಚೋದನೆ ನೀಡುವ ಸಶಸ್ತ್ರ ಹೋರಾಟಕ್ಕೆ ನನ್ನ ಬೆಂಬಲವಿಲ್ಲ

-ನ್ಯಾಯಮೂರ್ತಿ ಸಂತೋಷ್‌ಹೆಗ್ಡೆ, ಕರ್ನಾಟಕ ಲೋಕಾಯುಕ್ತರು

ಹೀಗೂ ಉಂಟೆ?

ದಾಹ-ದರೋಡೆ?

ಕೆಲವರ ಹಣದ ದಾಹಕ್ಕೆ ರಾಜ್ಯದಲ್ಲಿನ ಅಮೂಲ್ಯ ಖನಿಜ ಸಂಪತ್ತು ಲೂಟಿಯಾಗುತ್ತಿದ್ದು, ಹಗಲು ದರೋಡೆ ನಡೆಯುತ್ತಿದೆ.

ಡಾ॥ ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ, ಕರ್ನಾಟಕ

ಲಿಂಗದೇವರು ಹಳೆಮನೆಯವರ ಅಕಾಲಿಕ ನಿಧನ ಸಿ.ಪಿ.ಐ.(ಎಂ) ಸಂತಾಪ

ಖ್ಯಾತ ಸಾಹಿತಿ, ನಾಟಕಕಾರ, ರಂಗಾಯಣದ ನಿರ್ದೇಶಕರೂ ಆಗಿರುವ ಲಿಂಗದೇವರು ಹಳೆಮನೆ ನಿಧನಕ್ಕೆ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಲಿಂಗದೇವರು ಹಳೆಮನೆ ಪ್ರಗತಿಪರ ಚಿಂತಕರಾಗಿದ್ದು ಮಾತ್ರವಲ್ಲದೆ, ಮೈಸೂರಿನಲ್ಲಿ ಹೋಟೇಲ್ ಕಾರ್ಮಿಕರ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ಹೋಟೇಲ್ ಕಾರ್ಮಿಕರ ಚಳುವಳಿಯ ಸಂದರ್ಭದಲ್ಲಿ ಬೀದಿ ನಾಟಕಗಳನ್ನು ಆಡಿ ತೋರಿಸುವುದರ ಮೂಲಕ ಕಾರ್ಮಿಕರ ಬವಣೆಯ ಕುರಿತಾಗಿ ಜನರ ಗಮನ ಸೆಳೆಯುತ್ತಿದ್ದರು. ಜನ ಚಳುವಳಿಯೊಂದಿಗೆ ಅವರು ಗುರುತಿಸಿಕೊಂಡಿದ್ದರು.

ಜನರ ಐಕ್ಯತೆಯನ್ನು ಒಡೆಯುವ ಕೋಮುವಾದವನ್ನು ಸ್ಪಷ್ಟವಾಗಿ ಧಿಕ್ಕರಿಸುತ್ತಿದ್ದ ಲಿಂಗದೇವರು ಹಳೆಮನೆ ಕೋಮು ಸೌಹಾರ್ದತೆ, ಸಮಾಜ ಬದಲಾವಣೆಯ ಪರವಾಗಿ, ಶೋಷಿತ ಜನ ಸಮುದಾಯದತ್ತ ಕಾಳಜಿಯನ್ನು ಹೊಂದಿದ್ದರು. ಅವರ ನಿಧನದಿಂದ ಕರ್ನಾಟಕದ ಹೆಸರಾಂತ ಪ್ರಗತಿಪರ ಚಿಂತಕರನ್ನು, ಜನಸ್ನೇಹಿಯನ್ನು ಕಳೆದುಕೊಂಡಂತಾಯಿತು.

ಲಿಂಗದೇವರು ಹಳೆಮನೆಯವರ ಅಕಾಲಿಕ ಮರಣದಿಂದ ದುಃಖಿತಪ್ತರಾದ ಅವರ ಪತ್ನಿ ಹಾಗೂ ಕುಟುಂಬ ವರ್ಗದವರಿಗೂ ಸಿ.ಪಿ.ಐ.(ಎಂ) ತನ್ನ ಹೃದಯ ಪೂರ್ವಕ ಸಂತಾಪವನ್ನು ಸೂಚಿಸಿದೆ.

ಕಪ್ಪು ಹಣದ ವಿರುದ್ಧ ಕಠಿಣ ಕ್ರಮ ಅಗತ್ಯವೆಂಬುದು ನಿಜವೇ. ಆದರೆ ಸಂಘ ಪರಿವಾರ ಬೆಂಬಲಿತ ಬಾಬಾ ರಾಮದೇವರವರ ಹೋರಾಟವು ಅಪಹಾಸ್ಯಕಾರಿಯಾಗಿದೆ. ಮಾತ್ರವಲ್ಲ ನಡೆಯಬಹುದಾದ ಹೋರಾಟವನ್ನು ದಿಕ್ಕುತಪ್ಪಿಸುವಂತಿದೆ.

ಕಪ್ಪುಹಣದ ವಿರುದ್ಧ ಹೋರಾಟವೆಂಬ ಪ್ರಹಸನ

ಜಯ

ಇಡೀ ದೇಶವನ್ನೇ ಲೂಟಿ ಮಾಡುತ್ತಿರುವ ಮಂತ್ರಿಮಹೋದಯರು ಮತ್ತು ಬಂಡವಾಳಶಾಹಿಗೆ ಮತ್ತಷ್ಟು ಲೂಟಿ ಮಾಡಲು ಎಲ್ಲ ಅನುಕೂಲ ಕಲ್ಪಿಸಿಕೊಡುತ್ತಿರುವ ಯುಪಿಎ ಸರ್ಕಾರದ ವಿರುದ್ಧ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿಯು ಔಪಚಾರಿಕವೆಂಬಂತೆ ಕೇವಲ ತೋರಿಕೆಯ ಮಾತುಗಳನ್ನಷ್ಟೇ ಹೇಳುತ್ತಾ ಬಂದಿದೆ. ಏಕೆಂದರೆ ತನ್ನ ಹಿಂದಿನ ಅಧಿಕಾರವಧಿಯಲ್ಲಿ ತಾನು ನಡೆಸಿರುವ ಭ್ರಷ್ಟಾಚಾರಗಳು ಮತ್ತು ಕರ್ನಾಟಕದಲ್ಲಿ ಯಡಿಯೂರಪ್ಪನ ಸರ್ಕಾರದ ಕೆಟ್ಟತನ & ಭ್ರಷ್ಟಾಚಾರಗಳಿಂದಾಗಿ ಬಿಜೆಪಿ ಸದ್ದು ಅಡಗಿಹೋಗಿದೆ.

ಈ ಮಧ್ಯೆ ಬಾಬಾ ರಾಮದೇವ ಮತ್ತು ಧರಣಿ ನಿರತ ಜನತೆಯನ್ನು ರಾತ್ರೋರಾತ್ರಿ ಸ್ಥಳಾಂತರ ಮಾಡಿದ್ದನ್ನೇ ಹೊಂಚುಹಾಕಿ ಕಾಯುತ್ತಿದ್ದ ಆರ್‌ಎಸ್‌ಎಸ್ ಮತ್ತು ಬಿಜೆಪಿಗಳು ಸತ್ತು ಜೀವ ಬಂದವರಂತೆ ರಾಜಕೀಯವಾಗಿ ಬಳಸಿಕೊಳ್ಳಲು ಆರ್ಭಟಿಸುತ್ತಿವೆ. ಲಕ್ಷಾಂತರ ಕಾರ್ಮಿಕರು ಮತ್ತು ರೈತರು ತಾವು ಬದುಕುವ ಹಕ್ಕುಗಳಿಗಾಗಿ ನಡೆಸುವ ಹಲವು ಹೋರಾಟಗಳ ಕುರಿತು ಚಕಾರವೇ ಎತ್ತದ ಸುಪ್ರೀಂಕೋರ್ಟ್ ಕೂಡ, ಈ ಪ್ರಕರಣವನ್ನು ಸ್ವಯಂಪ್ರೇರಿತವಾಗಿ ಕೈಗೆತ್ತಿಕೊಂಡು ವಿಚಾರಣೆ ಆರಂಭಿಸಿದೆ. ಮಧ್ಯರಾತ್ರಿ ಧಾಳಿ ನಡೆಸಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಧರಣಿ ನಡೆಸುತ್ತಿದ್ದ ಜನತೆಯನ್ನು ಬಂಧಿಸಿ, ಗಾಯಗೊಳಿಸಿ, ಸ್ಥಳಾಂತರ ಮಾಡಿದ ಕೇಂದ್ರ ಸರ್ಕಾರದ ಧೋರಣೆಯಂತೂ ನಾಚಿಕೆಗೇಡಿನ ಕ್ರಮವಷ್ಟೆ. ಏಕೆಂದರೆ ಬಾಬಾ ಉಪವಾಸ ಧರಣಿ ಆರಂಭಿಸುವ ಮುನ್ನ ಅವನೊಂದಿಗೆ ಗುಟ್ಟಾಗಿ ವ್ಯವಹಾರ ಕುದುರಿಸಲು ಸ್ವಂತ ವಿಮಾನವೇರಿ ಬಂದ ಡೋಂಗಿ ಬಾಬಾನನ್ನು ಸ್ವಾಗತಿಸಲು ಇದೇ ಕೇಂದ್ರ ಸರ್ಕಾರ ತನ್ನ 4 ಕ್ಯಾಬಿನೆಟ್ ಸಚಿವರನ್ನು ವಿಮಾನನಿಲ್ದಾಣಕ್ಕೆ ಕಳುಹಿಸಿತ್ತು. ಏಕೆಂದರೆ ಜನ ಲೋಕಪಾಲ್ ಮಸೂದೆಯಲ್ಲಿ ಪ್ರಧಾನಮಂತ್ರಿಯವರನ್ನು ವ್ಯಾಪ್ತಿಯೊಳಗೆ ಸೇರಿಸಬೇಕೆಂಬ ವಿಷಯದಲ್ಲಿ ಬಾಬಾ ಎಡಬಿಡಂಗಿ ಹೇಳಿಕೆ ನೀಡಿ ಸರ್ಕಾರದ ಪರ ವಹಿಸಲು ಯತ್ನಿಸಿದ್ದರು. ಈ ಮಾತುಕತೆ ಮುರಿದು ಬಿದ್ದ ಮೇಲಷ್ಟೇ ಬಾಬಾನ ಡೋಂಗಿತನದ ವಿರುದ್ಧ ಕೇಂದ್ರ ಸರ್ಕಾರ ಧ್ವನಿ ಹೊರಡಿಸುತ್ತಿದೆ.

ಸ್ವಾಮೀಜಿ ರಾಮ್‌ದೇವ್ ಬಳಿ ಉಗ್ರಗಾಮಿಗಳ ಪಡೆ?

ಇದಕ್ಕೆ ಪ್ರತಿಯಾಗಿ ಬಾಬಾ ಕೂಡ ತನ್ನ ಮೇಲೆ ಸರ್ಕಾರ ನಡೆಸುವ ಯಾವುದೇ ಕ್ರಮಗಳ ವಿರುದ್ಧ ಪ್ರತಿಧಾಳಿ ನಡೆಸಲು ಸುಮಾರು 10 ರಿಂದ 15 ಸಾವಿರ ಶಸ್ತ್ರಸಜ್ಜಿತ ಯೋಧರನ್ನು ಹರಿಯಬಿಡುವುದಾಗಿ ಸೆಡ್ಡು ಹೊಡೆದಿದ್ದಾರೆ. ಇದು ಬಾಬಾ ರಾಮ್‌ದೇವ್ ತಾನೊಬ್ಬ ಯೋಗ ಗುರು ಎನ್ನುವುದಕ್ಕಿಂತ ಉಗ್ರಗಾಮಿಗಳ ರೀತಿಯಲ್ಲಿ ತಯಾರಾಗುತ್ತಿದ್ದಾನೆಂಬುದನ್ನು ಸೂಚಿಸುತ್ತದೆ.

ಇಡೀ ದೇಶದಾದ್ಯಂತ ತೀವ್ರಗೊಳ್ಳುತ್ತಿರುವ ಭ್ರಷ್ಟಾಚಾರದ ವಿರುದ್ಧ ಮತ್ತು ವಿದೇಶದ ಬ್ಯಾಂಕುಗಳಲ್ಲಿ ಸಂಗ್ರಹವಾಗಿರುವ ಕಪ್ಪುಹಣ ವಾಪಸು ತರಲು ಏನೇನೂ ಕ್ರಮಕೈಗೊಳ್ಳದ ಕೇಂದ್ರ–ರಾಜ್ಯ ಸರ್ಕಾರಗಳ ವಿರುದ್ಧ ರೋಸಿಹೋಗಿರುವ ಜನತೆಯಲ್ಲಿ ದೊಡ್ಡ ಮಟ್ಟದ ಅಸಹನೆ ಮತ್ತು ಅತೃಪ್ತಿ ಮೂಡಿದ್ದು, ಭ್ರಷ್ಟಾಚಾರ ವಿರೋಧಿ ಆಂದೋಲನಗಳಲ್ಲಿ ಬೃಹತ್ ಪ್ರಮಾಣದಲ್ಲಿ ಭಾಗವಹಿಸುತ್ತಿದ್ದಾರೆ. ಇದರ ರಾಜಕೀಯ ದುರ್ಲಾಭ ಪಡೆಯಲು ನೆಲೆಕಳೆದುಕೊಂಡಿರುವ ಬಿಜೆಪಿ ಮತ್ತು ಆರೆಸ್ಸೆಸ್ ಯತ್ನಿಸಿವೆ. ಆ ಮೂಲಕ ಮತ್ತು ಬಾಬಾನಂತಹವರ ಮಧ್ಯಪ್ರವೇಶದಿಂದ ನೈಜ ಭ್ರಷ್ಟಾಚಾರ ವಿಷಯಗಳು ತೆರೆ ಮರೆಗೆ ಸರಿಯುತ್ತಿವೆ.



ಬಾಬಾನ ಘೋರ ಯೋಗದ ಸಾಮ್ರಾಜ್ಯ :

ಕೇವಲ ಯೋಗಾಸನ ಕಲಿಸುವ ಟೀಚರ್ ಆಗಿದ್ದ ರಾಮದೇವ್ ಇಂದು ಎಷ್ಟು ದೊಡ್ಡ ಬಂಡವಾಳಿಗನಂತೆ ಬೆಳೆದು ನಿಂತಿದ್ದಾನೆಂದರೆ ಕೆಲವೇ ವರ್ಷಗಳಲ್ಲಿ ಸಾವಿರಾರು ಕೋಟಿ ಆಸ್ತಿಯ ಅಧಿಪತಿಯಾಗಿದ್ದಾನೆ. 2006 ಮತ್ತು 2011ರ ನಡುವೆ ಅವನ ಯೋಗದ ಸಾಮ್ರಾಜ್ಯ ಬೆಳೆದಿದ್ದು, ಸುಮಾರು 34 ಕಾರ್ಪೊರೆಟ್ ಕಂಪನಿಗಳಲ್ಲಿ ಹರಡಿಕೊಂಡಿದೆ. 2009–10ರಲ್ಲಿ ಅವನ ಎರಡು ಟ್ರಸ್ಟ್‌ಗಳ ವ್ಯವಹಾರ ರೂ. 1,100 ಕೋಟಿ ದಾಟಿದೆ. ಅಲ್ಲದೆ ಸ್ಕಾಟ್‌ಲ್ಯಾಂಡಿನ ಬಳಿ ಒಂದು ದ್ವೀಪ ಪ್ರದೇಶವನ್ನೇ ಕೊಂಡುಕೊಂಡಿದ್ದಾನೆ. ತನ್ನದೇ ಸ್ವಂತ ವಿಮಾನಗಳು ಇವೆ. ಹವಾನಿಯಂತ್ರಿತ ಯೋಗ ಶಿಬಿರಗಳಲ್ಲಿ ತರಬೇತಿಗಳು ಜರುಗುತ್ತವೆ. ಸಾವಿರಾರು ಎಕರೆ ಜಮೀನನ್ನು ತನ್ನ ಟ್ರಸ್ಟ್‌ಗೆ ಖರೀದಿಸಿದ್ದಾರೆ.



ಕೃಪೆ : ದಿ ಹಿಂದು

ಬಾಬಾನ ಐಲುಗಳು :

200 ವರ್ಷ ಬದುಕುತ್ತೇನೆಂದು ಘೋಷಿಸಿಕೊಂಡಿರುವ ಬಾಬಾ ದಿನಕ್ಕೊಂದು ವರಸೆ ಎಸೆಯುತ್ತಾನೆ. ತಾನೊಂದು ರಾಜಕೀಯ ಪಕ್ಷ ಕಟ್ಟುತ್ತೇನೆಂದು ಹೇಳುವ ಬಾಬಾ ತನ್ನೆಲ್ಲ ವರಸೆಗಳನ್ನು ಸಂಘಪರಿವಾರದ ಬೆಳವಣಿಗೆಗೆ ಮುಡುಪಿಟ್ಟಿದ್ದಾನೆ. ತಾನು ರಾಜಕೀಯ ಪಕ್ಷ ಕಟ್ಟುವುದಿಲ್ಲ ಬದಲಿಗೆ ಯುವಜನತೆಯ ಸಂಘ ಕಟ್ಟುತ್ತೇನೆಂದು ಕಳೆದ ವಾರ ಹೇಳಿದ್ದಾನೆ. ಮೊನ್ನೆ ಮಧ್ಯರಾತ್ರಿ ಪೊಲೀಸರು ಧಾಳಿ ನಡೆಸಿ ಧರಣಿ ನಿರತರನ್ನು ಬಂಧಿಸತೊಡಗಿದಾಗ ರಾಮ್‌ದೇವ್ ಮಹಿಳೆಯರಂತೆ ಚೂಡಿದಾರ್ ಸೆರಗು ಹೊದ್ದುಕೊಂಡು ನಾಲ್ಕೈದು ಹೆಂಗಸರ ಮರೆಯಲ್ಲಿ ಕದ್ದು ನಾಪತ್ತೆಯಾಗುವುದರಲ್ಲಿದ್ದ. ಪೊಲೀಸರು ಶೋಧನೆ ನಡೆಸಿ ಆತನನ್ನು ಹಿಡಿದಿದ್ದಾರೆ. ಧರಣಿ ಕೂರಲು ಬಂದು ಬಂಧನದಿಂದ ತಪ್ಪಿಸಿಕೊಳ್ಳಲು ವೇಷ ಮರೆಸಿ ಓಡಿಹೋಗುವುದು ನಾಚಿಕೆಗೇಡಿನ ಕೃತ್ಯವೇ ಸರಿ.

ಅಲ್ಲದೆ, ಬಾಬಾ ನಡೆಸುವ ಯೋಗಾಸನ ಮತ್ತು ಆಯುರ್ವೇದ ಔಷಧಿಗಳು ಎನ್ನಲಾದ ಹಲವು ವಿಷಯಗಳನ್ನು ವೈಜ್ಞಾನಿಕ ಪ್ರಯೋಗಗಕ್ಕೆ ಒಳಪಡಿಸುವ ಜರೂರಿದೆ. ಏಕೆಂದರೆ, ಆಯುರ್ವೇದದ ಹೆಸರಿನಲ್ಲಿ ಹಲವು ಗಿಡಮೂಲಿಕೆಗಳು, ಮನುಷ್ಯ ಮತ್ತು ಪ್ರಾಣಿಯ ಮೂಳೆ ಪುಡಿಗಳು, ಇತ್ಯಾದಿ ಜೀವಹಾನಿಕಾರಕಗಳನ್ನು ಔಷಧಿಯೆಂದು ಬಾಬಾ ನೀಡುತ್ತಿರುವುದು ಬೆಳಕಿಗೆ ಬಂದಿದೆ. ಇದರ ಕುರಿತು ತನಿಖೆ ನಡೆಯಬೇಕಿದೆ.

ರಾಮದೇವ್: ಬಿಜೆಪಿ– ಆರೆಸ್ಸೆಸ್ ಮುಖವಾಡ :

ಬಾಬಾ ರಾಮ್‌ದೇವ್ ತನ್ನ ಪ್ರತಿಭಟನೆ ಆರಂಭಿಸುವ ಒಂದು ವಾರ ಮುಂಚೆಯೇ ಇದಕ್ಕೆ ಸೂಕ್ತ ಸಂಖ್ಯೆಯಲ್ಲಿ ಕರಸೇವಕರನ್ನು ಕಳುಹಿಸಿಕೊಡಬೇಕೆಂದು ಆರೆಸ್ಸೆಸ್ ದೇಶದಾದ್ಯಂತ ಇರುವ ತನ್ನ ಶಾಖಾಗಳಿಗೆ ಸುತ್ತೋಲೆ ಕಳುಹಿಸಿಕೊಟ್ಟಿತ್ತು. ಎಬಿವಿಪಿ ಕೂಡ ಹಲವು ಸಾವಿರ ವಿದ್ಯಾರ್ಥಿಗಳನ್ನು ಇದಕ್ಕೆ ಅಣಿನೆರೆಸಿತ್ತು. ಇದಕ್ಕೆ ಆರೆಸ್ಸೆಸ್‌ನ ಪ್ರಮುಖನಾದ ಹಾಗೂ ಬಾಬ್ರಿ ಮಸೀದಿ ಕೆಡವುವಲ್ಲಿ ಪ್ರಮುಖ ಪಾತ್ರವಹಿಸಿರುವ ಸಾಧ್ವಿ ರಿತಂಬರಾ ಬೆಂಬಲ ನೀಡಿದ್ದು, ಉಮಾಭಾರತಿ ಕೂಡ ಸೇರಿದ್ದಾರೆ. ಇದೇ ಸಮಯ ನೋಡಿಕೊಂಡು ಉಮಾಭಾರತಿಯನ್ನು ಬಿಜೆಪಿಗೆ ಮತ್ತೆ ಸೇರಿಸಿಕೊಳ್ಳಲಾಗಿದೆ. ಬಿಜೆಪಿ ಅಧ್ಯಕ್ಷರು ತಮ್ಮ ಪಕ್ಷದ ನೇರ ಬೆಂಬಲವನ್ನು ರಾಮ್‌ದೇವ್‌ಗೆ ಘೋಷಿಸಿದ್ದಾರೆ.

ಅಣ್ಣಾ ಹಜಾರೆ ಒಳಗೊಂಡಂತೆ ಜನಲೋಕ ಪಾಲ್ ಮಸೂದೆಯ ಕರಡು ಪ್ರತಿ ತಯಾರಿಸಲು ಕೇಂದ್ರ ಸರ್ಕಾರವು 7 ಜನ ತಂಡವನ್ನು ರಚಿಸಿದಾಗ, ಇದರಲ್ಲಿ ಶಾಂತಿ ಭೂಷಣ್ ಮತ್ತು ಪ್ರಶಾಂತ್ ಭೂಷಣ್ ಇರಬಾರದು ಎಂದು

ಪುಟ 13ಕ್ಕೆ

ಕಳೆದ ವಾರ ರಾಮಲೀಲ ಮೈದಾನದ ಪೋಲೀಸ್ ಕಾರ್ಯಾಚರಣೆ ಹಲವು ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದೆ. ಒಂದೆಡೆ ಇದು ಕಾಂಗ್ರೆಸ್ ನೇತೃತ್ವದ ಸ್ವಯಂಕೃತ ಅಪರಾಧದ ದುಷ್ಫಲವಾಗಿದ್ದರೆ, ಇನ್ನೊಂದೆಡೆ ಬಿಜೆಪಿಗೆ ರಾಮದೇವ್ ಇನ್ನೊಂದು ರಾಜಕೀಯ ಮುಖವಾಡ. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಜನರಲ್ಲಿ ಹಬ್ಬಿರುವ ಜುಗುಪ್ಸೆ ಮತ್ತು ಅಸಂತೃಪ್ತಿಯನ್ನು ಉಪಯೋಗಿಸಿಕೊಂಡು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಈ ಬೆಳವಣಿಗೆಗಳನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುವ ಸಿನಿಕ ಪ್ರಯತ್ನ ನಡೆಸುತ್ತಿವೆ. ಈ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿರುದ್ಧ ಪರಮ ಮಹತ್ವದ ಹೋರಾಟದ ನಿರಾಕರಣೆಯಾಗುತ್ತಿದೆ. ಇದು ಬಹುಶಃ ಉದ್ದೇಶಪೂರ್ವಕ. ಆದರೆ ಇದಕ್ಕೆ ಅವಕಾಶ ನೀಡಬಾರದು.

ಇದೇನಾ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಪರಿ?

'ಪ್ರಹಸನ', 'ಅಸಂಬದ್ಧ', 'ಕ್ಷುಲ್ಲಕಗೊಳಿಸುವುದು' ಇತ್ಯಾದಿ ಯಾವ ಪದವೂ ಕಳೆದ ವಾರದ ವಿಚಿತ್ರ ಬೆಳವಣಿಗೆಗಳ ಪೂರ್ಣ ಚಿತ್ರಣ ಕೊಡುವಲ್ಲಿ ಸೋಲುತ್ತದೆ. ರಾಮಲೀಲ ಮೈದಾನದಲ್ಲಿ ಪ್ರತಿಭಟನೆಯಲ್ಲಿ ಕೂತಿದ್ದ ರಾಮದೇವ್ ಮತ್ತು ಆತನ ಬೆಂಬಲಿಗರ ಮೇಲೆ ಮಧ್ಯರಾತ್ರಿಯಲ್ಲಿ ಪೋಲೀಸರು ಎರಗಿದ ಘಟನೆ, ಯುಪಿಎ ಸರಕಾರ ಈ ಯೋಗ ಪ್ರತಿಪಾದಕನೊಂದಿಗೆ ಮಾಡಿಕೊಂಡ ವಂಚನಾಪೂರ್ಣ ರಾಜಿಗಳ ಸರಣಿಯ ಚರಮ ಬಿಂದು. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಹಲವು ಅಮಾಯಕರನ್ನು ಗಾಯಗೊಳಿಸಿದ ಈ ಖಂಡನಾರ್ಹ ಪೋಲೀಸ್ ಕಾರ್ಯಾಚರಣೆ ಘೋರ ಮತ್ತು ನಿಂದನೀಯ.

ಈ ಬೆಳವಣಿಗೆಗಳು ಹಲವು ಪ್ರಶ್ನೆಗಳನ್ನು ಎತ್ತಿವೆ. ಅವನ್ನೆಲ್ಲ ಗಂಭೀರವಾಗಿ ಪರಿಶೀಲಿಸುವ ಅಗತ್ಯವಿದೆ. ಆದರೆ, ಮೊದಲಿಗೆ, ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಮತ್ತು ಹೊಲಸು ವಿಧಾನಗಳಿಂದ ಗಳಿಸಿ ವಿದೇಶಗಳ ತೆರಿಗೆಮುಕ್ತ ಆಶ್ರಯಧಾಮಗಳಲ್ಲಿ ಪೇರಿಸಿಟ್ಟ ಕಪ್ಪು ಹಣವನ್ನು ಹೊರಗೆಳೆಯುವಲ್ಲಿ ಸರಕಾರದ ಸಂಪೂರ್ಣ ಅಸಮರ್ಪಕ, ಅಪ್ರಾಮಾಣಿಕವೆನಿಸುವ ಸ್ಪಂದನೆಯ ವಿರುದ್ಧ ಇಂತಹ ಪ್ರತಿಭಟನೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರೂ ಭಾಗವಹಿಸುತ್ತಿದ್ದಾರೆ ಎಂಬುದನ್ನು ಗಮನಿಸಬೇಕು. ಇದು ಎಲ್ಲೆಡೆ ಕಾಣುತ್ತಿರುವ ಭ್ರಷ್ಟಾಚಾರದ ತಾಂಡವದ ಬಗ್ಗೆ ಜನಗಳಲ್ಲಿ ಉಂಟಾಗಿರುವ ವ್ಯಾಪಕ ಜುಗುಪ್ಸೆಯನ್ನು ತೋರಿಸುತ್ತದೆ. ಈ ವಿಷಯದಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯ ಮತ್ತು ಸರಕಾರ ತಕ್ಷಣವೇ ಕೈಗೊಳ್ಳಬೇಕಾದ ನಿರ್ದಿಷ್ಟ ಕ್ರಮಗಳನ್ನು ಈ ಅಂಕಣದಲ್ಲಿ ಈ ಹಿಂದೆ ಎತ್ತಿ ತೋರಿಸಿದ್ದೇವೆ.

> ಇಂದು ಕಾಂಗ್ರೆಸ್ ಮುಖಂಡರು ರಾಮದೇವ್ 'ವಿಶ್ವಾಸಘಾತ' ಮಾಡಿದ್ದಾರೆ, ಅವರದ್ದು 'ಮೋಸದ ಸ್ವಭಾವ' ಎಂದೆಲ್ಲ ಚಿತ್ರಿಸುತ್ತಿದ್ದಾರೆ. ಸರಕಾರ ನಾಲ್ಕು ಹಿರಿಯ ಮಂತ್ರಿಗಳು ಮತ್ತು ಸಂಪುಟ ಕಾರ್ಯದರ್ಶಿ ಇರುವ ಒಂದು ಉನ್ನತ ನಿಯೋಗವನ್ನು ರಾಜಿ ಮಾಡಿಕೊಳ್ಳಲು ಅವರ ಬಳಿ ಕಳುಹಿಸುವಾಗ ಇದೆಲ್ಲ ಸ್ಪಷ್ಟವಾಗಿರಲಿಲ್ಲವೇ?

ಸ್ವಯಂಕೃತ ಅಪರಾಧ

ನಂತರ ಪ್ರಧಾನ ಮಂತ್ರಿಗಳು ಈ ಪೋಲೀಸ್ ಕಾರ್ಯಾಚರಣೆ 'ದುರದೃಷ್ಟಕರ' ಎಂದಿದ್ದಾರೆ; ಆದರೆ ಜತೆಗೇ 'ಬೇರೆ ದಾರಿಯಿರಲಿಲ್ಲ' ಎಂದೂ ಹೇಳಿದ್ದಾರೆ. ಈ ರೀತಿ ನೂರಾರು ಮುಗ್ಧ ಜನರ ವಿರುದ್ಧ, ಅವರ ಪ್ರತಿಭಟನೆಯ ಪ್ರಜಾಪ್ರಭುತ್ವ ಹಕ್ಕನ್ನು ಹತ್ತಿಕ್ಕುವ ಪೋಲೀಸ್ ಕಾರ್ಯಾಚರಣೆಯನ್ನು ಸಮರ್ಥಿಸಿಕೊಳ್ಳುವುದನ್ನು ಒಂದು ಪ್ರಜಾಪ್ರಭುತ್ವದಲ್ಲಿ ಯಾವ ರೀತಿಯಲ್ಲೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಸರಕಾರದ ಸ್ವಯಂಕೃತ ಅಪರಾಧವೇ ಇಂತಹ ಸನ್ನಿವೇಶ ಏರ್ಪಡಲು ಕಾರಣ. ಇಂದು ಕಾಂಗ್ರೆಸ್ ಮುಖಂಡರು ರಾಮದೇವ್ 'ವಿಶ್ವಾಸಘಾತ' ಮಾಡಿದ್ದಾರೆ, ಅವರದ್ದು 'ಮೋಸದ ಸ್ವಭಾವ' ಎಂದೆಲ್ಲ ಚಿತ್ರಿಸುತ್ತಿದ್ದಾರೆ. ಸರಕಾರ ನಾಲ್ಕು ಹಿರಿಯ ಮಂತ್ರಿಗಳು ಮತ್ತು ಸಂಪುಟ ಕಾರ್ಯದರ್ಶಿ ಇರುವ ಒಂದು ಉನ್ನತ ನಿಯೋಗವನ್ನು ರಾಜಿ ಮಾಡಿಕೊಳ್ಳಲು ಅವರ ಬಳಿ ಕಳುಹಿಸುವಾಗ ಇದೆಲ್ಲ ಸ್ಪಷ್ಟವಾಗಿರಲಿಲ್ಲವೇ?

ಇಂದು ಸರಕಾರ ರಾಮದೇವ್ ಅವರ ವ್ಯಾಪಾರೀ ವ್ಯವಹಾರಗಳನ್ನು ಎತ್ತುತ್ತಿದೆ. ಆತನೊಂದಿಗೆ ತಮ್ಮದೇ ವ್ಯವಹಾರಗಳನ್ನು ಕುದುರಿಸುತ್ತಿದ್ದಾಗ ಇದು ಹೊಳೆದಿರಲಿಲ್ಲವೇ? 2006ರಿಂದ 2011ರ ನಡುವೆ ಆತನ ವ್ಯಾಪಾರೀ ಸಾಮ್ರಾಜ್ಯ ಉದಯವಾಯಿತು. ಅದರಲ್ಲಿ 34 ರಿಜಿಸ್ಟರಾದ ಕಂಪನಿಗಳಿವೆ. ಇದು ಯುಪಿಎ ಸರಕಾರದ ಕಾರ್ಪೊರೇಟ್ ವ್ಯವಹಾರಗಳ ಇಲಾಖೆಯ ಕಡತಗಳಲ್ಲಿ ದಾಖಲಾಗಿರುವ ಸಂಗತಿಗಳು. ರಾಮದೇವ್ ನಡೆಸುವ ಎರಡು ಪ್ರಧಾನ ಟ್ರಸ್ಟುಗಳು 2009-10ರಲ್ಲಿ 1,100 ಕೋಟಿ ರೂ.ಗಳ ವಹಿವಾಟು ನಡೆಸಿವೆ. ಸ್ಕಾಟ್‌ಲೆಂಡಿನಲ್ಲಿ ಒಂದು ದ್ವೀಪ ಆತನ ಒಡೆತನದಲ್ಲಿದೆ. ಒಬ್ಬ ಶಿಷ್ಯ ಅದನ್ನು ಕೊಡುಗೆಯಾಗಿ ಕೊಟ್ಟರಂತೆ. ಆತ ಪಂಚತಾರಾ ಐಷಾರಾಮಿ ಹವಾನಿಯಂತ್ರಿತ ಯೋಗ ಶಿಬಿರಗಳನ್ನು ನಡೆಸುತ್ತಾರೆ. ರಾಮಲೀಲ ಮೈದಾನದಲ್ಲಿ ಆತನ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆಗೆಂದು ರಚಿಸಿದ ಡೇರೆ ಹಲವರ ಹುಬ್ಬೇರಿಸಿದೆ. ಇಂದು ಹರಿದ್ವಾರದಲ್ಲಿ ಆತನ ಆಶ್ರಮ ನಿಂತಿರುವ ಜಾಗದ ಬಗ್ಗೆಯೂ ಹಲವು ಪ್ರಶ್ನೆಗಳನ್ನು ಎತ್ತಲಾಗುತ್ತಿದೆ.

ಬಿಜೆಪಿ ಇಬ್ಬಂದಿತನ

ಪ್ರಧಾನ ಪ್ರತಿಪಕ್ಷ ಬಿಜೆಪಿ ಕೂಡ ಈ ಬೆಳವಣಿಗೆಗಳಲ್ಲಿ, ರಾಮದೇವ್‌ರನ್ನು ತನ್ನ ರಾಜಕೀಯ ಮುಖವಾಡವಾಗಿ ಬಳಸಿಕೊಂಡು ಅಷ್ಟೇ ಕೀಳಾಗಿ ವರ್ತಿಸಿದೆ. ಜೂನ್ 4 ರಿಂದ ಆರಂಭವಾಗಬೇಕಾಗಿದ್ದ ಈ ಕಾರ್ಯಕ್ರಮದ ಒಂದು ವಾರದ ಮೊದಲು, ರಾಮದೇವ್ ಚಳುವಳಿಯನ್ನು ಸೇರಿಕೊಳ್ಳಬೇಕೆಂದು ಆರೆಸ್ಸೆಸ್ ತನ್ನ ಎಲ್ಲ 'ಶಾಖೆ'ಗಳಿಗೆ ಸುತ್ತೋಲೆ ಕಳಿಸಿತ್ತು. ಈ ರೀತಿ ಇದನ್ನು ಪ್ರಾಯೋಜಿಸುವಲ್ಲಿ ಆರೆಸ್ಸೆಸ್



ಕೃಪೆ : ಪ್ರಜಾವಾಣಿ

ಭಾಗಿಯಾಗಿತ್ತು ಎಂಬುದು ಸಾಕಷ್ಟು ಸ್ಪಷ್ಟವಾಗಿದೆ. ರಾಮದೇವ್‌ರನ್ನು ಬೆಂಬಲಿಸುವವರಲ್ಲಿ ಎದ್ದು ಕಾಣುತ್ತಿದ್ದುದು ಸಾಧ್ವಿ ಋತಂಬರಾ- ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ರಾಮಜನ್ಮಭೂಮಿ ಚಳುವಳಿಗೆ ಉದ್ರೇಕಕಾರಿ ಭಾಷಣಗಳನ್ನು ಧಾರೆಯೆರೆದ ಆರೆಸ್ಸೆಸ್‌ನ ಅದೇ 'ಜಾಹೀರಾತು ಸಾಧ್ವಿ'. ಇನ್ನೊಬ್ಬ 'ಕೇಸರಿ' ಕಟ್ಟಾಳು, ಉಮಾ ಭಾರತಿ ಬಿಜೆಪಿಗೆ ಮರು ಪ್ರವೇಶಕ್ಕೆ ಇದೇ ಸಂದರ್ಭವನ್ನು ಬಳಸಿಕೊಂಡರು. ಬಿಜೆಪಿ ಅಧ್ಯಕ್ಷರು ರಾಮದೇವ್‌ಗೆ ತಮ್ಮ ಪಕ್ಷದ ಬೆಂಬಲವನ್ನು ವಿಧ್ಯುಕ್ತವಾಗಿಯೇ ಸಾರಿದರು. ಪೋಲೀಸ್ ಕಾರ್ಯಾಚರಣೆಯ ನಂತರ, ಬಿಜೆಪಿ ಈ ಚಳುವಳಿಯನ್ನು ತನ್ನದಾಗಿಸಿಕೊಳ್ಳಲು ಒಂದು ಪ್ರಯತ್ನ ನಡೆಸಿತು, ರಾಜಘಾಟಿನಲ್ಲಿ ಒಂದು 'ನಲಿವಿನ' ಭಾವದಲ್ಲಿ ಒಂದು ಧರಣಿ ಸಂಘಟಿಸಿತು. ಆರೆಸ್ಸೆಸ್ ಮತ್ತು ಬಿಜೆಪಿಗೆ ಭ್ರಷ್ಟಾಚಾರ ಮತ್ತು ಕಪ್ಪು ಹಣದ ಪ್ರಶ್ನೆಗಿಂತ ತಮ್ಮ ರಾಜಕೀಯ ಉಳಿವಿಗಾಗಿ ಈ ಅವಕಾಶವನ್ನು ಬಳಸಿಕೊಳ್ಳುವುದೇ ಹೆಚ್ಚು ಮಹತ್ವದ್ದಾಗಿತ್ತು. ಆದರೆ ಭ್ರಷ್ಟಾಚಾರದ ಪ್ರಶ್ನೆಯಲ್ಲಿ ಕರ್ನಾಟಕದಲ್ಲಿನ ಅದರ ರಾಜ್ಯ ಸರಕಾರದ ದಾಖಲೆಗಳು ಅದರ ಇಬ್ಬಂದಿತನವನ್ನು ಬಯಲಿಗೆಳೆಯುತ್ತಿವೆ.

> ಬಿಜೆಪಿ ರಾಜಘಾಟಿನಲ್ಲಿ ಒಂದು 'ನಲಿವಿನ' ಭಾವದಲ್ಲಿ ಒಂದು ಧರಣಿ ಸಂಘಟಿಸಿದೆ. ಆರೆಸ್ಸೆಸ್ ಮತ್ತು ಬಿಜೆಪಿಗೆ ಭ್ರಷ್ಟಾಚಾರ ಮತ್ತು ಕಪ್ಪು ಹಣದ ಪ್ರಶ್ನೆಗಿಂತ ತಮ್ಮ ರಾಜಕೀಯ ಉಳಿವಿಗಾಗಿ ಈ ಅವಕಾಶವನ್ನು ಬಳಸಿಕೊಳ್ಳುವುದೇ ಹೆಚ್ಚು ಮಹತ್ವದ್ದಾಗಿದೆ. ಆದರೆ ಭ್ರಷ್ಟಾಚಾರದ ಪ್ರಶ್ನೆಯಲ್ಲಿ ಕರ್ನಾಟಕದಲ್ಲಿನ ಅದರ ರಾಜ್ಯ ಸರಕಾರದ ದಾಖಲೆಗಳು ಅದರ ಇಬ್ಬಂದಿತನವನ್ನು ಬಯಲಿಗೆಳೆಯುತ್ತಿವೆ.

ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಜನರಲ್ಲಿ ಹಬ್ಬಿರುವ ಜುಗುಪ್ಸೆ ಮತ್ತು ಅಸಂತೃಪ್ತಿಯನ್ನು ಉಪಯೋಗಿಸಿಕೊಂಡು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಈ ಬೆಳವಣಿಗೆಗಳನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುವ ಸಿನಿಕ ಪ್ರಯತ್ನ ನಡೆಸುತ್ತಿವೆ. ಈ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿರುದ್ಧ ಪರಮ ಮಹತ್ವದ ಹೋರಾಟದ ನಿರಾಕರಣೆಯಾಗುತ್ತಿದೆ. ಇದು ಬಹುಶಃ ಉದ್ದೇಶಪೂರ್ವಕವಾದದ್ದು, ಏಕೆಂದರೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಚಮಚಾ ಬಂಡವಾಳಶಾಹಿಯನ್ನು ಪ್ರೋತ್ಸಾಹಿಸುವಂತವುಗಳು.

ಜನತೆಯ ಒತ್ತಡ ಅಗತ್ಯ

ಲೋಕಪಾಲದ ಪ್ರಶ್ನೆ ದೇಶದ ಮತ್ತು ಸಂಸತ್ತಿನ ಎದುರು ಹೇಗೆ ಕಳೆದ ನಾಲ್ಕು ದಶಕಕ್ಕಿಂತಲೂ ಹೆಚ್ಚು ಕಾಲದಿಂದ ನೆನೆಗುದಿಯಲ್ಲಿದೆ ಎಂಬುದನ್ನು ನಾವು ಹಿಂದಿನ ಸಂಚಿಕೆಗಳಲ್ಲಿ ಗಮನಿಸಿದ್ದೇವೆ. ಈಗಿನ ಸಂದರ್ಭವೂ ಸೇರಿದಂತೆ ಮೂರು ಸಂದರ್ಭಗಳಲ್ಲಿ ಸಿಪಿಐ(ಎಂ) ಒತ್ತಾಯದಿಂದ ಕರಡು ಮಸೂದೆಗಳು ಸಂಸತ್ತಿನ ಮುಂದೆ ಬಂದವು. ಆದರೆ, ಹಿಂದಿನ ಸಂಚಿಕೆಯಲ್ಲಿ ಈ ಅಂಕಣದಲ್ಲಿ ಚರ್ಚಿಸಿದ ಪ್ರಶ್ನೆಗಳನ್ನು ಈಗಲೂ ಇಂತಹ ಒಂದು ಕಾನೂನನ್ನು ರೂಪಿಸದಂತೆ ತಡೆಯಲು ನೆಪಗಳಾಗಿ ಬಳಸಲಾಗುತ್ತಿದೆ.

ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಹತ್ತಿಕ್ಕಲು ಮತ್ತು ವಿದೇಶಗಳಲ್ಲಿ ಹೊಲಸು ವಿಧಾನಗಳಿಂದ ಪೇರಿಸಿಟ್ಟ ಕಪ್ಪು ಹಣವನ್ನು ಹಿಂದಕ್ಕೆ ತರಲು ಬೇಕಾಗುವ ಒಂದು ಪರಿಣಾಮಕಾರಿ ಮಸೂದೆಯನ್ನು ಸಂಸತ್ತಿನ ಮುಂದೆ ತರುವಂತೆ ಸರಕಾರವನ್ನು ಬಲವಂತಗೊಳಿಸಲು ಜನತೆಯ ಒತ್ತಡವನ್ನು ಬಲಪಡಿಸಲೇಬೇಕಾಗಿದೆ. ಇದನ್ನು ತುರ್ತಾಗಿ ಮಾಡಲೇಬೇಕಾಗಿದೆ. ಹಾಗೂ ಈ ಹಣವನ್ನು ನಮ್ಮ ಜನತೆಯ ಬದುಕಿನ ಗುಣಮಟ್ಟವನ್ನು ಉತ್ತಮಪಡಿಸಲು ಬಳಸಬೇಕಾಗಿದೆ.

ಬಿಜೆಪಿ ಸರ್ಕಾರದ 3 ವರ್ಷಗಳು....

ಪುಟ 5 ರಿಂದ

ಹಣ ಖರ್ಚುಮಾಡಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಿದರೂ ಯಾವ ಬಂಡವಾಳವು ರಾಜ್ಯಕ್ಕೆ ಹರಿದು ಬರಲಿಲ್ಲ. ಯಾವ ಕಾರ್ಖಾನೆಗಳು ಸ್ಥಾಪನೆ ಆಗಲಿಲ್ಲ. ಉತ್ಪತ್ತಿಯು ಆಗಲಿಲ್ಲ. ಉದ್ಯೋಗಾವಕಾಶಗಳು ಸೃಷ್ಟಿಯಾಗಲಿಲ್ಲ.

ಕೃಷಿ ರಂಗವು ದಿವಾಳಿಯ ಅಂಚಿಗೆ ಹೋಗಿದೆ

ಕೃಷಿ ವಲಯದ ಉತ್ಪಾದನೆಯ 1.6% ಕ್ಕೆ ಕುಸಿದಿದೆ ಆಹಾರಪದಾರ್ಥಗಳ ಉತ್ಪಾದನೆ ಕಡಿಮೆಯಾಗಿದೆ. ರೈತರು ದಿವಾಳಿಯಾಗಿ ಅತ್ಮಹತ್ಯೆಗಳು ಅವ್ಯಾಹತವಾಗಿ ಮುಂದುವರೆದಿವೆ. ರೇಷ್ಮೆ ಮತ್ತು ಇತರೆ ತರಕಾರಿ ಬೆಳೆಗಾರರು ಬೀದಿಗೆ ಬಿದ್ದಿದ್ದಾರೆ. ಇದರ ಜೊತೆಗೆ ಕಳೆದ 3 ವರ್ಷಗಳಲ್ಲಿ ಸಾವಿರಾರು ಎಕರೆ ಕೃಷಿ ಭೂಮಿಯನ್ನು ಬಹುರಾಷ್ಟ್ರೀಯ ಕಂಪನಿಗಳಿಗಾಗಿ ಸ್ವಾದೀನಪಡಿಸಿ ಕೊಳ್ಳಲಾಗಿದೆ. ಈಗ 4 ಲಕ್ಷ ಎಕರೆ ಭೂಮಿಯನ್ನು ಸ್ವಾದೀನ ಪಡಿಸಿಕೊಳ್ಳುವ ಪ್ರಯತ್ನದಲ್ಲಿದಲ್ಲಿದೆ. ಕೃಷಿಯ ಭೂಮಿ ಯನ್ನು ಕೃಷಿಯೇತರ ಉದ್ದೇಶಗಳಿಗೆ ಉಪಯೋಗಿಸುವ ಸಲವಾಗಿ ಕರ್ನಾಟಕ ಭೂ ಸುಧಾರಣಾ ಕಾನೂನನ್ನು ತಿದ್ದುಪಡಿ ಮಾಡಲಾಗಿದೆ. ಇದರಿಂದಾಗಿ ಇಡೀ ರಾಜ್ಯದ ಕೃಷಿ ಭೂಮಿ ಬಹುರಾಷ್ಟ್ರಿಯ ಕಂಪನಿಗಳ ಪಾಲಾಗುತ್ತಿದೆ. ಬಹುರಾಷ್ಟ್ರಿಯ ಕಂಪನಿಗಳಿಗೆ ಲಕ್ಷಾಂತರ ಎಕರೆ ಕೃಷಿ ಭೂಮಿಯನ್ನು ಕೊಡಲು ಕೃಷಿಯಲ್ಲಿ ಬಂಡವಾಳ ಹೂಡಿಕೆಯ ಸಮಾವೇಶ ಗಳನ್ನು ನಡೆಸಲು ಎಲ್ಲಾರೀತಿಯಾದ ತಯಾರಿ ನಡೆಸುತ್ತಿದೆ. ಕೃಷಿಗೆ ಅವಶ್ಯಕತೆ ಇರುವ ನೀರಾವರಿ ಅಭಿವೃದ್ಧಿಪಡಿಸುವ ಸಾವಯುವ ಕಾರ್ಯಕ್ರಮವನ್ನು ಕಳೆದ 3 ವರ್ಷಗಳಲ್ಲಿ ತೆಗೆದುಕೊಳ್ಳಲಿಲ್ಲ. ವಿದ್ಯುಚ್ಛಕ್ತಿ ಉತ್ಪಾದನೆ ಹೆಚ್ಚಳವಾಗಲಿಲ್ಲ. ಪ್ರತಿದಿನ 45 ಲಕ್ಷ ಯೂನಿಟ್‌ಗಳ ವಿದ್ಯುತ್ ಕೊರತೆ ಉಂಟಾಗಿದೆ. ನಾನು ರೈತರ ಪರ ಎಂದು ತೋರಿಸಲು ಕೃಷಿ ಬಜೆಟ್ ಪ್ರತ್ಯೇಕವಾಗಿ ಪ್ರತ್ಯೇಕವಾಗಿ ಮಂಡಿಸಿ ಕೃಷಿವಲಯಕ್ಕೆ ಸರ್ಕಾರ ವಂಚನೆ ಮಾಡಿದೆ. ಕೃಷಿ ಬಜೆಟ್‌ನಲ್ಲಿ ಕೃಷಿರಂಗಕ್ಕೆ ಹೆಚ್ಚಿನ ಹಣ ಸಿಕ್ಕುತ್ತದೆಂಬ ಭ್ರಮೆಯನ್ನು ಹಚ್ಚಿಸಿ ಕೇವಲ ಶೇ.1ಕ್ಕಿಂತ ಸ್ವಲ್ಪ ಮಾತ್ರ ಹೆಚ್ಚಿಸಿದೆ. ಹೀಗಾಗಿ ಕೃಷಿರರಿಗದಿವಾಳಿ ಅಂಚಿಗೆ ತಲುಪುತ್ತಿದೆ.

ಶಿಕ್ಷಣರಂಗ :

ಶಿಕ್ಷಣರಂಗವು ಗೊತ್ತುಗುರಿ ಇಲ್ಲದೆ ಸಾಗುತ್ತಿದೆ. ಇಡೀ ಶಿಕ್ಷಣ ರಂಗದಲ್ಲಿ ಯಾರು ಆಡಳಿತ ನಡೆಸುತ್ತಿದ್ದಾರೆಂಬುದು ತಿಳಿಯುತ್ತಿಲ್ಲ. ಖಾಸಗಿ ವಿದ್ಯಾ ಸಂಸ್ಥೆಗಳ ಕೈಯಲ್ಲಿ ಶಿಕ್ಷಣರಂಗ ಸಿಲುಕಿಕೊಂಡಿದೆ. ಅವರ ಮನಸೋ ಇಚ್ಛೆ ಶುಲ್ಕವನ್ನು ಹೆಚ್ಚಿಸುವುದರ ಜೊತೆಗೆ ಇಡಿ ಶಿಕ್ಷಣರಂಗವು ಅರಾಜಕತೆಯಿಂದ ದಿಕ್ಕು ದಿಸೆಯಿಲ್ಲದಾಗಿದೆ. ವೈದ್ಯಕೀಯ ಮತ್ತು ಇಂಜನೀಯರಿಂಗ್ ಶಿಕ್ಷಣವು ಖಾಸಗಿ ಸಂಸ್ಥೆಗಳ ವ್ಯಾಪಾರ ಕೇಂದ್ರವಾಗಿ ಮಾರ್ಪಾಟಾಗಿದೆ.

ಬಡವರ ಮಕ್ಕಳಿಗೆ ಶಿಕ್ಷಣವನ್ನು ಪಡೆಯುವುದೇ ಬಹಳ ದುಬಾರಿಯಾಗಿದೆ. ಶಿಕ್ಷಣರಂಗದಲ್ಲಿನ ವ್ಯಾಪಾರೀಕರಣ ದಿಂದಾಗಿ ಶಿಕ್ಷಣ ಉಳ್ಳವರ ಸರಕಾಗಿ ಮಾರ್ಪಾಟಾಗಿದೆ. ಪ್ರಜ್ಞಾಪೂರ್ವಕ ವಾಗಿಯೇ ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಮತ್ತು ವಿಶ್ವವಿದ್ಯಾಲಯಗಳನ್ನು ಕಡೆಗಣಿಸ ಲಾಗುತ್ತಿದೆ.



ಕಳೆದ 3 ವರ್ಷಗಳಲ್ಲಿ ವಿಶ್ವವಿದ್ಯಾ ನಿಲಯಗಳ ಪ್ರತಿಷ್ಠೆ ಕುಸಿಯ ತೊಡಗಿದೆ. ಭ್ರಷ್ಟಾಚಾರದ ಹಗರಣಗಳು ಹೆಚ್ಚಾಗುತ್ತಿವೆ. ಹಾಗಾಗಿ ವಿಶ್ವವಿದ್ಯಾಲಯಗಳ ಪಾವಿತ್ರತೆಗೆ ಮಸಿ ಬಳಿಯಲಾಗುತ್ತಿದೆ. ಅದರ ಗುಣಮಟ್ಟವು ಕುಸಿದುಹೋಗಿದೆ.

ಸ್ಥಗಿತ ಗೊಂಡ ಆಡಳಿತ :

ಕಳೆದ 3 ವರ್ಷಗಳಲ್ಲಿ ಕರ್ನಾಟಕದ ಆಡಳಿತ ಯಂತ್ರಾಂಗ ಎಷ್ಟು ಕುಸಿದಿದೆ ಮತ್ತು ನಿಷ್ಕ್ರಯಗೊಂಡಿದೆ ಎಂದರೆ ಕರ್ನಾಟಕದ ಉಚ್ಚನ್ಯಾಯಾಲಯ ಮತ್ತು ಸರ್ವೋಚ್ಚನ್ಯಾಯಾಲಯಗಳು ಅದೆಷ್ಟು ಬಾರಿ ಛೀಮಾರಿ ಹಾಕಿದೆಯೆಂದರೆ ಮಾನ, ಮರ್ಯಾದೆ ಮತ್ತು ಗೌರವವಿದ್ದರೆ. ಯಡಿಯೂರಪ್ಪನ ಸರ್ಕಾರ ಎಂದೋ ರಾಜಿನಾಮೆಯನ್ನು ಕೊಟ್ಟುಹೊಗುತ್ತಿತ್ತು. ಆ ಪದಗಳಿಗೆ ಅರ್ಥ



ಗೊತ್ತಿಲ್ಲದಷ್ಟು ಬುದ್ದಿಗೇಡಿತನವನ್ನು ಪ್ರದರ್ಶಿಸುತ್ತಿದೆ. ಕಡೆಗೆ ಕರ್ನಾಟಕದ ಉಚ್ಚನ್ಯಾಯಾಲಯವು ನಿಮಗೆ ಆಡಳಿತ ನಡೆಸುವುದು ಸಾಧ್ಯವಾಗದಿದ್ದರೆ ಬಿಟ್ಟು ತೊಲಗಿ ಎಂದು ಹೇಳಿತು, ಅದನ್ನೂ ಈ ಸರ್ಕಾರ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ರಾಜ್ಯದ ಮುಖ್ಯಕಾರ್ಯ ದರ್ಶಿಯು ಸೇರಿ ಬಹುತೇಕ ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಪ್ರತಿದಿನ ಉಚ್ಚನ್ಯಾಯಾಲದಲ್ಲಿ ಹಾಜರಿರಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಿಷ್ಕ್ರಿಯಗೊಂಡ ಆಡಳಿತ ಯಂತ್ರಾಂಗವು ಸಹಜವಾಗಿ ಭ್ರಷ್ಟತನವನ್ನು ಮೈಗೂಡಿಸಿ ಕೊಳ್ಳುತ್ತದೆ. ರಾಜ್ಯದ ಆಡಳಿತಯಂತ್ರಾಂಗ ಎಷ್ಟು ಭ್ರಷ್ಟಗೊಂಡಿದೆಯೆಂದರೆ, ಅದನ್ನು ಊಹಿಸಲೂ ಸಾಧ್ಯವಿಲ್ಲದಷ್ಟು ಭ್ರಷ್ಟಾಚಾರದಲ್ಲಿ ತೊಡಗಿದೆ. ಅಧಿಕಾರಿಗಳ ನಿರಂತರ ವರ್ಗಾವಣೆಯಿಂದಾಗಿ ಯಾವ ಅಧಿಕಾರಿಯು ನಿರ್ಭಯ ಮತ್ತು ಅತಂಕ ರಹಿತವಾಗಿ ಕೆಲಸಮಾಡಲು ಸಾಧ್ಯವಾಗುತ್ತಿಲ್ಲ. ಆಡಳಿತ ಯಂತ್ರಾಂಗವು ಸಂಪೂರ್ಣವಾಗಿ ಹಾದಿ ತಪ್ಪಿದೆ. ಇದರ ಪರಿಣಮ ರಾಜ್ಯದ ಅಭಿವೃದ್ಧಿ ಕುಂಠಿತಗೊಂಡಿದೆ ಮತ್ತು ಜನ ಸಾಮಾನ್ಯರು ಬಲಿಪಶುಗಳಾಗಿದ್ದಾರೆ. ಸ್ವತಃ ಮುಖ್ಯಮಂತ್ರಿ ಯವರೇ ಅಧಿಕಾರಿಗಳನ್ನು ಕೆಲಸ ಬಿಟ್ಟು ತೊಲಗಿ ಎಂದು ಹೇಳುವಷ್ಟರ ಮಟ್ಟಿಗೆ ಆಡಳಿತಯಂತ್ರಾಂಗ ಕುಸಿದಿದೆ. ಸರ್ಕಾರದ ಕೆಲಸವೆಂದರೆ ಲಂಚ ಪಡೆಯುವುದು ಎಂಬಂತಾಗಿದೆ.

ಸಂವೇದನಾ ಶೀಲತೆಯನ್ನು ಕಳೆದುಕೊಂಡ ಸರ್ಕಾರ :

ಇಡೀ ದೇಶಕ್ಕೆ ಭ್ರಷ್ಟಚಾರದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂಬ 'ಗೌರವ'ಕ್ಕೆ ಪಾತ್ರವಾಗಿದ್ದು ಬಿ.ಜೆ.ಪಿ.ಯ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಈ ರಾಜ್ಯದಲ್ಲಿ ನಡೆದಿರುವ ಭ್ರಷ್ಟಾಚಾರದ ಹಗರಣಗಳು ದೇಶದ ಯಾವ ರಾಜ್ಯದಲ್ಲಿ ನಡೆದಿಲ್ಲ. ಯಡಿಯೂರಪ್ಪನ ಮಂತ್ರಿ ಮಂಡಲದಲ್ಲಿರುವ ಬಹುತೇಕ ಸದಸ್ಯರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಒಂದಲ್ಲಾ ಒಂದು ಹಗರಣದಲ್ಲಿ ಭಾಗಿಗಳಾಗಿದ್ದಾರೆ. ಕಳೆದ 3 ವರ್ಷಗಳಲ್ಲಿ 4 ರಿಂದ 5 ಜನ ಮಂತ್ರಿ ಗಳು ಭ್ರಷ್ಟಾಚಾರದಿಂದಾಗಿ ರಾಜಿನಾಮೆ ಕೂಡಬೇಕಾಗಿ ಬಂತು, ಸ್ವತಃ ಮುಖ್ಯ ಮಂತ್ರಿಗಳೇ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಮತ್ತು ಸುಮಾರು 4 ಭ್ರಷ್ಟಾಚಾರದ ಮೊಕದ್ದಮೆಗಳಲ್ಲಿ ಅಪರಾಧಿ ಸ್ಥಾನದಲ್ಲಿದ್ದಾರೆ.

ಗಣಿ ಹಗರಣವು ಇಡೀ ದೇಶದಲ್ಲಿ ಚರ್ಚೆಯ ಸುದ್ದಿಯಾಗಿದೆ. ದೇಶದ ಸರ್ವೋಚ್ಚನ್ಯಾಯಾಲವೇ ಮಧ್ಯಪ್ರವೇಶಿಸಿ ತನಿಖೆಯ ಉಸ್ತುವಾರಿ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಯಡಿಯೂರಪ್ಪನ ಮಂತ್ರಿ ಮಂಡಲದ ಹಲವಾರು ಸದಸ್ಯರುಗಳು ಗಣಿ ಲೂಟಿಯಲ್ಲಿ ತೊಡಿಗಿದ್ದಾರೆ. ಭೂಹಗರಣಗಳಿಗಂತೂ ಲೆಕ್ಕವೇ ಇಲ್ಲ, ಭೂಹಗರಣದಿಂದಾಗಿ ಒಬ್ಬ ಮಂತ್ರಿ ರಾಜಿನಾಮೆ ಕೊಡಬೇಕಾಯ್ತು. ಸ್ವತಃ ಮುಖ್ಯಮಂತ್ರಿ ಮತ್ತು ಅವರ ಕುಟುಂಬದ ಸದಸ್ಯರುಗಳು ಭೂಕಬಳಿಕೆಯ ಹಗರಣಗಳಲ್ಲಿ ತೊಡಗಿದ್ದಾರೆ. ಸಾವಿರಾರು ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಭೂಮಿಯನ್ನು ನುಂಗಿಹಾಕಿದ್ದಾರೆ. ಇದರ ಬಗ್ಗೆ ಕರ್ನಾಟಕದ ಲೋಕಾಯುಕ್ತರು ಹಲವಾರು ಮೊಕದ್ದಮೆ ಗಳನ್ನು ದಾಖಲಿಸಿ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಬಿ.ಜೆ.ಪಿ ಯ ಈ ಭ್ರಷ್ಟಾಚಾರ ಹಗರಣಗಳ ಬಗ್ಗೆ ವಿರೋಧ ಪಕ್ಷಗಳು ನಿರಂತರವಾಗಿ ಹಗರಣಗಳನ್ನು ದಾಖಲೆಗಳ ಸಮೇತ ಬಹಿರಂಗಪಡಿಸಿದರೂ, ಸಾರ್ವಜನಿಕರು ಪ್ರತಿಭಟಿಸಿದರೂ ತನಿಖೆಗಳು ನಡೆದು ವರದಿಯನ್ನು ಕೊಟ್ಟರೂ ಮಾಧ್ಯಮಗಳು ಎಷ್ಟು ಬರೆದರೂ ಯಡಿಯೂರಪ್ಪ ಮತ್ತು ಬಿ.ಜೆ.ಪಿ ಸರ್ಕಾರಕ್ಕೆ ಮಾನಮರ್ಯಾದೆ ಇಲ್ಲ. ಯಾವ ಖಂಡನೆಗಳು, ನಿಂದನೆಗಳು, ಛೀಮಾರಿಗಳು, ಪ್ರತಿಭಟನೆಗಳಿಗೆ ಕಿವಿಕೊಡ ಲಾರದಷ್ಟು ಸಂವೇದನಾ ಶೀಲತೆಯನ್ನು ಈ ಸರ್ಕಾರ ಕಳೆದು ಕೊಂದು ಬಿಟ್ಟಿದೆ.

ಯಡಿಯೂರಪ್ಪನ ದಿನನಿತ್ಯದ ಅಭಿವೃದ್ಧಿಯ ಮಂತ್ರದ ಗುಟ್ಟೇನೆಂದರೆ ಅಭಿವೃದ್ಧಿ ಹೆಸರಿನಲ್ಲಿ ಈ ರಾಜ್ಯದ ಸಂಪತ್ತನ್ನು ಕೆಲವೇ ಮಂದಿ ಲೂಟಿ ಹೊಡೆದು ಲಕ್ಷಾಂತರ ಕೋಟಿಗಳಷ್ಟು ಭ್ರಷ್ಟಾಚಾರವನ್ನು ನಡೆಸಿರುವುದು. ಅದರಲ್ಲೂ ಯಡಿಯೂರಪ್ಪ ನಂ.1. ಈ ಲೂಟಿ ಕೋರರ ಆಸ್ತಿ ಅಭಿವೃದ್ಧಿಯಾಗಿದೆಯೇ ಹೊರತು ಈ ರಾಜ್ಯದ ಜನಸಾಮಾನ್ಯರ, ರೈತರ, ಕೃಷಿಕಾರ್ಮಿಕರ ಮತ್ತು ಸಮಸ್ಥ ದುಡಿಯುವ ವರ್ಗದ ಜೀವನದ ಮಟ್ಟ ಅಭಿವೃದ್ಧಿಯಾಗಲಿಲ್ಲ.

ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದಲ್ಲಿ ಮುಳುಗಿರುವ ಈ ಸರ್ಕಾರವು ರಾಜ್ಯವನ್ನು ಸರ್ವರೀತಿಯಲ್ಲಿ ದಿವಾಳಿ ಎಬ್ಬಿಸಿ ಅಂದಃ ಪತನದ ಹಾದಿಯನ್ನು ಹಿಡಿಸಿದೆ. ರಾಜ್ಯವು ಆರ್ಥಿಕವಾಗಿ ದಿವಾಳಿ ಆಗಿದೆ. ಯಡಿಯೂರಪ್ಪನ ನೇತೃತ್ವದ ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಂದಮೇಲೆ ರಾಜ್ಯವು ಆರ್ಥಿಕವಾಗಿ ದಿವಾಳಿಯಾಗಿ ಸಾಲದ ಸುಲಿಗೆ ಸಿಕ್ಕಿದೆ. ಇಂದು ರಾಜ್ಯ ಸರ್ಕಾರದ ಸಾಲ 1 ಲಕ್ಷ ಕೋಟಿಗೂ ಮೀರಿ ನಿಂತಿದೆ. ಇದಕ್ಕೆ ಬಡ್ಡಿಯಾಗಿ ರಾಜ್ಯದ ಒಟ್ಟು ಆದಾಯದ ಶೇ 28 ಭಾಗವನ್ನು ಬಡ್ಡಿರೂಪದಲ್ಲಿ ಪಾವತಿಸಬೇಕಾಗಿದೆ.

ಸಂಪನ್ಮೂಲಗಳ ಕ್ರೋಢೀಕರಣದ ಪ್ರಮಾಣ ಕಡಿಮೆ ಅಗಿದೆ. ಅನಗತ್ಯ ವೆಚ್ಚಗಳಿಂದ ರಾಜ್ಯದ ಬೊಕ್ಕಸ ಖಾಲಿ ಆಗುತ್ತಿದೆ. ಯೋಜನಾ ವೆಚ್ಚಗಳಿಗಿಂತ ಯೋಜನೇತರ ವೆಚ್ಚಗಳೇ ಹೆಚ್ಚು ತೊಡಗಿದೆ. ರಾಜ್ಯದ ಅಸಂಘಟಿತ ಕಾರ್ಮಿಕರು ಕನಿಷ್ಟ ಕೂಲಿಗಾಗಿ ಕಳೆದ ಮೂರು ವರ್ಷಗಳಲ್ಲಿ ಅಸಂಖ್ಯಾತ ಪ್ರತಿಭಟನೆಗಳನ್ನು ನಡೆಸಿದರು ಅದಕ್ಕೆ ಗಮನಕೊಡದ ಸರ್ಕಾರ ಮಂತ್ರಿಗಳ ಮತ್ತು ಶಾಸಕರ ಸಂಬಳ ಮತ್ತು ಭತ್ಯೆಗಳನ್ನು 150 ರಿಂದ 250 ರಷ್ಟು ಪಟ್ಟು ಹೆಚ್ಚಿಸಿಕೊಂಡಿದ್ದಾರೆ. ಈ ಸರ್ಕಾರದ ಈ ಕ್ರಮ ಅತ್ಯಂತ ಮೊಣೆಗೇಡಿ ಮತ್ತು ಲಜ್ಜೆಗೆಟ್ಟ ಸರ್ಕಾರವಾಗಿ ಸಾಬೀತಾಗಿದೆ.



ವೈದ್ಯಕೀಯ ಸ್ನಾತಕೋತ್ತರ ಸೀಟು ಹಂಚಿಕೆ ಹಗರಣ

ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ

ನಮ್ಮ ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರು ಎ.ರಾಮದಾಸ್ ಅಂತ. ಸರ್ಕಾರಿ ಆಸ್ಪತ್ರೆಗಳ ಮೇಲೆ ಆಗೀಗ ದಿಡೀರ್ ದಾಳಿ ನಡೆಸಿ 'ಅಕ್ರಮ'ಗಳನ್ನು ಪತ್ತೆ ಹಚ್ಚಿ ಬಾರಿ ಸುದ್ದಿ ಮಾಡುತ್ತಾ ಮಿಂಚುತ್ತಿದ್ದಾರೆ. ಆದರೆ ಅವರದೇ ಇಲಾಖೆಯ ಈ ಭಯಾನಕ ಹಗರಣ ಇನ್ನೂ ಈ ಸನ್ಮಾನ್ಯ ರಾಮದಾಸ ಕಣ್ಣು, ಕಿವಿಗಳೆಂಬೋ ಇಂದ್ರಿಯಗಳಿಗೆ ಯಾಕೆ ಬಿದ್ದಿಲ್ಲ ಎಂಬ ಯಕ್ಷ ಪ್ರಶ್ನೆ ನಮ್ಮ ಜನರ ಮನಸ್ಸಿನಲ್ಲಿ ಮೂಡಿದರೆ ಅದರಲ್ಲಿ ಜನರ ತಪ್ಪೇನು ಇಲ್ಲ. ಬೇಕಾದರೆ ನೀವೆ ನೋಡಿ.

ವೈದ್ಯಕೀಯ ಶಿಕ್ಷಣ ಅದರಲ್ಲೂ ಪದವಿ ನಂತರದ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಎಂದರೆ ಅದು ನೂರಾರು ಕೋಟಿ ರೂಪಾಯಿಗಳ ವ್ಯವಹಾರ ಎಂಬುದನ್ನು ನಾವು ನೆನಪಿಡಬೇಕು. ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣದಲ್ಲಿಯೂ ಖಾಸಗಿ ಕಾಲೇಜುಗಳು ನಿಗದಿತ ಪ್ರಮಾಣದ ಸೀಟುಗಳನ್ನು ಸರ್ಕಾರಿ ಕೋಟಾ ಆಗಿ ಅರ್ಹ ವಿದ್ಯಾರ್ಥಿಗಳಿಗೆ ಬಿಟ್ಟುಕೊಡಬೇಕಾಗಿದೆ. ಸೀಟುಗಳನ್ನೇನೋ ಬಿಟ್ಟು ಕೊಡಲಾಗುತ್ತಿದೆ. ಆದರೆ ಯಾವ ಸೀಟುಗಳನ್ನು ?

ಅತಿ ಹೆಚ್ಚು ಬೇಡಿಕೆ ಇರುವ, ಅತಿ ಹೆಚ್ಚು ಡೊನೇಷನ್ ತರುವ ಕ್ಲಿನಿಕಲ್ ವಿಭಾಗದ ಸೀಟುಗಳು ಖಾಸಗಿ ಪಾಲಿಗೆ. ಕಡಿಮೆ ಹಣವನ್ನು ತರುವ, ಕಡಿಮೆ ಬೇಡಿಕೆಯ ಸಿಟುಗಳು ಸರ್ಕಾರಿ ಕೋಟಾದ ವಿದ್ಯಾರ್ಥಿಗಳಿಗೆ. ಬಹುತೇಕ ಆಳುವ ಸರ್ಕಾರಗಳು ಶಾಮಿಲಾಗುವ ಕಾರಣದಿಂದ ಇಂತಹದ್ದೊಂದು ಬಾರಿ ಅಕ್ರಮ ಸಾಕಷ್ಟು ವರ್ಷಗಳಿಂದ ನಡೆದುಕೊಂಡು ಬಂದಿದೆ. ಬಿಜೆಪಿ ಸರ್ಕಾರದ ಸಾಧನೆ ಎಂದರೆ ಈ ಅಕ್ರಮಗಳನ್ನು ಒಂದು ಹೊಸ ಉನ್ನತ ಮಜಲಿಗೆ ಒಯ್ದು ಮುಟ್ಟಿಸಿರುವುದು. ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣದ ಈ ಬಾರಿ ಅಕ್ರಮಗಳ ವಿರುದ್ಧ ಇತ್ತೀಚಿಗಿನ ದಿನಗಳಲ್ಲಿ ಬಾರಿ ಆಕ್ರೋಶ ವ್ಯಕ್ತವಾಗಿತ್ತು, ಅದರ ಪರಿಣಾಮವೋ ಏನೋ ಎಂಬಂತೆ ಈ ವರ್ಷದಲ್ಲಿ ಮೊದಲಿಗೆ ಪ್ರಕಟವಾದ ಸೀಟು ಹಂಚಿಕೆ ಪಟ್ಟಿಯಲ್ಲಿ ಒಂದಷ್ಟು ನ್ಯಾಯ ಪಾಲಿಸಲು ಯತ್ನಿಸಲಾಗಿತ್ತು.

ಈ ನಡುವೆ ಏನೇನು ಕರಾಮತ್ತುಗಳು ನಡೆದವೋ , ಯಾರ್ಯಾರ ಕೈಗಳನ್ನು ತಿರುಚಲಾಯಿತೋ? ಯಾರ್ಯಾರ ಕೈಗಳು ಯಾವ ಯಾವ ಪ್ರಮಾಣದಲ್ಲಿ ಬಿಸಿಯಾಯಿತೋ ಆ ರಾಮದೇವನೇ ಬಲ್ಲ. ಬಳ್ಳಾರಿ ಪರೀಕ್ಷಾ ಕೇಂದ್ರದಲ್ಲಿ ಅಕ್ರಮದ ಆರೋಪ ಕೇಳಿಬಂದದ್ದರ ಹಿನ್ನೆಲೆಯಲ್ಲಿ ಕೋರ್ಟು ಮರುಪರೀಕ್ಷೆಯ ನಂತರ ಪರಿಷ್ಕೃತ ಸೀಟು ವಿತರಣಾ ಪಟ್ಟಿ ಪ್ರಕಟಿಸಿ ಅಂದ್ದದ್ದನ್ನೇ ನೆಪ ಮಾಡಿಕೊಂಡು ಈಗ ಮತ್ತೆ ಅದೇ ಚಾಳಿಗೆ ಅವಕಾಶ ಮಾಡಿ ಕೊಡಲಾಗಿದೆ. ಉದಾಹರಣೆಗೆ ಬಹುಬೇಡಿಕೆಯ ಅರ್ಥೋಪೆಡಿಕ್ ವಿಭಾಗದ ಸೀಟು ಖಾಸಗಿ ಪಾಲಿಗೆ ದಕ್ಕಿದೆ.

ಇಷ್ಟೆ ಅಲ್ಲ. ಇದರಲ್ಲಿ ಇನ್ನೇನೇನೋ ಗೋಲ್‌ಮಾಲ್‌ಗಳಿವೆ. 10 ರಿಂದ 15 ನೇ ರ್‍ಯಾಂಕುಗಳಿಸಿರುವ ವಿದ್ಯಾರ್ಥಿಗಳಿಗೆ ಸಿಗದ ಬಹುಬೇಡಿಕೆಯ ರೇಡಿಯಾಲಜಿ ಸೀಟು 198 ನೇ ರ್‍ಯಾಂಕಿನ ವಿದ್ಯಾರ್ಥಿಗೆ ಸಿಕ್ಕಿದೆ. ಮೊದಲು



ಕೃಪೆ : ಪ್ರಜಾವಾಣಿ

ಅರ್ಹ ವಿದ್ಯಾರ್ಥಿಗಳು ತಮಗೆ ಬೇಕಾದ ಸಿಟು ಆಯ್ಕೆ ಮಾಡಿಕೊಳ್ಳಲು ಹೋದರೆ ಆಡಳಿತ ಮಂಡಳಿಗಳು ಇದು 'ರಿಸ್ಕ್' ಸೀಟು ಅಂತ ಹೆದರಿಕೆ ಹುಟ್ಟಿಸಿ ಆ ಸೀಟನ್ನು ಆಯ್ಕೆ ಮಾಡಿಕೊಳ್ಳದಂತೆ ಕುತಂತ್ರ ಮಾಡುವುದು ಆ ಮೇಲೆ ಅದೇ ಸೀಟನ್ನು 'ಬೇಕಾದವರಿಗೆ' ವಾರಿಕೊಳ್ಳುವುದು, ಕ್ಷಮಿಸಿ ಹರಾಜು ಹಾಕಿಕೊಳ್ಳುವುದು ಇದು ನಡೆದಿದೆ.

ಶೈಕಣಿಕವಾಗಿ ಅರ್ಹತೆ ಇರುವ, ಆದರೆ ಆ ನಿರ್ದಿಷ್ಟ ಸೀಟು ಬೇಕಾಗಿಲ್ಲದ ವಿದ್ಯಾರ್ಥಿಗಳನ್ನು ಮೊದಲು ಕಳಿಸಿ ಅವರಿಗೆ ಸೀಟು ಕೊಡಿಸಿ ಆ ಮೇಲೆ ಆ ಸೀಟನ್ನು ಆ ವಿದ್ಯಾರ್ಥಿಯಿಂದ ವಾಪಸ್ ಮಾಡಿಸಿ ಅದನ್ನು ತಾವೇ ಕಬಳಿಸುವ ಹಣವಂತರ ಮತ್ತು ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಸಂಚುಗಳನ್ನು ನಮ್ಮ ಘನ ಬಿಜೆಪಿ ಸರ್ಕಾರದ ಸಚಿವರು ನೋಡಿ ಕೊಂಡು ಮುಗುಂ ಆಗಿ ಕೂತಿದ್ದಾರೆ. ಭ್ರಷ್ಟಾಚಾರ, ಹಗರಣಗಳಲ್ಲಿ ಇದುವರೆಗಿನ ಸಮಸ್ತ ದಾಖಲೆ ಗಳನ್ನೂ ಮುರಿದು ಮುನ್ನಡಿದಿರುವ ಬಿಜೆಪಿ ಸರ್ಕಾರದ ಕೀರೀಟಕ್ಕೆ ಆಹಾ ! ಇನ್ನೊಂದು ಸುಂದರ ಗರಿ.

★

ಯಡಿಯೂರಪ್ಪ–ಬೋಪಯ್ಯ ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ

ಬಹಳ ಹಗ್ಗ ಜಗ್ಗಾಟಗಳ ನಂತರ ಕರ್ನಾಟಕ ರಾಜ್ಯದಲ್ಲಿ ಈಗ ವಿಧಾನ ಸಭಾ ಅಧಿವೇಶನ ನಡೆಯುತ್ತಿದೆ. ಜೆಡಿ(ಎಸ್) ಕಾಂಗ್ರೆಸ್ ಪಕ್ಷಗಳು ಅಧಿವೇಶನವನ್ನು ಬಹಿಷ್ಕರಿಸಿವೆ. ಪ್ರಮುಖ ಪ್ರತಿಪಕ್ಷಗಳ ಗೈರು ಹಾಜರಿಯಲ್ಲಿ ಒಂದು ಭರ್ಜರಿ ಮಸೂದೆಯನ್ನೆ ಅಂಗೀಕರಿಸಲಾಗಿದೆ. ಮುಖ್ಯಮಂತ್ರಿಗಳು, ಮುಂತ್ರಿಗಳು ಶಾಸಕರುಗಳ ಸಂಬಳ, ವಿವಿಧ ಭತ್ಯೆಗಳನ್ನು ಭರ್ಜರಿ ಯಾಗಿಯೇ ಏರಿಸಲಾಗಿದೆ. ಮುಖ್ಯಮಂತ್ರಿಗಳ ಮಾಸಿಕ ವೇತನ 12,000 ರೂಪಾಯಿಯಿಂದ ಏಕಾಏಕಿ 30,000 ರೂಪಾಯಿಗಳಿಗೆ ಏರಿಕೆಯಾಗಿದೆ. ವಾರ್ಷಿಕ ಅತಿಥಿ ಭತ್ಯೆ 75,000 ರೂ ನಿಂದ 1,50,000 ರೂ ಗಳಿಗೆ ಏರಿಕೆ ಯಾಗಿದೆ. ಹೀಗೆ ಉಳಿದವರಿಗೂ ವಿವಿಧ ರೀತಿಯ ಕೊಡುಗೆಗಳು ಸಿಕ್ಕಿವೆ. ಜನ ಸಾಮಾನ್ಯರುಗಳು, ತಮ್ಮ ಉತ್ಪನ್ನಗಳಿಗೆ ಬೆಲೆ ಸಿಗದೇ ಕಂಗಾಲಾಗಿರುವ ರೈತರು, ಕನಿಷ್ಟ ವೇತನವೂ ಸಿಗದ ಪರಿತಪಿಸುತ್ತಾ ತಿಂಗಳಾನುಗಟ್ಟಲೇ ವೇತನವೇ ಸಿಗದೇ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣ ಕುಳಿತಿದ್ದ ಗ್ರಾಮ ಪಂಚಾಯತ್ ನೌಕರರಿಗೆ ಏನು ದೊರೆಯಿತು. ಉಶ್?!!

ಇಂಥಾ ಅಸಂಬದ್ದ ಪ್ರಶ್ನೆಯನ್ನೆ ಕೇಳ ಬಾರದು. ಏಕೆಂದರೆ ಇದು ಬಿಜೆಪಿ ಸರ್ಕಾರ.

ಜನರ ಹೋರಾಟಕ್ಕೆ ಈ ಸರ್ಕಾರದಲ್ಲಿ ಸಿಗುವ ಗೌರವವಿದು. ಹೋಗಲಿ ಸುಪ್ರಿಂ ಕೋರ್ಟಿನ ಆದೇಶಕ್ಕಾದರೂ ಏನಾದರೂ ಬೆಲೆ ಇದೆಯಾ ?

ಯಾರು ಈ ಅಧಿವೇಶನವನ್ನು ನಡೆಸುತ್ತಿರುವ ಸಭಾಧ್ಯಕ್ಷರು? ಅದೇ ಬೋಪಯ್ಯನವರು. ಅದೇ ಬೋಪಯ್ಯನವರು....ಅಂದರೆ ಬಹುಮತ ಕಳೆದುಕೊಳ್ಳಲಿದ್ದ ಭ್ರಷ್ಟ ಬಿಜೆಪಿ ಸರ್ಕಾರವನ್ನು ಹೇಗಾದರೂ ಕಾಪಾಡಲು ಆತುರಗೆಟ್ಟು 16 ಜನ ಶಾಸಕರನ್ನು ರಾತ್ರೋ ರಾತ್ರಿ ಅನರ್ಹ ರನ್ನಾಗಿ ಮಾಡಿ ಆದೇಶ ಮಾಡಿ ಈಗ ಸುಪ್ರಿಂ ಕೋರ್ಟಿನಿಂದ ಛೀ ಮಾರಿ ಹಾಕಿಸಿಕೊಂಡಿರುವ ಅದೇ ಬೋಪಯ್ಯನವರು.

ಬೋಪಯ್ಯನವರಿಂದ ರಾಜಿನಾಮೆ ಪಡೆಯುವುದಿಲ್ಲ ಎಂದು ಘೋಷಿಸಿದ್ದಾರೆ ಡಾ। ಬಿ.ಎಸ್. ಯಡಿಯೂರಪ್ಪನವರು. ಇವರು ರಾಜಿನಾಮೆ ಪಡೆಯುವುದಿಲ್ಲ ಅವರು ರಾಜಿನಾಮೆ ಕೊಡುವುದಿಲ್ಲ. ಆಹಾ! ಹಾಗಲಕಾಯಿಗೆ ಬೇವಿನಕಾಯಿಯ ಸಾಥ್, ಬೇವಿನ ಕಾಯಿಗೆ ಹಾಗಲಕಾಯಿಯ ಸಾಥ್. ಬಿಜೆಪಿ ದರ್ಬಾರಿನ ವೈಭವವೋ ವೈಭವ.

●

ಸದಾನಂದ ಗೌಡರ ಮೋಹಕ ನಗುವೂ 20 ಎಕರೆ ಅರಣ್ಯ ಭೂಮಿಯ ವಶವೂ:

ಹೊಸ ನೀರು ಬಂದು ಹಳೆ ನೀರು ಕೊಚ್ಚಿ ಕೊಂಡು ಹೋಯ್ತು ಅಂದ ಹಾಗೆ ಬಿಜೆಪಿ ಸರ್ಕಾರದ ಹೊಸ ಹೊಸ ಹಗರಣಗಳ ಭರಾಟೆಯಲ್ಲಿ ನಾವು ಸ್ವಲ್ಪ ಹಳೆಯ ಹಗರಣಗಳನ್ನು ಮರೆಯಬಾರದು. ಹೀಗಾಗಿ ಈ ಪ್ರಶ್ನೆ.

ನಿಮಗೆ ಸದಾನಂದ ಗೌಡರು ನೆನಪಿದ್ದಾರಲ್ಲವೇ? ನೆನಪಿರಲೇ ಬೇಕು. ಏಕೆಂದರೆ ಈಗಲೂ ಅವರು ನಮ್ಮ ರಾಜ್ಯದ ಒಬ್ಬ ಸಂಸದರು. ಹಿಂದೆ ಅವರು ಬಿಜೆಪಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ತಮ್ಮ ಸಮಸ್ತ ಹಲ್ಲುಗಳನ್ನು ಪ್ರದರ್ಶಿಸಿ ತಾವು ಸದಾ ನಗುನಗುತ್ತಾ ಬೇರೆಯವರ ಮನಸ್ಸನ್ನೂ ಸಂತೋಷಪಡಿಸುವ ಸದಾನಂದರನ್ನು ಯಾರು ತಾನೆ ಮರೆಯಲು ಸಾಧ್ಯ !

ಸದಾನಂದರ ಸದಾ ನಗುವಿನ ಹಿಂದಿನ ರಹಸ್ಯವೇನು ಅಂತ ತಲೆ ಕೆಡಿಸಿಕೊಂಡವರಿಗೆ ಸಹಾಯವಾಗ ಬಹುದು ಅಂತ ಈ ಮಾಹಿತಿ. ಅದು ದಕ್ಷಿಣ

ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಕಲ್ಮಡ್ಕ ಗ್ರಾಮ. ಅಲ್ಲಿ ಒಂದಷ್ಟು ಅರಣ್ಯ ಭೂಮಿ ಇತ್ತು. ತಾಲ್ಲೂಕಿನ ಬಡ ದಲಿತರು, ಆದಿವಾಸಿಗಳು ವ್ಯವಸಾಯಕ್ಕಾಗಿ ಆ ಭೂಮಿಯನ್ನು ತಮಗೆ ನೀಡುವಂತೆ ಈ ಹಿಂದೆ ಹಲವು ಬಾರಿ ಮನವಿ ಮಾಡಿದ್ದರು. ಉಹುಂ. ಅದು ಅರಣ್ಯ ಭೂಮಿ. ಹಾಗೆಲ್ಲ ಅದನ್ನು ನೀಡಲು ಬರುವುದಿಲ್ಲ. ಅಲ್ಲವೇ ಹಾಗಾಗಿ ಭೂಮಿಯನ್ನು ಕೊಡಲಿಲ್ಲ. ಸಾರ್ವಜನಿಕ ಉದೇಶಕ್ಕಾಗಿ ಅಂದರೆ ಅಲ್ಲಿ ಪಂಚಾಯ್ತಿ ಕಛೇರಿಯ ಕಟ್ಟಡವನ್ನು ಕಟ್ಟಲು ಸ್ವಲ್ಪ ಜಮೀನು ನೀಡಿ ಎಂದು ಕೇಳಲಾಯ್ತು. ಹಾಗೇ ಕೊಡುವುದುಂಟೆ. ಅದು ಅರಣ್ಯ ಭೂಮಿ. ಉಹುಂ ನಿರಾಕರಿಸಿತು ಅರಣ್ಯ ಇಲಾಖೆ.

ಅಗೋ ಡಿ.ವಿ. ಸದಾನಂದ ಗೌಡರು ಗೌರವಾಧ್ಯಕ್ಷರಾಗಿರುವ ಒಂದು ಖಾಸಗಿ ಶಿಕ್ಷಣ ಸಂಸ್ಥೆ – ಕೆ.ಎಸ್.ಗೌಡ ಎಜುಕೇಷನ್ ಟ್ರಸ್ಟ್ ಈ ಜಮೀನಿಗಾಗಿ ಅರ್ಜಿ ಸಲ್ಲಿಸುತ್ತದೆ. ಆಹಾ ಏನು ಮಾಯೆಯೋ ಏನು ಮರ್ಮವೋ ?!! 20 ಎಕರೆ ಜಮೀನನ್ನು ಮುಂಜೂರು ಮಾಡೇ ಬಿಟ್ಟಿತು ಅರಣ್ಯ ಇಲಾಖೆ.

ಸದಾನಂದ ಗೌಡರ ಮೋಹಕ ನಗುವಿಗೆ ಅಂಥಾ ಶಕ್ತಿ ಇದೆ. ಅದು ಆಗದ ಕಾರ್ಯವನ್ನು ಆಗುವಂತೆ ಮಾಡುತ್ತದೆ. ಹಾಗಿದ್ದ ಮೇಲೆ ಸದಾನಂದಗೌಡರು ಸದಾ ಕಾಲ ನಗದೇ ಇನ್ನೇನು ತಾನೇ ಮಾಡುತ್ತಾರೆ. ಬಡ ದಲಿತರು, ಆದಿವಾಸಿ ಸದಾನಂದರ ಗೌಡರ ನಗುವನ್ನು ನೋಡಿ ಕೊಂಡು ಸಂತೋಷ ಪಡಬಹುದಲ್ಲವೇ? [illegible] ಜಮೀನು, ವ್ಯವಸಾಯ, ಅಂತ [illegible] ತಂಟೆ ಯಾಕೆ [illegible]


ವೇದರಾಜ ಎನ್.ಕೆ.


ಯುಪಿಎ-2 ಸರಕಾರ ಮತ್ತೊಮ್ಮೆ ತನ್ನ ಬುದ್ಧಿಹೀನತೆಯ, ದೂರದೃಷ್ಟಿಹೀನತೆಯ ಪ್ರದರ್ಶನ ನೀಡಿ ಈ ವಾರ ಮತ್ತೆ ದೇಶಾದ್ಯಂತ ತೀವ್ರ ಟೀಕೆಗೊಳಗಾಗಿದೆ. ಜೂನ್ 5 ಮತ್ತು 6 ರ ಮಧ್ಯರಾತ್ರಿಯಲ್ಲಿ ರಾಮಲೀಲಾ ಮೈದಾನದಲ್ಲಿ ಅದರ ನಿರ್ದೇಶನದಂತೆ ನಡೆದ ಪೋಲೀಸ್ ಕಾರ್ಯಾಚರಣೆಯಲ್ಲಿ ಪ್ರಕಟಗೊಂಡ ಅದರ ಅಸಮರ್ಥತೆ, ದಡ್ಡತನ ಅದರ ಸಮಯಸಾಧಕ ನಿಲುವುಗಳ ಫಲವೇ. ಅದರ ನಾಲ್ಕು ಹಿರಿಯ ಮಂತ್ರಿಗಳು ವಿಮಾನ ನಿಲ್ದಾಣದಲ್ಲಿ ರಾಮದೇವ್ ತಂಡವನ್ನು ಪ್ರಧಾನಮಂತ್ರಿ ಮತ್ತು ಸುಪ್ರಿಂ ಕೋರ್ಟ್ ಮುಖ್ಯ ನ್ಯಾಯಾಧೀಶರನ್ನು ಲೋಕಪಾಲ ಶಾಸನದ ಅಡಿಯಲ್ಲಿ ತರದಿರಲು ರಾಮದೇವ್ ಬೆಂಬಲದ ಬಗ್ಗೆ ಅಭಿನಂದಿಸುತ್ತಾ ಸ್ವಾಗತಿಸಿದ್ದು, ಪಂಚತಾರಾ ಹೋಟೇಲಿನಲ್ಲಿ ಆತನೊಂದಿಗೆ 'ವ್ಯವಹಾರ' ಕುದುರಿಸಿದ್ದು ಎರಡೂ ಕಡೆಯವರ ಸಮಯಸಾಧಕತನವನ್ನು ಬಯಲುಗೊಳಿಸಿದರೆ, ರಾಮದೇವ್ 'ಮಾತಿನಂತೆ' ನಡೆಯುವುದಿಲ್ಲ ಎಂದು ಗೊತ್ತಾದಾಗ ಪೋಲೀಸ್ ಕಾರ್ಯಾಚರಣೆ ನಡೆಸಿದ್ದು, ಈಗ ಆತನ ಹಣಕಾಸು (ಅ)ವ್ಯವಹಾರಗಳ ತನಿಖೆಯ ಮಾತು ಯುಪಿಎ-2 ಸರಕಾರ ತಾನಾಗಿಯೇ ಬಯಲಾಗುತ್ತಿದ್ದ ರಾಮದೇವ್ ರಂತವರನ್ನು ಹೀರೋ ಮಾಡುವಲ್ಲಿ 'ಯಶಸ್ವಿ'ಯಾದುದನ್ನು ತೋರಿಸಿದೆ. ಆದರೆ ಇವರಿಬ್ಬರಿಂದಾಗಿ ಭ್ರಷ್ಟಾಚಾರದ, ಕಪ್ಪು ಹಣದ ಪ್ರಶ್ನೆ ಕ್ಷುಲ್ಲಕಗೊಳ್ಳುತ್ತಿದೆ. ಯುಪಿಎಗಂತೂ ಕಪ್ಪು ಹಣವನ್ನು, ಅದರಲ್ಲೂ ವಿದೇಶಿ ಬ್ಯಾಂಕುಗಳಲ್ಲಿ ತುಂಬಿರುವ ಕಪ್ಪುಹಣವನ್ನು ಹೊರತೆಗೆಯುವ ಮನಸ್ಸಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ. ಅದೇ ವೇಳೆಗೆ ಅಮೆರಿಕಾದ ಓಲೈಕೆ, ಸಾರ್ವಜನಿಕ ವಲಯಕ್ಕೆ ಎದುರಾಗಿ ಖಾಸಗಿಯವರನ್ನು ಪ್ರೋತ್ಸಾಹಿಸುವ ಅದರ ನವ-ಉದಾರೀಕರಣದ ಬದ್ಧತೆ ಅಬಾಧಿತವಾಗಿ ಮುಂದುವರೆದಿದೆ ಎಂಬುದೂ ಈ ವಾರ ಮತ್ತೆ ಬಯಲಾಗಿದೆ.

ಕಪ್ಪು ಹಣದ ಸ್ವಿಸ್ ಕಿಟಕಿ: ಯುಪಿಎಗೇಕೇ ಕಾಣುತ್ತಿಲ್ಲ?

ಭಾರತದ ತೆರಿಗೆವಂಚಕ ಶ್ರೀಮಂತರ ಸಂಪತ್ತು ಬಹುಪಾಲು ವಿದೇಶಿ ಬ್ಯಾಂಕುಗಳಲ್ಲಿ, ಅದರಲ್ಲೂ ಸ್ವಿಸ್ ಬ್ಯಾಂಕುಗಳಲ್ಲಿ ಕೊಳೆಯುತ್ತಿದೆ ಎಂಬುದು ಎಲ್ಲರಿಗೂ ತಿಳಿದಿರುವ ಗುಟ್ಟು. ಭಾರತೀಯ ಶ್ರೀಮಂತರ ಇಂತಹ ಕಳ್ಳಹಣ ಸ್ವಿಸ್ ಬ್ಯಾಂಕುಗಳಲ್ಲಿರುವ ಇತರ ಎಲ್ಲ ದೇಶಗಳ ಶ್ರೀಮಂತರ ಒಟ್ಟು ಕಳ್ಳಹಣಕ್ಕೆ ಸಮ ಎಂದು ಅಂದಾಜು ಮಾಡಲಾಗಿದೆ(ಬಾಕ್ಸ್ ನೋಡಿ).

ಸ್ವಿಸ್ ಬ್ಯಾಂಕುಗಳ ನಿಯಮಾವಳಿಗಳಿಂದಾಗಿ, ಆ ದೇಶದ ಕಾನೂನುಗಳಿಂದಾಗಿ ಈ ಕಳ್ಳಹಣವನ್ನು ಪತ್ತೆ ಹಚ್ಚುವುದು ಕೂಡ ಕಷ್ಟ ಎಂಬುದು ಆಳರಸರ ಅಂಬೋಣ. ಆದರೆ ಇವೆಲ್ಲ ಕೇವಲ ನೆಪಗಳು ಎಂಬುದು ಈಗ ಬಯಲಾಗುತ್ತಿದೆ. ಸ್ವಿಝರ್ಲೆಂಡಿನ ತೆರಿಗೆ ಕಾನೂನುಗಳಲ್ಲಿ ವಿದೇಶಿ ಠೇವಣಿದಾರರ ಹಣವನ್ನು ಪತ್ತೆ ಮಾಡುವ ಕಿಟಕಿಯಿದೆ. ಅದನ್ನು ಯುರೋಪಿಯನ್ ಒಕ್ಕೂಟದ ದೇಶಗಳು ಈಗಾಗಲೇ ತೆರದು ಬಳಸಿಕೊಂಡಿವೆ. ಆದರೆ ಯುಪಿಎ-2 ಸರಕಾರಕ್ಕೆ ಇದರ ಅರಿವಿಲ್ಲವೇ ಅಥವ ಅದನ್ನು ಬಳಸುವ ಮನಸ್ಸಿಲ್ಲವೇ ಎಂಬುದು ತಜ್ಞರ ಸಂದೇಹ.

ವಿದೇಶಿ ಠೇವಣಿಗಳ ಮೇಲಿನ ಬಡ್ಡಿಆದಾಯಕ್ಕೆ ಸ್ವಿಸ್ ಸರಕಾರ ಹಾಕುವ 'ಧಾರಣ ತೆರಿಗೆ'(ರಿಟೆನ್ಶನ್ ಟ್ಯಾಕ್ಸ್-ಸದ್ಯ ಬಡ್ಡಿ ಆದಾಯದ 20%, ಈ ಜುಲೈನಿಂದ 35%)ಯ ಒಂದು ಭಾಗವನ್ನು ಸಂಬಂಧಪಟ್ಟ ದೇಶಕ್ಕೆ


ಕೃಪೆ : ಸತೀಶ್ ಆಚಾರ್ಯ

ಕೊಡಲು ಸ್ವಿಸ್ ಕಾನೂನುಗಳು ಅವಕಾಶ ಕೊಡುತ್ತವೆ. ಯುರೋಪಿಯನ್ ಒಕ್ಕೂಟದ ದೇಶಗಳು ಈ ಬಗ್ಗೆ ಸ್ವಿಸ್ ಸರಕಾರದೊಂದಿಗೆ 2005ದಲ್ಲೆ ಒಪ್ಪಂದವನ್ನೂ ಮಾಡಿಕೊಂಡು ಅಂದಿನಿಂದ ಈ ಬಾಬ್ತಿನಲ್ಲಿ ತೆರಿಗೆ ಪಾಲು ಪಡೆಯುತ್ತಿವೆ. 2008ರಲ್ಲಿ ಯುರೋಪಿಯನ್ ಒಕ್ಕೂಟದ ದೇಶಗಳು ಇದರಿಂದ 86 ಕೋಟಿ ಡಾಲರ್ ಆದಾಯ ಗಳಿಸಿವೆ. ಸದ್ಯಕ್ಕೆ ಈ ಕಾನೂನು ವೈಯಕ್ತಿಕ ವಿದೇಶಿ ಠೇವಣಿಗಳಿಗೆ ಸೀಮಿತವಾಗಿದ್ದು ಇದನ್ನು ಎಲ್ಲ ಠೇವಣಿಗಳಿಗೆ ವಿಸ್ತರಿಸುವ ಬಗ್ಗೆ ಮಾತುಕತೆಗಳು ನಡೆಯುತ್ತಿವೆ.

ಭಾರತ ಸರಕಾರವೂ ಇಂತಹ ಒಪ್ಪಂದ ಮಾಡಿಕೊಂಡರೆ, ಈ ವ್ಯವಸ್ಥೆಯ ಮೂಲಕ ಸ್ವಿಸ್ ಬ್ಯಾಂಕುಗಳಲ್ಲಿ ಭಾರತೀಯ ಠೇವಣಿದಾರರ ಬಡ್ಡಿ ಆದಾಯದ ಮೇಲಿನ 'ಧಾರಣ ತೆರಿಗೆ'ಯ ಪಾಲಿನಿಂದ ಪ್ರತಿವರ್ಷ ಸಾಕಷ್ಟು ಮೊತ್ತ (ಕನಿಷ್ಟ 100 ಕೋಟಿ ರೂ.)ದೇಶಕ್ಕೆ ಹರಿದು ಬರಬಹುದಷ್ಟೇ ಅಲ್ಲ, ಇದರ ಮೂಲಕ ಕಾನೂನುಬದ್ಧ ಹಣವೆಷ್ಟು, ಕಳ್ಳಹಣವೆಷ್ಟು ಎಂದು ಪತ್ತೆ ಹಚ್ಚಲೂ ಸಾಧ್ಯವಿದೆ. ಏಕೆಂದರೆ ಈ ಸ್ವಿಸ್ ಠೇವಣಿಗಳ ಮೂಲವನ್ನು ತಿಳಿಸುವ ಕರ್ತವ್ಯ ಠೇವಣಿದಾರ ಮೇಲಿದೆ.

ಸುಪ್ರಿಂ ಕೋರ್ಟ್ ತರಾಟೆಗಳು, ಭ್ರಷ್ಟಾಚಾರ ಮತ್ತು ಕಪ್ಪು ಹಣದ ವಿರುದ್ಧ ಆಂದೋಲನಗಳು ಆರಂಭವಾಗಿರುವ ಹಿನ್ನೆಲೆಯಲ್ಲಿ ಹಿಂದಿನ ಭಾರತ ಸರಕಾರಗಳಂತೆ ಇದುವರೆಗೆ ನಿಷ್ಕ್ರಿಯವಾಗಿದ್ದು, 'ತೆರಿಗೆಮುಕ್ತ ಆಶ್ರಯಧಾಮ'ಗಳೊಂದಿಗೆ ತೆರಿಗೆ ಮಾಹಿತಿ ವಿನಿಮಯ ಒಪ್ಪಂದಗಳನ್ನು ಮಾಡಲಾಗುತ್ತಿದೆ, ಹತ್ತಾರು ದೇಶಗಳೊಂದಿಗೆ ದುಪ್ಪಟ್ಟು ತೆರಿಗೆ ತಡೆ ಒಪ್ಪಂದ(ಡಿಟಿಎಎ)ಗಳನ್ನು ಮಾರ್ಪಡಿಸಲು ಮಾತುಕತೆಗಳು ನಡೆಯುತ್ತಿವೆ ಎಂದೆಲ್ಲ ಯುಪಿಎ-2 ಸರಕಾರ ಹೇಳುತ್ತಿದೆ. ಡಿಟಿಎಎ ಕುರಿತ ಒಪ್ಪಂದದ ಬಗ್ಗೆ ಭಾರತ ಸ್ವಿಸ್ ಸರಕಾರದೊಂದಿಗೂ ಮಾತುಕತೆ ನಡೆಸುತ್ತಿದ್ದರೂ, ವಾಸ್ತವವಾಗಿ ಇದರಲ್ಲಿ ಪಾರದರ್ಶಕತೆಯ ಅಂಶಗಳನ್ನು ಸೇರಿಸಬೇಕು ಎಂದು ಕೇಳಿದ ಮೊದಲ ಸರಕಾರ ಎಂಬ ಹೆಗ್ಗಳಿಕೆ ಇದ್ದರೂ, ಸ್ವಿಸ್ ಕಾನೂನುಗಳಲ್ಲಿನ ಮೇಲೆ ಹೇಳಿದ 'ಧಾರಕ ತೆರಿಗೆ'ಯ ಕಿಟಕಿಯನ್ನು ತೆರೆಯುವ ಕುರಿತು ಯೋಚಿಸಿದಂತಿಲ್ಲ ಎಂದು ಅಲಿಯಂಸ್ ಸೂದ್ ಎಂಬ ತೆರಿಗೆ ಪಾರದರ್ಶಕತೆ ಹಾಗೂ ಅಂತರ್ರಾಷ್ಟ್ರೀಯ ಹಣಕಾಸು ಮಾರುಕಟ್ಟೆಯ ಅಧ್ಯಯನ ನಡೆಸುವ ಸಂಸ್ಥೆಯ ಮಾರ್ಕ್ ಹೆರ್ಕೆನ್‌ರಾಥ್ ಹೇಳುತ್ತಾರೆ.

★


ಕೇರ್ನ್-ವೇದಾಂತ ವ್ಯವಹಾರ : ಒಎನ್‌ಜಿಸಿಗೆ ಅವಕಾಶ ವಂಚನೆಯೇಕೆ?

9.6 ಬಿಲಿಯ ಡಾಲರ್ ಅಂದರೆ ಸುಮಾರು 43 ಸಾವಿರ ಕೋಟಿ ರೂ.ಗಳ ಈ ವ್ಯವಹಾರದಲ್ಲಿ ಬ್ರಿಟಿಶ್ ಸರಕಾರ ಒತ್ತಡ ತರುತ್ತಿದೆ, ಯುಪಿಎ-2 ಸರಕಾರ ಅದಕ್ಕೆ ತಲೆಬಾಗುತ್ತಿದೆ ಎಂಬ ಬಗ್ಗೆ ಈ ಹಿಂದೆ ಈ ಅಂಕಣದಲ್ಲಿ ಬರೆದಿದ್ದೆವು. ರಾಜಸ್ತಾನದ ತೈಲ ನಿಕ್ಷೇಪಕ್ಕೆ ಸಂಬಂಧಪಟ್ಟ ಕಂಪನಿ ಕೇರ್ನ್ ಇಂಡಿಯ ಬ್ರಿಟನ್ನಿನ ಕಂಪನಿಯ ಭಾರತೀಯ ಅಂಗ ಕಂಪನಿ. ಭಾರತೀಯನೊಬ್ಬ(ಅನಿಲ್ ಅಗರವಾಲ್) ಬ್ರಿಟನ್ನಿನಲ್ಲಿ ಸ್ಥಾಪಿಸಿದ ಕಂಪನಿ ವೇದಾಂತ ರಿಸೋರ್ಸಸ್ ಈ ಕಂಪನಿಯನ್ನು ತನ್ನ ಒಡೆತನಕ್ಕೆ ಸೇರಿಸುವ ಬಗ್ಗೆ ಮಾತುಕತೆಗಳು ನಡೆದಿದ್ದು ವ್ಯವಹಾರ ಕುದುರಿದೆ. ಆದರೆ ಇದಕ್ಕೆ ಇನ್ನೂ ಸರಕಾರದ ಅನುಮತಿ ಸಿಕ್ಕಿಲ್ಲ.

ಈ ವ್ಯವಹಾರದ ಬಗ್ಗೆ ಹಲವು ಪ್ರಶ್ನೆಗಳನ್ನು ಸಿಪಿಐ(ಎಂ) ಸಂಸತ್ ಸದಸ್ಯ ಮತ್ತು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ರಾಜ್ಯಸಭೆಯಲ್ಲಿ ಎತ್ತಿದ್ದರು, ಮೂರು ಪತ್ರಗಳನ್ನು ಪ್ರಧಾನ ಮಂತ್ರಿಗಳಿಗೆ ಬರೆದಿದ್ದರು. ಆದರೆ ಅವುಗಳಿಗೆ ಇದುವರೆಗೂ ಉತ್ತರ ಸಿಕ್ಕಿಲ್ಲ. ಒಎನ್‌ಜಿಸಿ(ತೈಲ ಮತ್ತು ನೈಸರ್ಗಿಕ ಅನಿಲ ನಿಗಮ) ಒಂದು 'ಮಹಾರತ್ನ'ವೆನಿಸಿದ್ದು ಈ ನಿಕ್ಷೇಪಗಳಲ್ಲಿ 30% ಆಸಕ್ತಿ ಹೊಂದಿದೆ. ಇವುಗಳಿಗೆ ರಾಜಧನ ಕೊಡುವ ಹೊರೆ ಇದರ ಮೇಲಿದೆ. ತೈಲ ಮತ್ತು ಅನಿಲ ಆಯಕಟ್ಟಿನ ನೈಸರ್ಗಿಕ ಸಂಪನ್ಮೂಲಗಳು. ಭಾರತೀಯ ಜನತೆ ಇದರ ಮೇಲೆ ಒಡೆತನ ಹೊಂದಿದ್ದಾರೆ. ಆದ್ದರಿಂದ ಈ ಉತ್ಪಾದಕ ಆಸ್ತಿಯನ್ನು ಖರೀದಿಸುವ ಮೊದಲ ಹಕ್ಕು ಇದರದ್ದು. ಆದರೆ ಇದಕ್ಕೆ ಅಡ್ಡಗಾಲು ಹಾಕಿ ಈ ಕ್ಷೇತ್ರದಲ್ಲಿ ಏನೂ ಅನುಭವವಿಲ್ಲದ, ಅಲ್ಲದೆ ಗಣಿಗಾರಿಕೆ

ಪುಟ 15 ಕ್ಕೆ

ಹೊರಗೆ ಹರಿದ ಕಪ್ಪುಹಣ ಎಷ್ಟು?



1948ರಿಂದ 2008ರ ವರೆಗೆ ಭಾರತದಿಂದ 46,200 ಕೋಟಿ ಡಾಲರುಗಳಷ್ಟು ಹಣ ವಿದೇಶಗಳಿಗೆ ಕಳ್ಳತನದಿಂದ ಹರಿದುಹೋಗಿದೆ ಎಂದು ಅಂದಾಜು ಮಾಡಲಾಗಿದೆ. ಈಗ ಭಾರತದ ಕಪ್ಪು ಆರ್ಥಿಕ ಭಾರತದ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದಷ್ಟೇ ಇದೆ. ಅಂದರೆ ಸುಮಾರು 64,000 ಕೋಟಿ ಡಾಲರುಗಳು. ಇದರ 62% ವಿದೇಶಿ ಬ್ಯಾಂಕುಗಳಲ್ಲಿದೆ. ಇದನ್ನು ಭಾರತಕ್ಕೆ ಹಿಂದುರಿಗಿಸಿದರೆ, ಭಾರತದ 45 ಕೋಟಿ ಬಡವರಿಗೆ ಪ್ರತಿಯೊಬ್ಬರಿಗೂ 1ಲಕ್ಷ ರೂ. ಹಂಚಬಹದು, ಇಲ್ಲವೇ ಭಾರತದ ಸಮಸ್ತ ವಿದೇಶಿ ಸಾಲವನ್ನು ಸಂಪೂರ್ಣವಾಗಿ ತೀರಿಸಬಹುದು. ಇದರ ಹೂಡಿಕೆ ಮಾಡಿದರೆ ಬರುವ ಬಡ್ಡಿಯೇ ನಮ್ಮ ವಾರ್ಷಿಕ ಬಜೆಟಿಗಿಂತ ಹೆಚ್ಚು.

ಕಪ್ಪು ಹಣ ಸೃಷ್ಟಿಸುವ ಮಾರ್ಗಗಳು ಯಾವವು?- ಆಮದು/ರಫ್ತುಗಳ ಮೊತ್ತಗಳನ್ನು ಹೆಚ್ಚಾಗಿ ತೋರಿಸುವುದು ಅಥವ ಕಡಿಮೆ ಮಾಡಿ ತೋರಿಸುವುದು, ಇದರಿಂದ ವಂಚಿಸಿದ ಹಣವನ್ನು ವಿದೇಶಿ ಬ್ಯಾಂಕುಗಳಲ್ಲಿ ಇಡುವುದು, ಪ್ರಮುಖ ರಕ್ಷಣಾ/ನಾಗರಿಕ ಕಾಂಟ್ರಾಕ್ಟುಗಳಲ್ಲಿನ ಲಂಚಗಳು, ವಿದೇಶಿ ನಾಡುಗಳಲ್ಲಿ ಗಳಿಸಿದ ಹಣ ಇತ್ಯಾದಿ. ಈ ಹಿಂದೆ ಚಿನ್ನದ ಕಳ್ಳಸಾಗಾಣಿಕೆ, ಕಾನೂನುಬಾಹಿರ ಹಣ ವರ್ಗಾವಣೆ, ಹವಾಲಾ, ಪ್ರತಿಷ್ಠಿತರು ವಿದೇಶಗಳಲ್ಲಿ ಗಳಿಸಿದ ಹಣ ಇತ್ಯಾದಿ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಯುಪಿಎ ದರ್ಬಾರ್......

ಪುಟ 13 ರಿಂದ

ಮುಂತಾದವುಗಳಲ್ಲಿ ವಿವಾದಾತ್ಮಕ ಚಟುವಟಿಕೆಗಳ ದಾಖಲೆ ಮಾಡಿರುವ ಕಂಪನಿಗೆ ಅವಕಾಶ ಕಲ್ಪಿಸುವುದು ಸರಿಯೇ ಎಂಬುದು ಅವರು ಎತ್ತಿದ್ದ ಒಂದು ಬಹುಮುಖ್ಯ ಪ್ರಶ್ನೆ.

ವೇದಾಂತ ಕಂಪನಿ ಈ ವ್ಯವಹಾರದಲ್ಲಿ ಕೇರ್ನ್‌ಗೆ ಕೊಡಲು ಸಿದ್ಧವಿರುವ ಮೊತ್ತ ಒಎನ್‌ಜಿಸಿ ಮಾಡಿರುವ ಮೌಲ್ಯಮಾಪನಕ್ಕಿಂತ ಹೆಚ್ಚಿದೆ ಎಂದು ಒಎನ್‌ಜಿಸಿ ಆಡಳಿತ ಮಂಡಳಿ ಹೇಳಿರುವುದಾಗಿ ತೈಲ ಮತ್ತು ಪೆಟ್ರೋಲಿಯಂ ಮಂತ್ರಾಲಯ ಈಗ ಹೇಳುತ್ತಿದೆ. ಆದರೆ ಈ ಮೌಲ್ಯಮಾಪನದಲ್ಲಿ ಪಾರದರ್ಶಕತೆ ಇಲ್ಲ, ದಿನಕ್ಕೆ 2.4ಲಕ್ಷ ಬ್ಯಾರೆಲ್‌ಗಳಷ್ಟು, ಅಂದರೆ ದೇಶದ ಪ್ರಸಕ್ತ ಕಚ್ಚಾತೈಲ ಉತ್ಪಾದನೆಯ 25% ದಷ್ಟು ಒದಗಿಸಬಲ್ಲ ಈ ನಿಕ್ಷೇಪಗಳನ್ನು, ಕನಿಷ್ಟ 800 ಕೋಟಿ ಡಾಲರುಗಳ ಆದಾಯ ಕೊಡಬಲ್ಲ ಒಂದು ರಾಷ್ಟ್ರೀಯ ಆಸ್ತಿಯನ್ನು ಪಡೆಯುವುದು ಪ್ರಯೋಜನಕಾರಿಯಲ್ಲ ಎಂಬ ಮೌಲ್ಯಮಾಪನ ಪ್ರಶ್ನಾರ್ಹ. ಇದರ ಮರುಪರಿಶೀಲನೆ ಅಗತ್ಯ ಎಂದು ತಪನ್ ಸೇನ್ ಜೂನ್ 3 ರಂದು ಪ್ರಧಾನ ಮಂತ್ರಿಗಳಿಗೆ ಬರೆದ ಮತ್ತೊಂದು ಪತ್ರದಲ್ಲಿ ಹೇಳಿದ್ದಾರೆ. ಈ ತೈಲ ಕ್ಷೇತ್ರದ ಮೌಲ್ಯ ಮಾಪನವನ್ನು ಸಿಎಜಿ ನಡೆಸಬೇಕು ಎಂದು ಅವರು ತಮ್ಮ ಹಿಂದಿನ ಪತ್ರದಲ್ಲಿ ಆಗ್ರಹಿಸಿದ್ದರು.


ಒಎನ್‌ಜಿಸಿ ಈ ನಿಕ್ಷೇಪಗಳನ್ನು ವಹಿಸಿಕೊಳ್ಳಲು ಪ್ರಧಾನ ಮಂತ್ರಿಗಳ ಕಚೇರಿ ಎತ್ತಿರುವ ಇನ್ನೊಂದು ಆಕ್ಷೇಪವೆಂದರೆ, ಯಥಾಪ್ರಕಾರ 'ಸಂಪನ್ಮೂಲ ಕೊರತೆ'. ಇದು ಮತ್ತಷ್ಟು ಪ್ರಶ್ನಾರ್ಹ. ಏಕೆಂದರೆ ಒಎನ್‌ಜಿಸಿ 1.11 ಲಕ್ಷ ಕೋಟಿ ಮೀಸಲು ಹೊಂದಿರುವ, ಕಳೆದ ಮಾರ್ಚ್‌ನಲ್ಲಿ 18,000 ಕೋಟಿ ರೂ. ಲಾಭ ಗಳಿಸಿರುವ ರಾಷ್ಟ್ರೀಯ ಸಂಸ್ಥೆ. ಅಲ್ಲದೆ, ಈ ಹಿಂದೆ ಹೇಳಿದಂತೆ ಒಎನ್‌ಜಿಸಿ ಈ ಕ್ಷೇತ್ರದಲ್ಲಿ 50 ವರ್ಷಗಳಿಗೂ ಹೆಚ್ಚಿನ ಅನುಭವ ಹೊಂದಿರುವ ಸಂಸ್ಥೆಯಾದರೆ, ವೇದಾಂತ ಹೊಸದಾಗಿ ಈ ರಂಗ ಪ್ರವೇಶಿಸುತ್ತಿರುವ ಅನನುಭವಿ ಖಾಸಗಿ ಕಂಪನಿ.

ಬಹುಶಃ ವೇದಾಂತ ಒಂದು ಖಾಸಗಿ ಕಂಪನಿಯೆಂಬುದಷ್ಟೇ ಯುಪಿಎ–2 ಸರಕಾರ ತಪನ್‌ಸೇನ್ ಮತ್ತು ಇತರ ಸಂಸತ್ ಸದಸ್ಯರು ಎತ್ತಿದ ಗಹನ ಪ್ರಶ್ನೆಗಳಿಗೆ ಮೌನವಾಗಿದ್ದು, ನಿರ್ಲಕ್ಷ್ಯವಾಗಿ ಅವರ ಪ್ರಶ್ನೆಗಳನ್ನು ಬದಿಗೆ ತಳ್ಳುವ ಪ್ರಯತ್ನ ನಡೆಸುತ್ತಿರಲು ಕಾರಣವಿರಬಹುದೇ?

★

ಕೊನೆಗೂ ಅಮೆರಿಕನ್ ವಿಮಾನ ಕಾರ್ಪೊರೇಟ್‌ಗಳ ಪ್ರಶಂಸೆ ಗಿಟ್ಟಿಸಿದ ಯುಪಿಎ–2 ನಿರ್ಧಾರ

ಯುಪಿಎ–2 ಸರಕಾರದ ಭದ್ರತೆ ಕುರಿತ ಸಂಪುಟ ಸಮಿತಿ ಅಮೆರಿಕಾದೊಂದಿಗೆ ಇದುವರೆಗಿನ ಅತಿ ದೊಡ್ಡ ರಕ್ಷಣಾ ವ್ಯವಹಾರ ನಡೆಸಲು ಮಂಜೂರಾತಿ ನೀಡಿದೆ. ಅಮೆರಿಕಾದ ಬೋಯಿಂಗ್ ಕಂಪನಿಯಿಂದ ಹತ್ತು ಸಿ–17 ಎಂಬ ಭಾರೀ ವಿಮಾನಗಳನ್ನು ಅಮೆರಿಕಾದ 'ವಿದೇಶಿ ಮಿಲಿಟರಿ ಮಾರಾಟ'ದ ಮೂಲಕ



ಕೃಪೆ: ದಿ ಹಿಂದೂ

ಭಾರತೀಯ ವಾಯುಪಡೆಗಾಗಿ ಖರೀದಿಸಲಾಗುತ್ತದೆ. 410 ಕೋಟಿ ಡಾಲರುಗಳ ಈ ವ್ಯವಹಾರ ಇದುವರೆಗೆ ಅಮೆರಿಕಾದೊಂದಿಗೆ ಮಾಡಿಕೊಂಡ ಅತಿ ದೊಡ್ಡ ರಕ್ಷಣಾ ವ್ಯವಹಾರ.

ಕೆಲವು ದಿನಗಳ ಹಿಂದೆ 1110 ಕೋಟಿ ಡಾಲರುಗಳ ವಿಮಾನ ವ್ಯವಹಾರ ತಮ್ಮ ಕೈಸೇರದ ಬಗ್ಗೆ ಅಮೆರಿಕನ್ ಕಾರ್ಪೊರೇಟ್‌ಗಳಿಗೆ, ಅವುಗಳ ಹಿತರಕ್ಷಣೆಗಾಗಿ ಭಾರತದೊಂದಿಗೆ 'ಭದ್ರತಾ ವ್ಯವಹಾರ' ನಡೆಸಿರುವ ಅಲ್ಲಿಯ ಆಳರಸರಿಗೆ ಬಹಳ ಕೋಪ ಬಂದಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ವ್ಯವಹಾರಕ್ಕೆ ಮಂಜೂರಾತಿಯೊಂದಿಗೆ ಆ ಕೋಪವನ್ನು ಬಹಳಷ್ಟು ತಗ್ಗಿಸುವಲ್ಲಿ ಯುಪಿಎ–2 'ಯಶಸ್ವಿ'ಯಾಗಿರುವಂತೆ ಕಾಣುತ್ತಿದೆ. 'ಅಮೆರಿಕಾ ಭಾರತ ವ್ಯಾಪಾರ ಮಂಡಳಿ' ಇದು ಸ್ವಾಗತಾರ್ಹ ನಿರ್ಧಾರ, ರಕ್ಷಣಾ ವ್ಯವಹಾರಗಳಲ್ಲಿ ಅಮೆರಿಕಾವನ್ನು ದೀರ್ಘಾವಧಿ ಪಾಲುದಾರನಾಗಿಸಿಕೊಳ್ಳುವ ವಿಶ್ವಾಸವನ್ನು ಭಾರತ ಹೊಂದಿದೆ ಎಂಬುದಕ್ಕೆ ಇದು ಸಾಕ್ಷಿ ಎಂದು ಪ್ರಶಂಸಿಸಿದೆ.

ಭಾರತ ಸರಕಾರದ ಈ ಆರ್ಡರ್ ಬರದಿದ್ದರೆ, ಬೋಯಿಂಗ್ ಕಂಪನಿಗೆ ಡಿಸೆಂಬರ್ 2012ರ ನಂತರ ಕೆಲಸವಿರುತ್ತಿರಲಿಲ್ಲ, ಈ ವ್ಯವಹಾರ 5800 ಕೋಟಿ ಡಾಲರುಗಳ ವಾರ್ಷಿಕ ಆರ್ಥಿಕ ಪರಿಣಾಮ ಹೊಂದಿದ್ದು, ಸಿ–17 ಉತ್ಪಾದನೆಯಲ್ಲಿ ತೊಡಗಿರುವ 25,000 ಅಮೆರಿಕನ್ ಉದ್ಯೋಗಗಳು ಉಳಿಯುವಂತಾಗಿದೆ ಎಂದು ಬೋಯಿಂಗ್ ಕಂಪನಿಯ ವಕ್ತಾರರು ಹೇಳಿದ್ದಾರೆ. ಯುಪಿಎ–2 ಬೆನ್ನುತಟ್ಟಿಕೊಳ್ಳಬೇಕಾದ್ದೇ!

★

ಯುಪಿಎ ಮಂತ್ರಿಯ ಒತ್ತಡ ನಿಜ– ಯುಪಿಎ–2ಗೆ ಇನ್ನೊಂದು ಮುಜುಗರ

2004ರಿಂದ 2007ರ ವರೆಗೆ ಯುಪಿಎ ದೂರಸಂಪರ್ಕ ಮಂತ್ರಿಯಾಗಿದ್ದ ಮತ್ತು ಹಾಲಿ ಯುಪಿಎ–2 ಜವಳಿ ಮಂತ್ರಿ ದಯಾನಿಧಿ ಮಾರನ್ ಮತ್ತು ಆತನ ಸೋದರ ಕಲಾನಿಧಿ ಮಾರನ್ ಏರ್‌ಸೆಲ್ ಶೇರುಗಳನ್ನು ಮಾಕ್ಸಿಸ್ ಕಂಪನಿಗೆ ಮಾರಲು ತನ್ನ ಮೇಲೆ ಒತ್ತಡ ಹೇರಿದ್ದು ನಿಜವೆಂದು ಸ್ಟರ್ಲಿಂಗ್ ಕಂಪನಿ ಗುಂಪಿನ ಅಧ್ಯಕ್ಷ ಸಿ.ಶಿವಶಂಕರನ್ ಸಿಬಿಐ ವಿಚಾರಣೆಯಲ್ಲಿ ಒಪ್ಪಿಕೊಂಡಿರುವದಾಗಿ ವರದಿಯಾಗಿದೆ.

ಆದರೆ ಮಾರನ್ ಇದನ್ನು ಮತ್ತೆ ನಿರಾಕರಿಸಿದ್ದಾರೆ. ಏರ್‌ಸೆಲ್ ಕಂಪನಿ ಬಹಳ ವರ್ಷಗಳಿಂದ ಮಾರಾಟಕ್ಕಿತ್ತು, ಅಲ್ಲದೆ, ಶಿವಶಂಕರನ್ ಆಪಾದನೆ ನಿಜವಾಗಿದ್ದರೆ ಆರು ವರ್ಷಗಳ ಹಿಂದೆಯೇ, ತಾನು ಯುಪಿಎ ಸರಕಾರದಿಂದ ಹೊರಗಿದ್ದಾಗ ಆತ ಏಕೆ ಇದನ್ನು ಪ್ರಧಾನಿಗಳ ಗಮನಕ್ಕೆ ತರಲಿಲ್ಲ ಎಂದು ತನ್ನನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ಆದರೆ ಈ ಸುದ್ದಿ ಯುಪಿಎ–2 ಮುಜುಗರವನ್ನು ಹೆಚ್ಚಿಸಿದೆ. ರಾಮಲೀಲಾ ಮೈದಾನದ ಕಾರ್ಯಾಚರಣೆಗೆ ಭಾರೀ ಟೀಕೆಗೊಳಗಾಗಿರುವ ಅದರೊಳಗೂ ಇನ್ನೊಬ್ಬ ಮಂತ್ರಿಯ ರಾಜೀನಾಮೆ ಅನಿವಾರ್ಯವಾಗುತ್ತಿದೆ ಎಂಬ ಭಾವನೆ ಬಲಗೊಳ್ಳುತ್ತಿದೆ ಎಂದು ವರದಿಯಾಗಿದೆ.

ಜೂನ್ 23: ಪೆಟ್ರೋಲ್ ಬೆಲೆಯೇರಿಕೆಯ ವಿರುದ್ಧ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿಭಟನೆ

ಯುಪಿಎ–2 ಸರಕಾರ ದುಡಿಯುವ ಜನತೆಯ ಆತಂಕಗಳಿಗೆ ಸ್ಪಂದಿಸುತ್ತಲೇ ಇಲ್ಲ ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತೊಮ್ಮೆ ತಮ್ಮ ತೀವ್ರ ಬೇಸರವನ್ನು ವ್ಯಕ್ತಪಡಿಸಿವೆ. ವಿಶೇಷವೆಂದರೆ ಯುಪಿಎಗೆ ನೇತೃತ್ವ ನೀಡಿರುವ ಕಾಂಗ್ರೆಸಿಗೆ ಸೇರಿರುವ ಇಂಟಕ್ ಕಚೇರಿಯಲ್ಲಿಯೇ ಮೇ 29ರಂದು ನಡೆದ ಕೇಂದ್ರ ಕಾರ್ಮಿಕ ಸಂಘಗಳ ಮುಖಂಡರ ಸಭೆಯಲ್ಲಿ ಈ ಭಾವನೆ ವ್ಯಕ್ತವಾಗಿದೆ. ಇಂಟಕ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆ ಕಾರ್ಮಿಕರ ಐಕ್ಯತೆಯನ್ನು ಇನ್ನಷ್ಟು ವಿಸ್ತರಿಸಿ ಐಕ್ಯ ಹೋರಾಟಗಳನ್ನು ನಡೆಸಲು ನಿರ್ಧರಿಸಿದೆ.

ಇದರ ಭಾಗವಾಗಿ ಪೆಟ್ರೋಲ್ ಬೆಲೆಯೇರಿಕೆಯ ಮತ್ತು ಇತರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆಯ ಯೋಚನೆಯ ವಿರುದ್ಧ ಕಾರ್ಮಿಕರ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಲು ಜೂನ್ 23ರಂದು ಎಲ್ಲ ಕೆಲಸದ ಸ್ಥಳಗಳಲ್ಲಿ, ರಾಜ್ಯಗಳ ರಾಜಧಾನಿಗಳಲ್ಲಿ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಮತಪ್ರದರ್ಶನ, ರ್‍ಯಾಲಿ, ಧರಣಿಗಳನ್ನು ನಡೆಸಲು ಈ ಸಭೆ ಎಲ್ಲ ಕಾರ್ಮಿಕರಿಗೆ ಕರೆ ನೀಡಿದೆ.

ಆದರೆ ಈ ನಡುವೆಯೂ ಯುಪಿಎ–2 ಸರಕಾರ ಜೂನ್ 16 ರಂದು ಮತ್ತೊಮ್ಮೆ ಪೆಟ್ರೋಲ್ ಬೆಲೆ ಏರಿಸುವ ಬಗ್ಗೆ ಯೋಚಿಸುತ್ತಿದೆ ಎಂದು ವರದಿಯಾಗಿದೆ. ●

....ಹೋರಾಟವೆಂಬ ಪ್ರಹಸನ

ಪುಟ 8 ರಿಂದ

ಇದೇ ಬಾಬಾ ಕೂಗಾಡಿ ಅಣ್ಣಾ ಹಜಾರೆ ಮತ್ತು ಈ ಸಮಿತಿಯನ್ನು ದುರ್ಬಲಗೊಳಿಸಲು ಪ್ರಯತ್ನಿಸಿದ್ದರು. ಆದರೀಗ ಇದೇ ಬಾಬಾ ತಾನು ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತೇನೆಂದು ಘೋಷಿಸಿಕೊಂಡು ಆರೆಸ್ಸೆಸ್ ಮತ್ತು ಬಿಜೆಪಿ ಕಾರ್ಯಕರ್ತರ ಒಡಗೂಡಿದ್ದಾರೆ.

ಜನತೆಯ ಹೋರಾಟದಿಂದ ಭ್ರಷ್ಟಾಚಾರ ನಿಯಂತ್ರಣ :

ಕಳೆದ ನಾಲ್ಕು ದಶಕಗಳಿಂದ ಭ್ರಷ್ಟಾಚಾರ ನಿಯಂತ್ರಿಸುವ ಜನಲೋಕ ಪಾಲ್ ಮಸೂದೆಯನ್ನು ಜಾರಿತರುವಲ್ಲಿ ಸತತವಾಗಿ ಬಂದ ಸರ್ಕಾರಗಳು ತಮಗೆ ಇಚ್ಛಾ ಶಕ್ತಿ ಇಲ್ಲವೆಂದು ಸಾಬೀತುಪಡಿಸಿವೆ. ಈ ಹಿಂದೆ 3 ಸಲ ಸಿಪಿಐ(ಎಂ) ಪಕ್ಷದ ಒತ್ತಡದಿಂದ ಈ ಕರಡು ಮಸೂದೆ ಕುರಿತು ಪಾರ್ಲಿಮೆಂಟ್‌ನಲ್ಲಿ ಚರ್ಚೆ ನಡೆದಿವೆ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳೆರಡೂ ಭ್ರಷ್ಟಾಚಾರಿಗಳ ಮತ್ತು ಚಮಚಾ ಬಂಡವಾಳಶಾಹಿಗಳ ಪ್ರತಿನಿಧಿಗಳಾಗಿರುವುದರಿಂದ ಇಂಥಹ ಬಲಿಷ್ಠ ಭ್ರಷ್ಟಾಚಾರ–ವಿರೋಧಿ ಮಸೂದೆಯನ್ನು ಅವು ಮೂಲೆಗೆ ತಳ್ಳುತ್ತಿವೆ.

ದೇಶದ ದುಡಿಯುವ ಜನತೆಯ ಕಷ್ಟ ಪರಿಹರಿಸಲು ಜನ ಚಳುವಳಿಗಳನ್ನು ತೀವ್ರಗೊಳಿಸುವ ಮೂಲಕ ಭ್ರಷ್ಟಾಚಾರದ ಮೂಲಕ ಸೋರಿಹೋಗುತ್ತಿರುವ ಹಣವನ್ನು ನಿಯಂತ್ರಿಸಲು ತುರ್ತು ಕಾರ್ಯೋನ್ಮುಖರಾಗಬೇಕಿದೆ. ●

ಜಗದಗಲ

ಶರತ್‌ಚಂದ್ರ

ನೇಪಾಳದ ಸಂವಿಧಾನ ರಚನಾ ಸಭೆ ಮತ್ತೆ ಮೂರು ತಿಂಗಳ ವಿಸ್ತರಣೆ

ನೇಪಾಳದ ಸಂವಿಧಾನ ತಯಾರಿಸಲು ಗಡುವು ಮತ್ತು ಅದಕ್ಕೆ ಚುನಾಯಿತವಾದ ಸಂವಿಧಾನ ಸಭೆಯ "ಜೀವಾವಧಿ" ಮೇ 28 ರಂದು ಮುಗಿಯಲಿತ್ತು. ಆ ಗಡುವಿನ ಕೊನೆಗಳಿಗೆಯಲ್ಲಿ ನೇಪಾಳದ ಪ್ರಮುಖ ರಾಜಕೀಯ ಪಕ್ಷಗಳು ಒಂದು ಒಪ್ಪಂದಕ್ಕೆ ಬಂದಿವೆ. ಸಂವಿಧಾನ ಸಭೆಯ "ಜೀವಾವಧಿ" ಯನ್ನು ಮೂರು ತಿಂಗಳಷ್ಟು ವಿಸ್ತರಿಸಲಾಗಿದೆ. ಮೂರು ತಿಂಗಳ ಒಳಗೆ ಶಾಂತಿ ಪ್ರಕ್ರಿಯೆಯ ಎಲ್ಲಾ ಕ್ರಮಗಳನ್ನು ಮತ್ತು ಈ ಬಗೆಗಿನ ಹಿಂದಿನ ಎಲ್ಲಾ ಕ್ರಮಗಳನ್ನು ಜಾರಿ ಮಾಡುವ ಐದು ಅಂಶಗಳ ಕಾರ್ಯಕ್ರಮಕ್ಕೂ ಒಪ್ಪಲಾಗಿದೆ. ಈಗಿನ ಪ್ರಧಾನಿ ಝಲನಾಥ್ ಖನಾಲ್ ರಾಜೀನಾಮೆ ಕೊಟ್ಟು ರಾಷ್ಟ್ರೀಯ ಸರ್ಕಾರ ಸ್ಥಾಪಿಸುವುದಕ್ಕೂ ಒಪ್ಪಂದ ಆಗಿದೆ.

ಆದರೆ ಮೂರು ತಿಂಗಳ ಒಳಗೆ ಇವೆಲ್ಲಾ ಆಗುತ್ತದೋ ಎಂದು ಕಾದು ನೋಡಬೇಕು. ಈ ಆತಂಕಕ್ಕೆ ಕಾರಣ ಇದೆ. ಮೇ 2010 ರಲ್ಲಿ ಸಂವಿಧಾನ ಸಭೆಯ "ಜೀವಾವಧಿ"ಯನ್ನು ಒಂದು ವರ್ಷದಷ್ಟು ವಿಸ್ತರಿಸಿಲಾಗಿತ್ತು, ಈ ಒಂದು ವರ್ಷದಲ್ಲಿ ಸ್ವಲ್ಪ ಪ್ರಗತಿ ಆಗಿದ್ದರೂ, ಎಲ್ಲ ಅಂಶಗಳ ಜಾರಿ ಸಾಧ್ಯವಾಗಿರಲಿಲ್ಲ. ಮಾವೋವಾದಿಗಳ ಸಶಸ್ತ್ರ ಪಡೆಗಳನ್ನು ಸೈನ್ಯದ ಜತೆ ಸೇರಿಸುವ, ಸರ್ಕಾರದ ಮತ್ತು ಒಕ್ಕೂಟದ ಸ್ವರೂಪದ ಬಗ್ಗೆ ಮೂರು ಪ್ರಮುಖ ರಾಜಕೀಯ ಪಕ್ಷಗಳಾದ ಕಮ್ಯುನಿಸ್ಟ್, ಕಾಂಗ್ರೆಸ್ ಮತ್ತು ಮಾವೋವಾದಿಗಳ ನಡುವೆ ಸಹಮತ ಇರಲಿಲ್ಲ. ಈ ಮೂರು ಪಕ್ಷಗಳ ಒಳಗೂ ಎರಡು ಪ್ರಮುಖ ಅಭಿಪ್ರಾಯಗಳಿವೆ. ಅದರಿಂದಾಗಿ ಅವಧಿ ಮುಗಿದರೂ ಸಂವಿಧಾನ ಸಿದ್ಧವಾಗಿರಲಿಲ್ಲ.

ಗೆರಿಲ್ಲಾಗಳು ಸೈನ್ಯ ಸೇರುವ ಬಗ್ಗೆ ವಿವಾದ

ಮಾವೋವಾದಿ ಗೆರಿಲ್ಲಾಗಳನ್ನು ನೇಪಾಳಿ ಸೈನ್ಯದಲ್ಲಿ ಸೇರಿಸುವ ಬಗೆಗಿನ ಮುಖ್ಯ ಅಂಶದ ಬಗ್ಗೆ ಒಪ್ಪಂದ ಆಗಿದೆ. ಗೆರಿಲ್ಲಾ ಸೈನಿಕರನ್ನು ಅವರ ವಯಸ್ಸು, ಶಿಕ್ಷಣ, ಅನುಭವ, ಕ್ಷಮತೆ ಆಧಾರದಲ್ಲಿ ವೈಯಕ್ತಿಕವಾಗಿ ನೇಪಾಳೀ ಸೈನ್ಯದಲ್ಲಿ ಸೇರಿಸಬೇಕು ಅಂತ ಅಲ್ಲಿಯ ಕಮ್ಯುನಿಸ್ಟ್ ಪಕ್ಷ ಹಾಗೂ ನೇಪಾಳಿ-ಕಾಂಗ್ರೆಸ್ ಒತ್ತಾಯ. ಇಡಿಯ ಮಾವೋವಾದಿ ಗೆರಿಲ್ಲಾ ತುಕಡಿಗಳನ್ನು ಹಾಗೆಯೇ ನೇಪಾಳೀ ಸೈನ್ಯದ ತುಕಡಿಗಳಿಗೆ ತಕ್ಕ ಪ್ರಮಾಣದಲ್ಲಿ ಸೇರಿಸಬೇಕು ಅಂತ ಮಾವೋವಾದಿಗಳ ಒತ್ತಾಯ. ಮಾವೋವಾದಿ ಗೆರಿಲ್ಲಾಗಳು ಪ್ರಜಾಸತ್ತೆಗೆ ಮತ್ತು ತಮಗೆ ದೊಡ್ಡ ಅಪಾಯ ಎಂಬುದು ಕಮ್ಯುನಿಸ್ಟ್-ಕಾಂಗ್ರೆಸ್ ಪಕ್ಷಗಳ ಧೋರಣೆ. ಮಾವೋವಾದಿಗಳು ಸಹ ಗೆರಿಲ್ಲಾಗಳು ತಮ್ಮ ಅಧಿಕಾರ-ಪ್ರಭಾವಗಳ ಮುಖ್ಯ ನೆಲೆ. ಅವರನ್ನು ಚೌಕಾಶಿಯ ದಾಳವಾಗಿ ಬಳಸುವುದು ಅಗತ್ಯ ಅಂತ ತಪ್ಪಾಗಿ ಗ್ರಹಿಸಿದ್ದಾರೆ.



ಇದೇ ಸಮಸ್ಯೆಯ ಮೂಲ. ಈ ನಡುವೆ ಮಾಧೇಸಿಗಳಿಗೂ ಸೈನ್ಯದಲ್ಲಿ ತಕ್ಕ ಪ್ರಮಾಣದಲ್ಲಿ ಅವಕಾಶ ಇರಬೇಕು ಎಂಬ ಬೇಡಿಕೆ ಬಂದಿದ್ದು ಅದನ್ನು ಅಂಗೀಕರಿಸಲಾಗಿದೆ.

ಗೆರಿಲ್ಲಾಗಳನ್ನು ಸೈನ್ಯದಲ್ಲಿ ಸೇರಿಸುವ ವಿಚಾರಕ್ಕೆ ಅತಿಯಾದ ಪ್ರಾಶಸ್ತ್ಯ ನೀಡಿ, ಪ್ರಜಾಪ್ರಭುತ್ವ (ಪಕ್ಷಗಳ ಓಟಿನ ಪ್ರಮಾಣ ಅಥವಾ ಕ್ಷೇತ್ರದಲ್ಲಿ ಅತಿ ಹೆಚ್ಚು ಮತ ಅಥವಾ ಮಿಶ್ರಿತ) ಪದ್ಧತಿ, ಒಕ್ಕೂಟದ ಸ್ವರೂಪ ಮುಂತಾದ ವಿವರವಾಗಿ ಚರ್ಚೆಯಾಗಬೇಕಾಗಿದ್ದ ಮುಖ್ಯ ವಿಚಾರಗಳು ಮೂಲೆಗೆ ಸರಿದಿವೆ. ಸಕಾಲದಲ್ಲಿ ಸಂವಿಧಾನ ರೂಪಿಸಿ ಪ್ರಜಾಸತ್ತೆಯನ್ನು ಬಲವಾಗಿ ಕಟ್ಟುವ ಬಗ್ಗೆ ಮೂರೂ ಪಕ್ಷಗಳು ಬದ್ಧತೆ ತೋರಿಸಿಲ್ಲ. ಈ ಮೂರೂ ಪಕ್ಷಗಳಲ್ಲಿ ಒಂದು ವಿಭಾಗ ಪ್ರಜಾಸತ್ತಾತ್ಮಕ ಸಹಮತ ರೂಪಿಸುವ ಪರವಾಗಿದ್ದರೆ, ಇನ್ನೊಂದು ವಿಭಾಗ ಉಳಿದ ಪಕ್ಷಗಳ ಬಗ್ಗೆ ಅನುಮಾನ-ಅಸಹನೆ ತೋರಿಸುತ್ತಾ ತಮ್ಮ ಪಕ್ಷದ ಈಗಿನ ಬಲ ಬಳಸಿ ಅಧಿಕಾರ ಹಿಡಿಯುವುದು ಹೇಗೆ ಎಂಬ ಸಂದರ್ಭಸಾಧಕ ರಾಜಕೀಯದಲ್ಲಿ ತೊಡಗಿದೆ.

ನೇಪಾಳದಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಅಗತ್ಯ ಬೆಂಬಲ ಕೊಡಬೇಕಾಗಿದ್ದ ಭಾರತ ಸರ್ಕಾರ ಸಹ ಸಂದರ್ಭಸಾಧಕ ನೀತಿ ಅನುಸರಿಸಿದೆ. ಮಾವೋವಾದಿ ಸರ್ಕಾರ ಬರದಂತೆ ಏನಕೇನ ಪ್ರಕಾರೇಣ ಪ್ರಯತ್ನ ಮಾಡುತ್ತಿದೆ. ಅದಕ್ಕೆ ಕಾಂಗ್ರೆಸ್ ಮತ್ತು ಮಾಧೇಸಿ ಪಕ್ಷಗಳ ಮೇಲಿರುವ ತಮ್ಮ ಪ್ರಭಾವ ಬಳಸುತ್ತಿದೆ. ಮಾವೋವಾದಿ ಸರ್ಕಾರ ಚೀನಾದತ್ತ ವಾಲುತ್ತದೆ. ಅದು ಭಾರತದ ರಣನೀತಿಯ ಯೋಜನೆಗೆ ಅಡ್ಡಿ ಎಂಬ ತಪ್ಪು ಪರಿಕಲ್ಪನೆಯೇ ಇದಕ್ಕೆ ಕಾರಣ. ನೇಪಾಳದಲ್ಲಿ ಯಾವುದೇ ಸರ್ಕಾರ ಬಂದರೂ ಎರಡೂ ದೊಡ್ಡ ನೆರೆಯ (ಚೀನಾ ಮತ್ತು ಭಾರತ) ದೇಶಗಳ ಜತೆ ಸೌಹಾರ್ದ ಸಂಬಂಧ ಹೊಂದುವುದು ಅನಿವಾರ್ಯ. ಭಾರತ-ಪರ ಚೀನಾ-ವಿರೋಧಿ ನೇಪಾಳಿ ಸರ್ಕಾರ ಭಾರತದ ರಣ ನೀತಿಯ ಯೋಜನೆಗೆ ಅಗತ್ಯ ಎಂಬ ನಿಲುವು ಅಸಾಧು ಮಾತ್ರವಲ್ಲ. ಅಸಾಧ್ಯ ಸಹ. ನೇಪಾಳೀ ಪ್ರಜಾಸತ್ತೆ ಬಲ ಪಡಿಸುವ ಮತ್ತು ಅದರ ಆಂತರಿಕ ವಿಚಾರಗಳಲ್ಲಿ ಮೂಗು ತೂರಿಸದಿರುವ ನೀತಿಯನ್ನು ಭಾರತ ಸರ್ಕಾರ ಮತ್ತೆ ಅಂಗೀಕರಿಸುವುದು ಅಗತ್ಯ.

ಯುದ್ಧದ ಖಾಸಗೀಕರಣ- ಹೀಗೂ ಉಂಟೆ?

ಯು.ಎ.ಇ. (ಯುನೈಟೆಡ್ ಅರಬ್ ಎಮಿರೆಟ್ಸ್) "ರಿಫ್ಲೆಕ್ಸ್ ರೆಸ್ಪೊನ್ಸಸ್" ಎಂಬ ಒಂದು ಕಂಪನಿ ಜತೆ 800 ವಿದೇಶೀ ಬಾಡಿಗೆ ಸೈನಿಕರನ್ನು ಪೂರೈಸಲು 53 ಕೋಟಿ ಡಾಲರುಗಳ ಒಪ್ಪಂದ ಮಾಡಿಕೊಂಡಿದೆ. ಬಾಡಿಗೆ ಸೈನಿಕರ ಸಂಖ್ಯೆಯನ್ನು ಹಲವು ಸಾವಿರಗಳಿಗೆ ಹೆಚ್ಚಿಸುವುದಕ್ಕೂ ಒಪ್ಪಂದದಲ್ಲಿ ಅವಕಾಶ ಮಾಡಲಾಗಿದೆ. ದುಬಾಯಿ ಅಬು ಧಾಬಿ ಮುಂತಾದ ಅಮೀರರ ಆಡಳಿದಲ್ಲಿರುವ ಏಳು ದ್ವೀಪಗಳ ಒಕ್ಕೂಟ. ಈ ಕಂಪನಿಯ ಸ್ಥಾಪಕ ಎರಿಕ್ ಪ್ರಿನ್ಸ್ ಇರಾಕಿ ಯುದ್ಧದಲ್ಲಿ ಬಾಡಿಗೆ ಭದ್ರತಾ ಸಿಬ್ಬಂದಿಯ ಮತ್ತು ಆ ನಂತರದ "ಪುನಃ ಕಟ್ಟುವ" ಕೆಲಸದ ಹಲವು ಕಾಂಟ್ರಾಕ್ಟುಗಳನ್ನು ಪಡೆದು ಕುಖ್ಯಾತವಾದ ಅಮೆರಿಕದ ಬ್ಲಾಕ್ ವಾಟರ್ ಕಂಪನಿಯ ಮಾಜಿ ಅಧಿಕಾರಿ. ಎರಿಕ್ ಬ್ಲಾಕ್ ವಾಟರ್ ನ ಐದು ಇತರ ಅಧಿಕಾರಿಗಳ ವಿರುದ್ಧ ಹಲವು ಕ್ರಿಮಿನಲ್ ಮೊಕದ್ದಮೆಗಳು ಆರಂಭವಾದ ಮೇಲೆ ಯು.ಎ.ಇ.ಗೆ ಬಂದು ನೆಲೆಸಿದ. ಇರಾಕಿನಲ್ಲಿ ನಾಗರಿಕರ ಬೇಕಾಬಿಟ್ಟಿ ಹತ್ಯೆ ಆಪಾದನೆಗೆ ಗುರಿಯಾದ ಬ್ಲಾಕ್ ವಾಟರ್ ನ 17 ಸಿಬ್ಬಂದಿಗಳ ವಿಚಾರಣೆ ನಡೆಯುತ್ತಿದೆ.

ಯು.ಎ.ಇ.ನಲ್ಲಿ ಪ್ರಮುಖ ಕಟ್ಟಡಗಳು ಮತ್ತು ತೈಲ ಸ್ಥಾವರಗಳನ್ನು ಕಾಯುವುದು ಅವರ ಮುಖ್ಯ ಜವಾಬ್ದಾರಿ. ಆಂತರಿಕ ಮತ್ತು ವಿದೇಶೀ ಕಾರ್ಮಿಕರ ದಂಗೆಗಳನ್ನು ಹತ್ತಿಕ್ಕುವುದು ಅವರ ವಿಶೇಷ ಜವಾಬ್ದಾರಿಯಂತೆ. ವಿದೇಶಗಳಲ್ಲಿ ಯು.ಎ.ಇ.ಯ ವಿರೋಧಿ "ವ್ಯಕ್ತಿ, ಗುಂಪು ಮತ್ತು ಉಪಕರಣಗಳನ್ನು ನಾಶ ಮಾಡುವುದು" ಸಹ ಅವರ ಜವಾಬ್ದಾರಿಯಂತೆ. ಈ ಒಪ್ಪಂದ ಹಲವು ಅಂತರ್ರಾಷ್ಟ್ರೀಯ ಕಾನೂನು ಮತ್ತು ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತದೆ. ಈ ಬಾಡಿಗೆ ಸೈನಿಕರಿಗೆ ಯಾವುದೇ ದೇಶದ (ಅಮೆರಿಕನ್ ಸೇರಿದಂತೆ) ಅಂತರ್ರಾಷ್ಟ್ರೀಯ ಕಾನೂನು ಮಾತ್ರವಲ್ಲ ಈ ಪ್ರದೇಶದ ಶಾಂತಿ ಮತ್ತು ಭದ್ರತೆಗೆ ಅಪಾಯ ತಂದಿಡುತ್ತದೆ.

ಇದು ಅರಬ್ ಪ್ರದೇಶಗಳಲ್ಲಿ ಹಬ್ಬುತ್ತಿರುವ ಪ್ರಜಾಸತ್ತಾತ್ಮಕ ಚಳುವಳಿಗೆ ಈ ಪ್ರದೇಶದ 'ಅಮೀರರ" ಸ್ಪಂದನ ಇದ್ದ ಹಾಗೆ ಕಾಣುತ್ತದೆ. ಒಂದು ದೇಶದಲ್ಲಿ ಆಳುವವರ ವಿರುದ್ಧ ಜನ ದಂಗೆ ಎದ್ದಾಗ ಸೈನ್ಯವನ್ನು ಅದನ್ನು ಹತ್ತಿಕ್ಕಲು ಬಳಸಲಾಗುತ್ತದೆ. ಆದರೆ ದಂಗೆಗೆ ವ್ಯಾಪಕ ಜನವಿಭಾಗಗಳ ಬೆಂಬಲ ಇದ್ದಾಗ ಸೈನಿಕರೂ ಅದರಿಂದ ಹೊರತಾಗಿರುವುದಿಲ್ಲ. ಇಂತಹ ದಂಗೆಯಲ್ಲಿ ಸೈನ್ಯದ ಒಂದು ವಿಭಾಗವಾದರೂ ಸೇರಿಕೊಳ್ಳುವುದು ಯಾವುದೆ ಕ್ರಾಂತಿ ಅಥವಾ ಮೂಲಭೂತ ಬದಲಾವಣೆಗೆ ಅಗತ್ಯ ಎಂಬುದನ್ನು ಇತಿಹಾದದಿಂದ ನೋಡುತ್ತೇವೆ. ಇದರಿಂದ ಪಾಠ ಕಲಿತ ತಮ್ಮ ಜನರ ಸಂಪೂರ್ಣ ಬೆಂಬಲ ಕಳೆದುಕೊಂಡಿರುವ ಆಳುವ ವರ್ಗಗಳ ಹೊಸ ಅಪಾಯಕಾರಿ ಹುನ್ನಾರ ಇದು. ಇದು ಮಿಲಿಟರಿ ಕಾರ್ಯಾಚರಣೆಯ ಮಾತ್ರವಲ್ಲ ಯುದ್ಧದ ಹೊರಗುತ್ತಿಗೆಯ ಹೊಸ ಅಪಾಯಕಾರಿ ಅಧ್ಯಾಯ ಆರಂಭಿಸಲಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜಗದಗಲ

ಹುಮಲಾ ವಿಜಯ ಅಮೆರಿಕದ ಬಡ ಜನತೆಗೆ ಎಡ ಶಕ್ತಿ ಮತ್ತು ಸರ್ಕಾರಗಳಿಗೆ ಹರ್ಷ ತಂದರೆ, ಕಾರ್ಪೊರೇಟ್ ಶಕ್ತಿಗಳಿಗೆ ಗಾಬರಿ ತಂದಿದೆ.

ಪೆರುನಲ್ಲಿ 25 ವರ್ಷಗಳ ನಂತರ ಎಡ ಅಧ್ಯಕ್ಷ

ಲ್ಯಾಟಿನ್ ಅಮೆರಿಕದಲ್ಲಿ ಹಬ್ಬುತ್ತಿರುವ ಎಡ ಅಲೆ, ಚಿಲಿಯಲ್ಲಿ ಇತ್ತೀಚೆಗೆ ಆದ ಸಣ್ಣ ಹಿನ್ನಡೆಯನ್ನು ಹಿಮ್ಮೆಟ್ಟಿಸಿ ಮುಂದುವರೆದಿದೆ. ಪೆರುವಿನಲ್ಲಿ ಇತ್ತೀಚೆಗೆ ನಡೆದ ಎರಡನೇ ಸುತ್ತಿನ ಚುನಾವಣೆಯಲ್ಲಿ ಎಡ ಪಂಥೀಯ ಹುಮಲಾ ಶೆ. 51.5 ಮತ ಗಳಿಸಿ ಬಲಪಂಥೀಯ ಅಭ್ಯರ್ಥಿ ಫುಜಿಮೊರಿಯವರನ್ನು ಸೋಲಿಸಿದ್ದಾರೆ. ಮೊದಲ ಸುತ್ತಿನ ಚುನಾವಣೆಯಲ್ಲಿ ಅತ್ಯಧಿಕ ಮತ ಗಳಿಸಿದ್ದ ಹುಮಲಾ ಶೇ. 50 ರಷ್ಟು ಮತ ಗಳಿಸದ್ದರಿಂದ, ಎರಡನೇ ಸುತ್ತಿನ ಚುನಾವಣೆ ನಡೆದಿತ್ತು. ಮಾಜಿ ಮಿಲಿಟರಿ ಅಧಿಕಾರಿಯಾಗಿರುವ ಹುಮಲಾ ಕಳೆದ 25 ವರ್ಷಗಳಲ್ಲೇ ಪೆರುವಿನಲ್ಲಿ ಚುನಾಯಿತರಾದ ಮೊದಲ ಎಡ ಅಧ್ಯಕ್ಷ.

ಭ್ರಷ್ಟಾಚಾರ ಮತ್ತು ಕ್ರಿಮಿನಲ್ ಆಪಾದನೆಗೆ ಶಿಕ್ಷೆ ಅನುಭವಿಸುತ್ತಿರುವ ಮಾಜಿ ಅಧ್ಯಕ್ಷ ಫುಜಿಮೊರಿ ಮಗಳು ಕಿಕೊ ಬಲಪಂಥೀಯ ಅಭ್ಯರ್ಥಿಯಾಗಿದ್ದರು. ಪೆರುವಿನಲ್ಲಿ ಎರಡನೇ ಸುತ್ತಿನ ಚುನಾವಣೆಯಲ್ಲಿ ಎಡ-ಬಲಗಳ ನಡುವೆ ತೀವ್ರ ರಾಜಕೀಯ ವಾಗ್ವಾದ ನಡೆದಿತ್ತು. ಪೆರುನ ಅದ್ಯಕ್ಷೀಯ ಚುನಾವಣೆಯಾದರೂ ಇಡೀ ಲ್ಯಾಟಿನ್ ಅಮೆರಿಕ ಖಂಡ, ಯಾಕೆ ಇಡೀ ಅಮೆರಿಕ ಖಂಡದಲ್ಲೇ ಎಡ-ಬಲಗಳಗಳ ನಡುವೆ ಜನಮತಸಂಗ್ರಹ ನಡೆಯುತ್ತಿದೆಯೋ ಎಂಬಂತೆ



ಪಾಲ್ಗೊಂಡಿದ್ದವು. ಪೆರುನಲ್ಲಿ ಹುಮಲಾ ಗೆದ್ದರೆ ಇಡೀ ಖಂಡದ ಆರ್ಥಿಕಕ್ಕೆ ಅನಾಹುತವಾಗುತ್ತದೆ ಎಂದು ಅಮೆರಿಕನ್ ಸರ್ಕಾರದಿಂದ ಆರಂಭಿಸಿ ಎಲ್ಲಾ ಬಲಪಂಥಿಯ ಶಕ್ತಿಗಳು ಪೆರು ಜನತೆ ಮೇಲೆ ಒತ್ತಡ ಹೇರಿದ್ದರು. ಅಮೆರಿಕನ್ ಸರ್ಕಾರ ಮತ್ತು ಇಡೀ ಖಂಡದ ಬಲಪಂಥೀಯ ಶಕ್ತಿಗಳು ಕಿಕೋಗೆ ಬೆಂಬಲವಾಗಿ ನಿಂತಿದ್ದರು. ಇವೆಲ್ಲಾ ಪ್ರಯತ್ನಗಳಿಂದ ಹುಮಲಾರವರ ಗೆಲುವಿನ ಅಂತರ ಕಡಿಮೆ ಮಾಡಲು ಸಾಧ್ಯವಾಯಿತೇ ವಿನಾ, ಸೋಲಿಸಲು ಸಾಧ್ಯವಾಗಲಿಲ್ಲ.

ಹುಮಲಾ ವಿಜಯ ಅಮೆರಿಕದ ಬಡ ಜನತೆಗೆ ಎಡ ಶಕ್ತಿ ಮತ್ತು ಸರ್ಕಾರಗಳಿಗೆ ಹರ್ಷ ತಂದರೆ, ಕಾರ್ಪೊರೇಟ್ ಶಕ್ತಿಗಳಿಗೆ ಗಾಬರಿ ತಂದಿದೆ. ಪೆರುನ ಶೇರು ಮಾರುಕಟ್ಟೆ ಶೇ. 12 ರೆಕಾರ್ಡ್ ಕುಸಿತ ಕಂಡಿತು. ಪೆರುಗೆ ಹೆಚ್ಚಿನ ಕನೆಕ್ಶನ್ ಇರುವ - ತಾಮ್ರ ಉತ್ಪಾದಕ ಗ್ರುಪೊ ಮೆಕ್ಸಿಕೊ, ಖಂಡದ ತುಂಬಾ ವಿಮಾನಯಾನದಲ್ಲಿ ತೊಡಗಿರುವ ಲಾನ್ ಏರಲೈನ್ಸ್ - ಮುಂತಾದ ಹಲವು ಲ್ಯಾಟಿನ್ ಅಮೆರಿಕನ್ ಕಂಪನಿಗಳ ಶೇರು ಬೆಲೆಗಳು ಕುಸಿದವು. ಇದು ಕಾರ್ಪೊರೆಟುಗಳ ಗಾಬರಿ ಮಾತ್ರ ಅಲ್ಲ, ಹುಮಲಾ ಸರ್ಕಾರದ ಮೇಲೆ ಆರ್ಥಿಕ ನೀತಿಗಳಲ್ಲಿ ಮೂಲಭೂತ ನೀತಿ ತರದಂತೆ ತಡೆಯುವ ಒತ್ತಡ ತಂತ್ರ ಸಹ. ಆದರೆ ಉತ್ತರದ ದೊಡ್ಡಣ್ಣನ ಹಿತ್ತಲು ಆಗಿರಲು ನಿರಾಕರಿಸುವ, ಸ್ವಾತಂತ್ರ್ಯ ಪ್ರಜಾಸತ್ತೆ ಸಮಾನತೆಗಳನ್ನು ಎತ್ತಿ ಹಿಡಿಯುವ ಲ್ಯಾಟಿನ್ ಅಮೆರಿಕ ಜನತೆಯ ಧೃಢ ನಿಶ್ಚಯ ಅಷ್ಟೇ ಅಚಲವಾಗಿದೆ ಎಂದು ಪೆರುನ ಜಯಭೇರಿ ತೋರಿಸಿದೆ.

ವೆನೆಜುವೆಲಾದ ಚವೇಝ್ ಸರ್ಕಾರ ಮತ್ತು ಕ್ಯೂಬಾ ಸೇರಿದಂತೆ ಹಲವು ಎಡ ಸರ್ಕಾರಗಳ ವಿರುದ್ಧ ಅಮೆರಿಕ ಮತ್ತು ಬಲಪಂಥೀಯ ಶಕ್ತಿಗಳ ಕುಮ್ಮಕ್ಕಿನಿಂದ ಭಯೋತ್ಪಾದನೆ ನಡೆಸಿದ ಹಲವಾರು ಭಯೋತ್ಪಾದಕರು ಪೆರುನಲ್ಲಿ ಹಿಂದೆ ರಾಜಕೀಯ ಆಶ್ರಯ ಪಡೆದಿದ್ದರು. ಈ ಭಯೋತ್ಪಾದಕರು ಅವರ ಬೆಂಬಲಿಗರಿಗೆ ಈ ಜಯಭೇರಿ ನಡುಕ ತಂದಿದೆ. ●

ಯೆಮೆನಿನಲ್ಲಿ ಅಂತೂ ಇಂತೂ ಎಂಥ ಬದಲಾವಣೆ?

ಯೆಮೆನಿನ ಅಧ್ಯಕ್ಷ ಅಲಿ ಅಬ್ದುಲ್ಲಾ ಸಾಲೆ ಕೊನೆಗೂ ಅಧಿಕಾರ ಬಿಟ್ಟು ಸೌದಿ ಅರೇಬಿಯಾಕ್ಕೆ ಓಡಿ ಹೋಗಿದ್ದಾನೆ. ಆದರೆ ಅದು ನಡೆದ ರೀತಿ ಯೆಮೆನಿನಲ್ಲಿ ಪ್ರಜಾಸತ್ತೆಗೆ ಮತ್ತು ಸಕಾರಾತ್ಮಕ ಬದಲಾವಣೆಗೆ ಹಾದಿ ಮಾಡಿ ಕೊಡುವ ಹಾಗೆ ಕಾಣುತ್ತಿಲ್ಲ. ವಿರೋಧಿ ಪಡೆಗಳು ಅಧ್ಯಕ್ಷೀಯ ಅರಮನೆ ಮೇಲೆ ನಡೆಸಿದ ರಾಕೆಟ್ ದಾಳಿಯಲ್ಲಿ ಗಾಯಗೊಂಡ ಸಾಲೆಯನ್ನು ಚಿಕಿತ್ಸೆಗೆ ಸೌದಿ ಅರೇಬಿಯ್ಯಾಕ್ಕೆ ಒಯ್ಯಲಾಯಿತು. "ಅರಬ್ ವಸಂತ"ದ ಭಾಗವಾಗಿ ಯೆಮೆನಿನಲ್ಲಿ ಸಾಲೆ ಅಧಿಕಾರ ಬಿಟ್ಟು ಪ್ರಜಾಸತ್ತೆಗೆ ಹಾದಿ ಮಾಡಿಕೊಡಬೇಕೆಂದು ಬೀದಿ ಪ್ರತಿಭಟನೆಗಳು ನಡೆಯುತ್ತಿವೆ. ಉತ್ತರ ಯೆಮೆನಿನ ಅಧ್ಯಕ್ಷನಾಗಿದ್ದು, ಆ ಮೇಲೆ ಏಕೀಕೃತ ಯೆಮೆನಿನಲ್ಲೂ ಅಧಿಕಾರ ಗ್ರಹಣ ಮಾಡಿದ ಸಾಲೆ ಮತ್ತು ಆತನ ದುಷ್ಟಕೂಟ 33 ವರ್ಷಗಳಿಂದ ಆಳುತ್ತಿದೆ. ಈಗಲೂ ಆತ ಅಧಿಕಾರವನ್ನು ದುಷ್ಟಕೂಟದ ಭಾಗವಾಗಿರುವ ಉಪಾಧ್ಯಕ್ಷ ಮತ್ತು ಕುಟುಂಬದ ಸದಸ್ಯರಿಗೆ ಒಪ್ಪಿಸಿ ಹೋಗಿದ್ದಾನೆ. ಚಿಕಿತ್ಸೆಯ ನಂತರ ಮರಳುವ ನಿರೀಕ್ಷೆಯಿದೆ.

ಸಾಲೆಯನ್ನು ಬೆಂಬಲಿಸುವ ಅಮೆರಿಕ, ಸೌದಿ ಅರೇಬಿಯಾ ಮತ್ತು ಕೊಲ್ಲಿ ದೇಶಗಳ ಅಮೆರಿಕನ್ ಬಾಲ ಬಡುಕ ಕೊಲ್ಲಿ ಸಹಕಾರ ಮಂಡಳಿಗಳೂ ಆತ ಅಧಿಕಾರ ಬಿಡದೆ ಬೇರೆ ಹಾದಿ ಇಲ್ಲ ಎಂದು ಆತನಿಗೆ ಎಚ್ಚರಿಸಿವೆ. ಮಧ್ಯಸ್ತಿಕೆ ವಹಿಸಿ ಸಾಲೆಗೆ ಸೌದಿ ಅರೇಬಿಯಾದಲ್ಲಿ ರಾಜಕೀಯ ಆಶ್ರಯ ಕೊಟ್ಟು, ಅಧಿಕಾರವನ್ನು ಮಧ್ಯಂತರ ಸರ್ಕಾರವೊಂದಕ್ಕೆ ವಹಿಸಿ ಕೊಡುವ ಒಪ್ಪಂದ ಮೂರು ಬಾರಿ ಆಗಿದೆ. ಒಪ್ಪಂದದ ಪ್ರಕಾರ ಮಧ್ಯಂತರ ಸರ್ಕಾರ ಮೂರು ತಿಂಗಳೊಳಗೆ ಚುನಾವಣೆ ನಡೆಸಬೇಕು. ಆದರೆ ಮೂರು ಬಾರಿಯೂ ಆತ ಒಪ್ಪಂದ ಮುರಿದು ಅಧಿಕಾರದಲ್ಲಿ ಮುಂದುವರೆದಿದ್ದಾನೆ. ಆತನಿಗೆ ಆಶ್ರಯ ಕೊಟ್ಟಿರುವ ಸೌದಿ ಅರೇಬಿಯಾ ಈಗ ಹೆಚ್ಚಿನ ಒತ್ತಡ ಹಾಕುತ್ತಿದೆ. ಯೆಮೆನ್ ಜತೆ ಗಡಿ ಹೊಂದಿರುವ ಸೌದಿ ಅರೇಬಿಯಾಕ್ಕೂ ಪ್ರಜಾಸತ್ತೆ ಚಳುವಳಿ ಹರಡಬಹುದೆಂಬ ಭೀತಿ ಕಾಡುತ್ತಿದೆ. ಈ ನಡುವೆ ವಿರೋಧಿ ಗೆರಿಲ್ಲಾ ಪಡೆಗಳು ರಾಜಧಾನಿ ಸೇರಿದಂತೆ ಸರ್ಕಾರೀ ಸ್ಥಾವರಗಳ ಮೇಲೆ ತೀವ್ರ ಮಿಲಿಟರಿ ದಾಳಿ ಆರಂಭಿಸಿವೆ.

ಇತರ ಅರಬ್ ದೇಶಗಳಂತೆ ಯುವಕರು ನಿರುದ್ಯೋಗಿಗಳು ಯೆಮೆನಿನಲ್ಲೂ ಚಳುವಳಿ ಆರಂಭಿಸಿದರೂ, ಇಲ್ಲಿ ಅದರ ನಾಯಕತ್ವ ಈಗ ಒಬ್ಬ ಭಾರೀ ಟೆಲಿಕಾಂ ಉದ್ಯಮಿಯ ಕೈಗೆ ಹೋಗಿದೆ. ಹಿಂದೆ ಸಾಲೆ ದುಷ್ಟಕೂಟದ ಭಾಗವಾಗಿದ್ದ ಕೆಲವು ಮಿಲಿಟರಿ ಮತ್ತು ಸರ್ಕಾರಿ ಅಧಿಕಾರಿಗಳೂ ಈ ಉದ್ಯಮಿಗೆ ಸಾಥ್ ಕೊಡುತ್ತಿದ್ದಾರೆ. ಅಲ್ ಖೈದಾ ಸಹ ಇಲ್ಲಿ ಸಾಕಷ್ಟು ಪ್ರಬಲ ಸಂಘಟನೆ ಹೊಂದಿದೆ ಎನ್ನಲಾಗಿದೆ. ಇವರೆಲ್ಲಾ ಈ ಚಳುವಳಿಯನ್ನು ಸಾಲೆ ಬುಡಕಟ್ಟಿಗೆ ಪ್ರತಿಸ್ಪರ್ಧಿ ಆಗಿರುವ ಬುಡಕಟ್ಟಿನ ಚಳುವಳಿಯಾಗಿ ತಿರುಗಿಸಿದ್ದಾರೆ. ಈಗ ಈ ಆಂತರಿಕ ಸಮರ ಬುಡಕಟ್ಟುಗಳ ನಡುವಣ ವೈಷಮ್ಯದ ಮೇಲೆ ಆಧಾರಿತವಾಗಿದೆ. ಇದು ಸಾಲೆ ಅಧಿಕಾರ ಬಿಟ್ಟು ಕೊಟ್ಟರೂ ಎಷ್ಟರ ಮಟ್ಟಿಗೆ ಪ್ರಜಾತಾತ್ಮಕ ಸಕಾರಾತ್ಮಕ ಬದಲಾವಣೆ ತಂದೀತು ಎಂಬುದನ್ನು ಕಾದು ನೋಡಬೇಕಾಗಿದೆ. ●



ಸರ್ವಾಧಿಕಾರಿ ಅಬ್ದುಲ್ಲಾ ಸಾಲೆ ಹಿಲೆರಿ ಕ್ಲಿಂಟನ್ ಜೊತೆ



ಸಿಡಿದೆದ್ದ ಜನ ಸಮೂಹದ ಪ್ರತಿಭಟನೆ

JANASHAKTHI KANNADA VARA PATRIKE JUNE 19, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2010-12
Posted at MBC Bangalore GPO

ಮತ್ತೊಂದು ವಿಶ್ವ ಪರಿಸರ ದಿನಾಚರಣೆ

ಹೆಚ್ಚಲಿದೆ ಕರ್ನಾಟಕದ ತಾಪಮಾನ

ರಾಜಸ್ತಾನದ ನಂತರ ವೈಪರೀತ್ಯ ಭೀತಿ ಕಾಣುವ ಕರ್ನಾಟಕ :

ವಿಶ್ವದೆಲ್ಲೆಡೆ ಕಾರ್ಪೊರೇಟ್ ಕಂಪನಿಗಳಾದಿಯಾಗಿ ಎಲ್ಲ







ಸರ್ಕಾರಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಜೂನ್ 6ರಂದು ಮತ್ತೊಂದು ವಿಶ್ವ ಪರಿಸರ ದಿನಾಚರಣೆ ಆಚರಿಸಲು ಸಿದ್ಧವಾಗುತ್ತಿವೆ. ಇದೇ ಸಮಯದಲ್ಲಿ ಕರ್ನಾಟಕ ಸರ್ಕಾರ ರಚಿಸಿದ್ದ ಬೆಂಗಳೂರು ಹವಾಮಾನ ಬದಲಾವಣೆ ಇನಿಷಿಯೇಟಿವ್ ಕರ್ನಾಟಕ ಎಂಬ ಸಮಿತಿಯು ಸಲ್ಲಿಸಿರುವ ವರದಿ ನಮ್ಮ ರಾಜ್ಯದ ಮೇಲೆ ಉಂಟಾಗುವ ಹವಾಮಾನ್ ವೈಪರೀತ್ಯಗಳ ಅಪಾಯಗಳ ಕುರಿತು ಕರೆಗಂಟೆ ಒತ್ತಿದೆ ಎನ್ನಬಹುದು. ಪರಿಸರ ಸಂರಕ್ಷಣೆ ಮಾಡದೇ ಹೀಗೆ ಸುಮ್ಮನಿದ್ದಲ್ಲಿ 2030 ರ ವೇಳೆಗೆ ನಮ್ಮ ರಾಜ್ಯದ ಶೇ. 38ರಷ್ಟು ಅರಣ್ಯ ನಾಶವಾಗುತ್ತದೆಂದು ಮತ್ತು ರಾಜ್ಯದ ಬಹುತೇಕ ಪ್ರದೇಶಗಳ ಉಷ್ಣಾಂಶ 1.8 ಡಿಗ್ರಿಯಿಂದ 2.2 ಡಿಗ್ರಿವರೆಗೆ ಹೆಚ್ಚಳವಾಗುತ್ತದೆಂದು ಇದು ತಿಳಿಸಿದೆ. ಇಡೀ ದೇಶದಲ್ಲಿ ರಾಜಸ್ತಾನದ ನಂತರ ಹವಾಮಾನ ವೈಪರೀತ್ಯಗಳಿಂದ ಸಂಕಷ್ಟಕ್ಕೀಡಾಗುವ ಎರಡನೇ ರಾಜ್ಯ ಕರ್ನಾಟಕ.

ಋತುಚಕ್ರಗಳ ಅವಧಿಯಲ್ಲಿ ಬದಲಾವಣೆ:

ಮೂರು ಕಾಲಗಳ (ಬೇಸಿಗೆ, ಮಳೆ ಮತ್ತು ಚಳಿಗಾಲ) ಬದಲಾವಣೆ ಮತ್ತು ಈ ಋತುಮಾನಗಳ ಅವಧಿಯಲ್ಲಿ ಉಂಟಾಗುವ ಏರುಪೇರು ಹವಾಮಾನ ಬದಲಾವಣೆಯ ಸೂಚ್ಯಂಕ ಎನ್ನಬಹುದು. ಜಾಗತಿಕ ಪರಿಸರದಲ್ಲಿ ಶಕ್ತಿ ಚಕ್ರದ (ಶಕ್ತಿ ಚಕ್ರವು ಸೌರಶಕ್ತಿ, ವಾಯು, ಒತ್ತಡ, ಉಷ್ಣಾಂಶ ಇವೆಲ್ಲವನ್ನು ಒಳಗೊಂಡಿರುತ್ತದೆ) ಮೇಲೆ ಉಂಟಾಗುವ ಎಲ್ಲ ರೀತಿಯ ಏರುಪೇರುಗಳನ್ನು ಋತುಮಾನದ ಏರುಪೇರುಗಳು ನಮಗೆ ತೋರಿಸಿಕೊಡುತ್ತವೆ. ಹೀಗೆ ಉಂಟಾಗುವ ಏರುಪೇರು ನಮ್ಮ ಜೀವವ್ಯವಸ್ಥೆಯಲ್ಲಿ ಜೀವ ಸಮತೋಲನದ ಮೇಲೆ ದೊಡ್ಡ ಪರಿಣಾಮ ಬೀರುತ್ತವೆ ಮತ್ತು ಕೃಷಿ ಹಾಗೂ ಜಲ ಚಕ್ರದ ಮೇಲೆ ಅಡ್ಡ ಪರಿಣಾಮ ಬೀರುತ್ತದೆ. ಹಲವು ವೈಜ್ಞಾನಿಕ ವಿಧಾನಗಳನ್ನು ಬಳಸಿಕೊಂಡು ಮುಂದಿನ 25 ಅಥವಾ 50 ವರ್ಷಗಳಲ್ಲಿ ಭೂಮಿಯ ಮೇಲೆ ಯಾವ ತಾಪಮಾನ, ಮಳೆ ಪ್ರಮಾಣ ಇರುತ್ತದೆ ಎಂದು ಅಂದಾಜು ಮಾಡಲು ಸಾಧ್ಯ.

ಈ ವರದಿಯು ಏರುತ್ತಿರುವ ಭೂಮಿಯ ತಾಪಮಾನದಿಂದ ಹವಾಮಾನ ವೈಪರೀತ್ಯ, ಬದಲಾಗಲಿರುವ ಹವಾಮಾನ ಸೂಚ್ಯಂಕಗಳು, ಅರಣ್ಯ, ಜಲ ಸಂಪನ್ಮೂಲ ಮತ್ತು ಕೃಷಿ ವಲಯದ ಮೇಲುಂಟಾಗುವ ಅಪಾಯ, ಇದರಿಂದುಂಟಾಗುವ ಸಾಮಾಜಿಕ–ಆರ್ಥಿಕ ಹೊಡೆತಗಳು ಮತ್ತು ಇಂಧನ ಕ್ಷೇತ್ರದಲ್ಲಿ ನಾವು ಮಾಲಿನ್ಯ ತಡೆಗಟ್ಟಲು ಇರುವ ವಿಧಾನಗಳು, ಇತ್ಯಾದಿ ಕುರಿತು ವಿವರಗಳನ್ನು ಒಳಗೊಂಡಿದೆ. ಉದಾಹರಣೆಗೆ, ಸಸ್ಯಜೀವಿಗಳಲ್ಲಿ ಕಂಡುಬರುವ ರೋಗಗಳ ಮೇಲೆ ಹವಾಮಾನ ವೈಪರೀತ್ಯವು ಉಂಟುಮಾಡುವ ದುಷ್ಪರಿಣಾಮವೆಂದರೆ: ಸಸ್ಯ ರೋಗಗಳಿಂದ ನಷ್ಟದ ಮತ್ತಷ್ಟು ಹೆಚ್ಚಳ, ರೋಗ ನಿರ್ವಹಣಾ ತಂತ್ರಗಳಿಗೆ ಮತ್ತಷ್ಟು ವ್ಯಯ, ಸಸ್ಯರೋಗಗಳು ಹೊಸ ಹೊಸ ಭೂಭಾಗಗಳಿಗೆ ಹರಡುವುದು, ಇತ್ಯಾದಿ.

ಉಷ್ಣಾಂಶ ಮತ್ತು ಮಳೆ ಪ್ರಮಾಣದಲ್ಲಿ ಏರುಪೇರು:

2001–07 ರವರೆಗಿನ ಅವಧಿಯಲ್ಲಿ ರಾಜ್ಯದ ಅರಣ್ಯ ಪ್ರದೇಶ ಕಡಿಮೆಯಾಗುತ್ತಾ ಬರುತ್ತಿದ್ದು, ದಟ್ಟ ಅರಣ್ಯ ಪ್ರದೇಶವಂತೂ ಶೇ. 8ರಷ್ಟು ಕಡಿಮೆಯಾಗಿದೆ. ಅಂದರೆ ಕೇವಲ 7 ವರ್ಷಗಳ ಅವಧಿಯಲ್ಲಿ ಸುಮಾರು 2,500 ಚದುರ ಕಿಲೋಮೀಟರ್ ನಷ್ಟು ಅರಣ್ಯ ಪ್ರದೇಶ ನಾಶವಾಗಿದೆ. ಇದಕ್ಕೆ ಹೋಲಿಸಿದರೆ, ಬೆಂಗಳೂರು ನಗರದ ವಿಸ್ತೀರ್ಣ 741 ಚದುರ ಕಿ.ಮೀ ಇದ್ದು, ಬೆಂಗಳೂರು ನಗರದ ವಿಸ್ತೀರ್ಣಕ್ಕಿಂತ 3 ಪಟ್ಟು ಹೆಚ್ಚು ಅರಣ್ಯ ನಾಶವಾಗಿದೆ ಎನ್ನಬಹುದು. 1954ರಿಂದ 2004 ರ 50 ವರ್ಷಗಳ ಅವಧಿಯಲ್ಲಿ ಶೇ. 6 ರಷ್ಟು ಮಳೆ ಬೀಳುವ ಪ್ರಮಾಣ ಕಡಿಮೆಯಾಗಿರುವುದು ಕಳವಳಕಾರಿಯಾದ ಅಂಶ. ಮಳೆ ಏರುಪೇರು ಉಂಟಾಗುವ ಪ್ರದೇಶಗಳೆಂದರೆ: ಚಿಕ್ಕಬಳ್ಳಾಪುರ, ಚಿತ್ರದುರ್ಗ, ಗದಗ, ಕೋಲಾರ, ಮಂಡ್ಯ ಮತ್ತು ತುಮಕೂರು.



ಉಷ್ಣಾಂಶ ಹೆಚ್ಚಳ ಕಂಡುಬರುವ ಜಿಲ್ಲೆಗಳು: ರಾಯಚೂರು, ಬಿಜಾಪುರ, ಗುಲ್ಬರ್ಗಾ ಮತ್ತು ಯಾದಗಿರಿ ಎಂದು ವರದಿ ದಾಖಲಿಸಿದೆ. ಕೃಷ್ಣ ಜಲಾನಯನ ಪ್ರದೇಶದ 6 ಜಿಲ್ಲೆಗಳಲ್ಲಿ ಮಳೆ ಪ್ರಮಾಣದ ಕೊರತೆಯಿಂದ ಆಗಾಗ್ಗೆ ಬರ ಉಂಟಾಗುತ್ತದೆ. ರಾಜ್ಯದ ಎಲ್ಲೆಡೆ ನೀರಿಗಾಗಿ ಆಹಾಕಾರ ಉಂಟಾಗುತ್ತದೆ ಎಂದು ವರದಿ ತಿಳಿಸಿದೆ.

JANASHAKTHI KANNADA VARA PATRIKE: Printed by G.N.NAGARAJ, No 12, 18th Cross, S.R.Nagar, BANGALORE-560027 Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH